ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 24 ಮಂಗಳವಾರ 2023

ಸಂಪುಟ: 43 | ಸಂಚಿಕೆ: 277 | ಪುಟಗಳು: 10

43

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ರಾಜ್ಯದಲ್ಲಿ ಸಿಡಿಯುತ್ತಿವೆ ಭ್ರಷ್ಟಾಚಾರದ ಬಾಂಬ್‌ಗಳು!: ನಾ ಸಾಚಾ... ನೀ ಭ್ರಷ್ಟ...!

ವಿಧಾನಸೌಧದ ಪ್ರತಿ ಗೋಡೆಯೂ ಲಂಚ... ಲಂಚ... ಪಿಸುಗುಡುತ್ತಿವೆ

ಕೋಲಾರ: ವಿಧಾನಸೌಧದ ಪ್ರತಿ ಗೋಡೆಗೂ ಕಿವಿಕೊಡಿ ಅವು ಲಂಚ ಲಂಚ ಎಂದು ಪಿಸುಗುಡುತ್ತವೆ. ಲಂಚವಿಲ್ಲದೆ ಬಿಜೆಪಿ ಸರ್ಕಾರದಲ್ಲಿ ಯಾವುದೇ ಕೆಲಸ ನಡೆಯುಲ್ಲ. ಹೋಟೆಲ್ ಮೆನು ರೀತಿ ವಿಧಾನಸೌಧದಲ್ಲಿ ಇಂಥ ಹುದ್ದೆಗೆ ಇಷ್ಟು ಹಣ ಎಂಬ ಬೋರ್ಡ್ ಹಾಕಿ ಬಿಟ್ಟಿದ್ದಾರೆ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಾ ಪ್ರಹಾರ ನಡೆಸಿದರು.


ಆರ್.ಎಲ್.ಜಾಲಪ್ಪ ಅತಿಥಿ ಗೃಹ ಪಕ್ಕದ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ ಕಾಂಗ್ರೆಸ್ ಪಕ್ಷದ 'ಪ್ರಜಾಧ್ವನಿ' ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ನಾನು ಅಧಿಕಾರದಲ್ಲಿದ್ದಾಗ ಒಂದು ಪೈಸೆ ಹಣ ಪಡೆದಿರುವುದು ಸಾಬೀತಾದರೆ ರಾಜಕೀಯ ನಿವೃತ್ತಿ ಪಡೆದು ಸನ್ಯಾಸ ಸ್ವೀಕರಿಸುತ್ತೇನೆ. ಆದರೆ, ಬಿಜೆಪಿಯರು ಲಜ್ಜೆಗೆಟ್ಟವರು. ಅವರು ಮತ್ತೆ ಅಧಿಕಾರಕ್ಕೆ ಬರಲು ಬಿಡಬಾರದು ಎಂದರು. ಲಂಚ ಕೊಡದೆ ಯಾವುದೇ ಕೆಲಸ ಆಗುತ್ತಿಲ್ಲ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಭ್ರಷ್ಟ ಸರ್ಕಾರ ಹಿಂದೆಂದೂ ಬಂದಿಲ್ಲ. ಪ್ರತಿ



ಯೋಜನೆ, ಗುತ್ತಿಗೆಗಳಲ್ಲಿ ಶೇ. 40 ಕಮಿಷನ್ ಕೊಡಬೇಕಿದೆ ಎಂಬುದಾಗಿ ಗುತ್ತಿಗೆದಾರರೇ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ ಎಂದು ನುಡಿದರು. ಮೂರು ಬಾರಿ ಅಧಿವೇಶನದಲ್ಲಿ 40 ಪರ್ಸೆಂಟೇಜ್ ಬಗ್ಗೆ ಪ್ರಶ್ನೆ ಮಾಡಿದೆ. ಆದರೆ, ಈ ಬಗ್ಗೆ ಮಾತನಾಡಲು, ಚರ್ಚಿಸಲು ಸ್ಪೀಕರ್ ಅವಕಾಶ ಕೊಡುತ್ತಿಲ್ಲ. ಇಂಥ ಸ್ಪೀಕರ್ ನಾನು ಎಂದೂ ನೋಡಿಲ್ಲ ಎಂದು ಟೀಕಿಸಿದರು. ತಾನೂ ತಿನ್ನಲ್ಲ, ತಿನ್ನಲೂ ಬಿಡಲ್ಲ ಎಂಬುದಾಗಿ ಮೋದಿ ಅಧಿಕಾರ ಸ್ವೀಕರಿಸುವಾಗ ▶ 6ನೇ ಪುಟಕ್ಕೆ

ಸಿದ್ದರಾಮಯ್ಯ ಕೋಲಾರದಿಂದ ಸ್ಪರ್ಧಿಸಲ್ಲ: ಡ್ರಾಮ ಮಾಡ್ತಿದ್ದಾರೆ

ಬೆಳಗಾವಿ: ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಕೋಲಾರ ಕ್ಷೇತ್ರದಿಂದ ಸ್ಪರ್ಧಿಸಲ್ಲ. ಸುಮ್ನೆ ರಾಜಕೀಯ ದೊಂಬರಾಟ ಆಡುತ್ತಿದ್ದಾರೆ, ನಾಟಕ ಮಾಡುತ್ತಿದ್ದಾರೆ ಎಂದು ಬಿಜೆಪಿ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕುಟುಕಿದ್ದಾರೆ. ಇಂದು ಬೆಳಗಾವಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಕೋಲಾರದಲ್ಲಿ ನಿಂತರೆ ಸೋಲುವುದು ನಿಶ್ಚಿತ ಅಂತ ಅವರಿಗೂ ಗೊತ್ತಿದೆ. ಹೀಗಾಗಿ ಕೋಲಾರದಲ್ಲಿ ಯಾವ ಕಾರಣಕ್ಕೂ ಅವರು ನಿಲ್ಲಲ್ಲ. ಕೋಲಾರದಲ್ಲಿ ನಾಟಕ, ದೊಂಬರಾಟ ಎಲ್ಲ ಮುಗಿದ ಮೇಲೆ ▶ 6ನೇ ಪುಟಕ್ಕೆ



ಸಿದ್ದರಾಮಯ್ಯ ಆಡಳಿತಾವಧಿಯಲ್ಲಿ 35 ಸಾವಿರ ಕೋಟಿ ಅವ್ಯವಹಾರ

- ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಆರೋಪ
- ಕಾಂಗ್ರೆಸ್‌ನಿಂದಲೇ ಲೋಕಾಯುಕ್ತ ಮುಚ್ಚಿ, ಎಸಿಬಿ ರಚಿಸಿ ಭ್ರಷ್ಟಾಚಾರ
- ಹಗರಣ, ಭ್ರಷ್ಟಾಚಾರಗಳೇ ಕಾಂಗ್ರೆಸ್ ಆಡಳಿತದ ಸಾಧನೆ
- ಶವಪೆಟ್ಟಿಗೆ, ಬಡವರ ಯೋಜನೆಗಳಲ್ಲೇ ಭಾರೀ ಲೂಟಿ



ಬೆಂಗಳೂರು: ದೇಶ, ರಾಜ್ಯದಲ್ಲಿ ಕಾಂಗ್ರೆಸ್ ಸಾಧನೆ ಅಂದರೆ ಅದು ಭ್ರಷ್ಟಾಚಾರ ಮಾತ್ರ. ಭ್ರಷ್ಟಾಚಾರ ಅನ್ನುವ ಪದದ ಹುಟ್ಟಿಗೆ ಕಾರಣವಾಗಿರುವುದೇ ಕಾಂಗ್ರೆಸ್ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಕಿಡಿಕಾರಿದರು.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 60 ವರ್ಷ ದೇಶವಾಳಿದ ಕಾಂಗ್ರೆಸ್ ಯಾವುದೇ ಯೋಜನೆ ಮಾಡಿದರೂ ಅದರಲ್ಲಿ ಭ್ರಷ್ಟಾಚಾರ ಇರುತ್ತದೆ ಅವರಿಗೆ ಅದು ರಕ್ತಗತವಾಗಿ ಬಂದಿದೆ. ಉಳಿದವರು ಕೂಡ ಹಾಗೆಯೇ ಎಂದು ಅಂದುಕೊಂಡು ಅತ್ಯುತ್ತಮ ಆಡಳಿತ ನೀಡುತ್ತಿರುವ ಬಿಜೆಪಿ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿದೆ ಎಂದು ಕಿಡಿಕಾರಿದರು.

ಲೋಕಾಯುಕ್ತ ಮುಚ್ಚಿ, ಎಸಿಬಿ ರಚನೆ: 2013–2018ರ ತನಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು ಆ ಸರ್ಕಾರ 5 ವರ್ಷ ಮಾಡಿದ್ದು ಭ್ರಷ್ಟಾಚಾರ ಮಾತ್ರ. ಆದರೆ, ಇವರು ಇವಾಗ ನಮ್ಮ ಮೇಲೆ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದಾರೆ. 2013ರಲ್ಲಿ ನಮ್ಮ ಪ್ರಣಾಳಿಕೆಯಲ್ಲಿ ಭ್ರಷ್ಟಾಚಾರದ ನಿರ್ಮೂಲನೆ ಬಗ್ಗೆ ನಾವು ಹೇಳಿ ದ್ದೆವು. ಅದೇ ರೀತಿ ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆ ಎಂದು ಕಾಂಗ್ರೆಸ್ ಕೂಡ ಹೇಳಿತ್ತು ಅವರ ಸರ್ಕಾರ ರಾತ್ರೋರಾತ್ರಿ ಲೋಕಾಯುಕ್ತ ಮುಚ್ಚಿ, ಎಸಿಬಿ ರಚನೆ ಮಾಡಿತು. ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚಿದ್ದಕ್ಕೆ ಹೈಕೋರ್ಟ್ ಛೀಮಾರಿ ಹಾಕಿತ್ತು. ಲೋಕಾಯುಕ್ತದಂತಹ ಸಂಸ್ಥೆಗಳು ರಾಜ್ಯದಲ್ಲಿ ಇರಬೇಕು ಎಂದು ತಿಳಿಸಿತ್ತು. ಸಿಎಂ ಮೇಲೆ 50–60 ಕಂಪ್ಲೆಂಟ್ ಬಂದ ಮೇಲೆ ತನಿಖೆ ಆಗುತ್ತೆ ಅನ್ನುವ ಭಯಭೀತಿಯಿಂದ ▶ 6ನೇ ಪುಟಕ್ಕೆ

ನಿಮಗೆ ಧಮ್ಮಯ್ಯ ಅಂತೀನಿ.. ಈ ಸುಧಾಕರ್‌ನ ಸೋಲಿಸಿ!

ಚಿಕ್ಕಬಳ್ಳಾಪುರ: ನಿಮಗೆ ಧಮ್ಮಯ್ಯ ಅಂತೀನಿ, ಈ ಸುಧಾಕರ್‌ನ ಸೋಲಿಸಿ, ಮತ್ತೆ ಈತ ಶಾಸಕನಾಗಬಾರದು ಎಂದು ಜನರಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಕಾಂಗ್ರೆಸ್ ವಿರುದ್ಧ ಸಚಿವ ಸುಧಾಕರ್ ಭ್ರಷ್ಟಾಚಾರ ಆರೋಪ ಮಾಡಿದ್ದು, ಇದಕ್ಕೆ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ಚಿಕ್ಕಬಳ್ಳಾಪುರದ ಕೆ.ವಿ ಕ್ಯಾಂಪಸ್ ಬಳಿ ನಡೆದ ಪ್ರಜಾಧ್ವನಿ ಸಮಾವೇಶದಲ್ಲಿ ಮಾತನಾಡಿದ ಸಿದ್ದರಾಮಯ್ಯ, ▶ 8ನೇ ಪುಟಕ್ಕೆ

ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಇಂದು ಮೈಸೂರಲ್ಲೂ

ಸಾರಿಗೆ ಸಿಬ್ಬಂದಿ ಧರಣಿ ಸತ್ಯಾಗ್ರಹ

ಮೈಸೂರು, ಜ.23(ಎಸ್‌ಬಿಡಿ)– ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಾಳೆ(ಜ.24) ಧರಣಿ ಸತ್ಯಾಗ್ರಹಕ್ಕೆ ಕರೆ ನೀಡಿದ್ದು, ಮೈಸೂರಿನಲ್ಲೂ ಬಸ್ ಸಂಚಾರಕ್ಕೆ ಅಡ್ಡಿಯಾಗದಂತೆ ಶಾಂತಿಯುತ ಧರಣಿ ನಡೆಸಲು ನಿರ್ಧರಿಸಲಾಗಿದೆ.



ನಗರದ ಬನ್ನಿಮಂಟಪದ ಬಾಲಭವನ ಹಿಂಭಾಗದ ಮೈಸೂರು ವಿಭಾಗೀಯ ಕಚೇರಿ ಬಳಿ ಮಂಗಳವಾರ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ನೂರಾರು ನೌಕರರು ಧರಣಿ ನಡೆಸಲಿದ್ದೇವೆ. ಆದರೆ ಇದರಿಂದ ಬಸ್ ಸಂಚಾರಕ್ಕೆ ಯಾವುದೇ ವ್ಯತ್ಯಯವಾಗುವುದಿಲ್ಲ. ಪ್ರಯಾಣಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಶಾಂತಿಯುತ ಧರಣಿ ನಡೆಸಲಿದ್ದೇವೆ ಬೆಳಗ್ಗೆ ಮತ್ತು ಮಧ್ಯಾಹ್ನ ಡ್ಯೂಟಿ ಮುಗಿಸಿದವರು, ಮಧ್ಯಾಹ್ನ 2ಕ್ಕೆ ಕರ್ತವ್ಯಕ್ಕೆ ಹಾಜರಾಗಬೇಕಾದವರು ಧರಣಿಯಲ್ಲಿ ಭಾಗಿಯಾಗುತ್ತಾರೆ. ರಾಜ್ಯದ 4 ಕೇಂದ್ರ ಕಚೇರಿ, 43 ವಿಭಾಗೀಯ ಕಚೇರಿಗಳ ಮುಂದೆಯೂ ಶಾಂತಿಯುತ ಧರಣಿ ಮೂಲಕ ಬೇಡಿಕೆ ಈಡೇರಿಸಲು ಒತ್ತಾಯಿಸಲಾಗುವುದು ಎಂದು ಕೆಎಸ್ ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ ಮೈಸೂರು ವಿಭಾಗದ ಅಧ್ಯಕ್ಷ ಎಸ್. ರೇವಣ್ಣ ಹಾಗೂ ಪ್ರಧಾನ ಕಾರ್ಯದರ್ಶಿ ಎಸ್.ಮಧುಸೂದನ ಸ್ಪಷ್ಟಪಡಿಸಿದ್ದಾರೆ.

ಮೂಲ ವೇತನಕ್ಕೆ ಬಿಡಿಎ ವಿಲೀನಗೊಳಿಸಿ ಪರಿಷ್ಕೃತ ಮೂಲ ವೇತನದ ಶೇ.25ರಷ್ಟು ಹೆಚ್ಚಳ ಮಾಡಿ ವೇತನ ಶ್ರೇಣಿ ಸಿದ್ಧಪಡಿಸುವುದು, ಚಾಲಕರು, ನಿರ್ವಾಹಕರು, ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿ ಸೇರಿದಂತೆ ಎಲ್ಲಾ ▶ 8ನೇ ಪುಟಕ್ಕೆ

ನೌಕರರ ಬೇಡಿಕೆ ಸಂಬಂಧ ಸಿಎಂ ಜೊತೆ ಚರ್ಚೆ

ಮುಷ್ಕರ ಕೈಬಿಡಲು KSRTC ಅಧ್ಯಕ್ಷರ ಮನವಿ

ಮೈಸೂರು, ಜ.23 (ಎಂಟಿವೈ)–ಸಾರಿಗೆ ಸಂಸ್ಥೆಯ ನೌಕರರ ವೇತನ ಪರಿಷ್ಕರಣೆಯೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಸಂಬಂಧಿಸಿದಂತೆ ಹಿರಿಯ ನಿವೃತ್ತ ಐಎಎಸ್ ಅಧಿಕಾರಿ ಶ್ರೀನಿವಾಸಮೂರ್ತಿ ಅವರ ಮಧ್ಯಂತರ ವರದಿ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಸಮಾಲೋಚನೆ ನಡೆಸಲು ನಿರ್ಧರಿಸಿದ್ದು, ಸಾರಿಗೆ ನೌಕರರು ನಡೆಸಲು ಉದ್ದೇಶಿಸಿರುವ ಮುಷ್ಕರದಿಂದ ಹಿಂದೆ ಸರಿಯಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ ಮನವಿ ಮಾಡಿದ್ದಾರೆ.



ಮೈಸೂರಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರಿಗೆ ಸಂಸ್ಥೆಯ ನೌಕರರ ಮೇಲೆ ಅಪಾರವಾದ ಗೌರವವಿದೆ. ಅವರ ಶ್ರಮ ಹೆಚ್ಚಾಗಿದೆ. ನೌಕರರ ಬೇಡಿಕೆ ನ್ಯಾಯಯುತವಾಗಿಯೇ ಇದೆ. ಆದರೆ ಎಲ್ಲಾ ಬೇಡಿಕೆಯನ್ನು ಒಂದೇ ಬಾರಿ ಈಡೇರಿಸಲು ಸಂಸ್ಥೆಗೆ ಕಷ್ಟವಾಗಲಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಸಾರಿಗೆ ಸಂಸ್ಥೆಯ ನೌಕರರಿಗೆ ನೆರವಾಗಲು ಕ್ರಮ ಕೈಗೊಳ್ಳಲಾಗುತ್ತದೆ. ಸಾರಿಗೆ ಸಂಸ್ಥೆಯ ನೌಕರರ ಸಮಸ್ಯೆ, ಬೇಡಿಕೆ ಕುರಿತಂತೆ ಸರ್ಕಾರ ರಚಿಸಿರುವ ನಿವೃತ್ತ ಐಎಎಸ್ ಅಧಿಕಾರಿ ಶ್ರೀನಿವಾಸಮೂರ್ತಿ ಸಮಿತಿ ವರದಿ ಇನ್ನೂ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ. ಕೇವಲ ಮಧ್ಯಂತರ ವರದಿಯಷ್ಟೇ ಸಲ್ಲಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಸಾರಿಗೆ ಸಂಸ್ಥೆ ನೌಕರರು ಮುಷ್ಕರ ನಡೆಸುವುದು ಸೂಕ್ತವಲ್ಲ. ▶ 8ನೇ ಪುಟಕ್ಕೆ

ಮುಷ್ಕರದಿಂದ ಪ್ರಯಾಣಿಕರಿಗೆ ತೊಂದರೆಯಾಗಲ್ಲ

ಅಶೋಕಕುಮಾರ್ ಸ್ಪಷ್ಟನೆ

ಮೈಸೂರು,ಜ.23(ಎಂಟಿವೈ)– ಮೈಸೂರು ನಗರ ಹಾಗೂ ಗ್ರಾಮಾಂತರದಲ್ಲಿ ನಾಳೆ(ಜ.24) ಸಾರಿಗೆ ಸಂಸ್ಥೆಯ ಬಸ್‌ಗಳ ಸಂಚಾರದಲ್ಲಿ ಯಾವುದೇ ವ್ಯತ್ಯಯ ಉಂಟಾಗುವುದಿಲ್ಲ ಎಂದು ಸಾರಿಗೆ ಸಂಸ್ಥೆಯ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಆರ್. ಅಶೋಕ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ. ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಾರಿಗೆ ನೌಕರರ ಸಂಘ ಕರೆ ನೀಡಿರುವ ಮುಷ್ಕರಕ್ಕೆ ಸಂಬಂಧಿಸಿದಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಈಗಾಗಲೇ ಸಾರಿಗೆ ಸಂಸ್ಥೆಯ ನೌಕರರ ▶ 8ನೇ ಪುಟಕ್ಕೆ

ಮೈಸೂರಲ್ಲಿ ನೀರು ನಿರ್ವಹಣೆ ಖಾಸಗಿ ಸಂಸ್ಥೆಗೆ ಒಪ್ಪಿಸಲು ಚಿಂತನೆ



ಖರ್ಚು–ವೆಚ್ಚ ಪ್ರಸ್ತಾವನೆ ಸಲ್ಲಿಸಲು ಕೆಲ ಖಾಸಗಿ ಸಂಸ್ಥೆಗಳಿಗೆ ನಗರ ಪಾಲಿಕೆ ಸೂಚನೆ



ಮೈಸೂರು, ಜ.23(ಎಂಕೆ)– ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ನಿರ್ವಹಿಸುವ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗೆ ನೀಡಲು ಚಿಂತನೆ ನಡೆಸಲಾಗಿದೆ. ಮಂಗಳೂರು, ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ಕುಡಿಯುವ ನೀರು ಸರಬರಾಜಿನ ಉಸ್ತುವಾರಿಯನ್ನು ಖಾಸಗಿ ಸಂಸ್ಥೆಗಳಿಗೆ ನೀಡಿರುವ ಮಾದರಿಯಲ್ಲಿಯೇ ಮೈಸೂರಿನಲ್ಲಿಯೂ ಖಾಸಗಿ ಸಂಸ್ಥೆಗೆ ನೀರು ಸರಬರಾಜಿನ ನಿರ್ವಹಣಾ ಜವಾಬ್ದಾರಿ ನೀಡಲು ಕೆಲ ಖಾಸಗಿ ಸಂಸ್ಥೆಗಳಿಗೆ ಖರ್ಚು–ವೆಚ್ಚ ಕುರಿತ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ.

ನೀರು ಸರಬರಾಜಿನಲ್ಲಿ ಉಂಟಾಗುವ ಸಣ್ಣ–ಪುಟ್ಟ ಸಮಸ್ಯೆಗಳಿಗೆ ಹಾಗೂ ದುರಸ್ಥಿ ಕಾಮಗಾರಿಗಳಿಗೆ ಪದೇ ಪದೆ ಟೆಂಡರ್ ಕರೆಯುವುದನ್ನು ತಪ್ಪಿಸುವ ದೃಷ್ಟಿಯಿಂದ ಖಾಸಗಿ ಸಂಸ್ಥೆಗೆ ನಿರ್ವಹಣಾ ಜವಾಬ್ದಾರಿ ನೀಡುವುದೇ ಒಳಿತು. ಅಲ್ಲದೆ ವಿದ್ಯುತ್ ಸಂಪರ್ಕ ಕಡಿತಗೊಂಡಲ್ಲಿಯೂ ನೀರು ಪೂರೈಕೆ ಮಾಡುವ ದೃಷ್ಟಿಯಿಂದ ಖಾಸಗಿ ಸಂಸ್ಥೆಗೆ ನಿರ್ವಹಣಾ ಜವಾಬ್ದಾರಿ ನೀಡುವುದು ಸೂಕ್ತ ಎನ್ನಲಾಗುತ್ತಿದೆ. 3 ವರ್ಷದ ಅವಧಿಗೆ ಖಾಸಗಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವುದರಿಂದ ▶ 8ನೇ ಪುಟಕ್ಕೆ

ಗಾಂಜಾ ಪೆಡ್ಲರ್‌ಗಳ ವಿರುದ್ಧ ಸಮರ ಸಾರಿದ ಮೈಸೂರು ನಗರ ಪೊಲೀಸರು

ಶ್ವಾನದಳದೊಂದಿಗೆ ಮುಂಜಾನೆ ಕ್ಷಿಪ್ರ ಕಾರ್ಯಾಚರಣೆ

- 30 ಪೊಲೀಸರ ತಂಡದ ದಾಳಿಯಿಂದ ಬೆಚ್ಚಿಬಿದ್ದ ಪೆಡ್ಲರ್‌ಗಳು
- 500 ಗ್ರಾಂ ಗಾಂಜಾ ಪತ್ತೆ: 12 ಮಂದಿ ಪೆಡ್ಲರ್‌ಗಳಿಗೆ ಎಚ್ಚರಿಕೆ ಪಾಠ





ಮೈಸೂರು, ಜ.23(ಆರ್‌ಕೆ)– ಮೈಸೂರು ನಗರವನ್ನು ಗಾಂಜಾ ಮುಕ್ತಗೊಳಿಸಲು ಪಣ ತೊಟ್ಟಿರುವ ಪೊಲೀಸರು, ಪೆಡ್ಲರ್‌ಗಳ ವಿರುದ್ಧ ಸಮರ ಸಾರಿದ್ದಾರೆ.

ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ನಿರ್ದೇಶನದಂತೆ ಇಂದು ಬೆಳ್ಳಂಬೆಳಗ್ಗೆ ಕೊರೆಯುವ ಚಳಿಯಲ್ಲಿ 30 ಅಧಿಕಾರಿಗಳ ನೇತೃತ್ವದ ತಂಡ ಶ್ವಾನದಳ ಸಿಬ್ಬಂದಿಯೊಂದಿಗೆ ಮೈಸೂರು ನಗರದ ಎಲ್ಲಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿನ ಪೆಡ್ಲರ್‌ಗಳ ಮನೆಗಳ ಮೇಲೆ ದಿಢೀರ್ ದಾಳಿ ನಡೆಸಿತು. ಈ ವೇಳೆ 500 ಗ್ರಾಂನಷ್ಟು ಗಾಂಜಾ ವಶಪಡಿಸಿಕೊಳ್ಳಲಾಗಿದ್ದು, 12 ಮಂದಿ ಪೆಡ್ಲರ್‌ಗಳನ್ನು ವಶಕ್ಕೆ ಪಡೆದ ಪೊಲೀಸರು ಅವರನ್ನು ಮೇಟಗಳ್ಳಿ ಠಾಣೆಗೆ ಕರೆತಂದು ಎಚ್ಚರಿಕೆ ಪಾಠ ನೀಡಿ, ಕಳುಹಿಸಿದರು.


ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜ್ ನೇತೃತ್ವದಲ್ಲಿ ರಚಿಸಲಾಗಿದ್ದ 30 ಪೊಲೀಸ್ ಅಧಿಕಾರಿಗಳ ತಂಡಗಳು ಮುಂಜಾನೆ 4 ಗಂಟೆಗೆ ಈ ಹಿಂದೆ ಗಾಂಜಾ ಪ್ರಕರಣದಲ್ಲಿ ಬಂಧಿತರಾಗಿ ಬಿಡುಗಡೆ ಹೊಂದಿರುವ ಪೆಡ್ಲರ್‌ಗಳ ಮನೆ ಮೇಲೆ ದಾಳಿ ನಡೆಸಿತು. ಗಾಢ ನಿದ್ರೆಯಲ್ಲಿದ್ದಾಗ ಬಾಗಿಲು ತಟ್ಟಿದ ಪೊಲೀಸರನ್ನು ಕಂಡು ಪೆಡ್ಲರ್‌ಗಳ ಮನೆಯವರು ಬೆಚ್ಚಿಬಿದ್ದರು. ಪೊಲೀಸರು ಮನೆಯವರಿಗೆ ಗಾಂಜಾ ವಿರುದ್ಧದ ಕಾರ್ಯಾಚರಣೆ ಬಗ್ಗೆ ತಿಳಿಸಿ, ಶೋಧ ಕಾರ್ಯ ಆರಂಭಿಸಿದರು. ವಾಸನೆ ಹಿಡಿದ ಶ್ವಾನಗಳು ಮನೆಯಲ್ಲಿ ಅಡಗಿಸಿಟ್ಟಿದ್ದ ಗಾಂಜಾವನ್ನು ಪತ್ತೆ ಮಾಡಿದವು. ಈ ಸಂದರ್ಭ ▶ 8ನೇ ಪುಟಕ್ಕೆ

ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮಗಳ ಜನರಿಗೆ 'ಸಿಂಹಸ್ವಪ್ನ'ವಾಗಿರುವ

ಚಿರತೆ ಸೆರೆಗೆ ಅರಣ್ಯ ಇಲಾಖೆ ಹರಸಾಹಸ

ಗೂಗಲ್ ಮ್ಯಾಪ್ ಆಧರಿಸಿ ಕ್ಯಾಮರಾ ಟ್ರಾಪ್, ಬೋನ್ ಅಳವಡಿಕೆ

ಮೈಸೂರು,ಜ.23(ಎಂಟಿವೈ)– ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮಗಳಲ್ಲಿ ನಾಲ್ವರನ್ನು ಬಲಿ ಪಡೆದ ಚಿರತೆ ಸೆರೆಗೆ ಅರಣ್ಯ ಇಲಾಖೆ, ಗೂಗಲ್ ಮ್ಯಾಪ್ ನೆರವಿನೊಂದಿಗೆ ವಿವಿಧೆಡೆ ಕ್ಯಾಮರಾ ಟ್ರಾಪ್ ಅಳವಡಿಸಿ, ಚಿರತೆಯ ಜಾಡು ಪತ್ತೆಹಚ್ಚಲು ಕಾರ್ಯಾಚರಣೆ ಆರಂಭಿಸಿದೆ.



ಕಳೆದ ಮೂರು ತಿಂಗಳಲ್ಲಿ ನಾಲ್ವರು ಚಿರತೆ ದಾಳಿಗೆ ಬಲಿಯಾಗಿದ್ದು, ತಾಲೂಕಿನ ಜನ ಭಯಭೀತರಾಗಿದ್ದಾರೆ. ಪದೇ ಪದೆ ದಾಳಿ ನಡೆಸಿ ಕಣ್ಮರೆಯಾಗುತ್ತಿರುವ ಚಿರತೆ ಅರಣ್ಯ ಇಲಾಖೆಗೆ ತಲೆ ನೋವಾಗಿ ಪರಿಣಮಿಸಿದ್ದು, ಖುದ್ದು ಸಿಎಂ ಬಸವರಾಜ ಬೊಮ್ಮಾಯಿ ಅವರು ಚಿರತೆ ಸೆರೆಗೆ ವಿಶೇಷ ಟಾಸ್ಕ್‌ಫೋರ್ಸ್ ರಚಿಸುವಂತೆ ಸೂಚನೆ ನೀಡಿದ್ದಾರೆ. ಜನರ ಕೋಪ ಶಮನ ಮಾಡಲು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ವೈಲ್ಡ್‌ಲೈಫ್ ಪಿಸಿಸಿಎಫ್‌ರೊಂದಿಗೆ ಚರ್ಚಿಸಿ, ಜನರ ಮೇಲೆರಗುತ್ತಿರುವ ಚಿರತೆಗೆ ಕಂಡಲ್ಲಿ ಗುಂಡಿಕ್ಕುವಂತೆ ಆದೇಶ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿ ವಿವಿಧ ತಂತ್ರಗಾರಿಕೆ ಮೂಲಕ ಕಾರ್ಯಾಚರಣೆ ಮುಂದುವರೆಸಿದ್ದಾರೆ.



ಚಿರತೆ ಸೆರೆಗೆ ದೊಡ್ಡ ಬೋನ್ ಅಳವಡಿಸುತ್ತಿರುವುದು.

ನಾಲ್ಕರಲ್ಲಿ ಮೂರು ಪ್ರಕರಣದಲ್ಲಿ ಒಂದೇ ಚಿರತೆ ಶಂಕೆ: ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕಳೆದ 3 ತಿಂಗಳಲ್ಲಿ ನಾಲ್ಕು ಪ್ರಕರಣದಲ್ಲಿ ಮೂವರನ್ನು ಒಂದೇ ಚಿರತೆ ಬಲಿ ಪಡೆದಿರುವ ಶಂಕೆ ದಟ್ಟವಾಗಿದೆ. 2022ರ ಅ.31ರಂದು ತಾಲೂಕಿನ ಎಂ.ಎಲ್.ಹುಂಡಿಯಲ್ಲಿ ಚಿರತೆಗೆ ಬಲಿಯಾದ 20 ವರ್ಷದ ಮಂಜುನಾಥ್ ಪ್ರಕರಣ ಹೊರತುಪಡಿಸಿದರೆ, ಡಿ.1ರಂದು ಎಂ.ಕೆಬ್ಬೆಹುಂಡಿ ಮೇಘನ(22), 2023ರ ಜ.20ರಂದು ಕನ್ನನಾಯಕನಹಳ್ಳಿಯ ಸಿದ್ದಮ್ಮ(60), ಜ.21ರಂದು ಹೊರಳಹಳ್ಳಿ ಗ್ರಾಮದ 11 ವರ್ಷದ ಬಾಲಕ ಜಯಂತ್ ಮೇಲೆ ದಾಳಿ ನಡೆಸಿದ ಚಿರತೆ ಒಂದೇ ಆಗಿರುವ ಅನುಮಾನ ದಟ್ಟವಾಗಿದೆ. ಕಳೆದ ರಾತ್ರಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ವನ್ಯಜೀವಿ ತಜ್ಞರೊಂದಿಗೆ ನಡೆದ ಸಭೆಯಲ್ಲಿ ಚಿರತೆ ದಾಳಿಯ ನಾಲ್ಕು ಪ್ರಕರಣದಲ್ಲಿ ಕೊನೆಯ ಮೂರರಲ್ಲಿ ಒಂದೇ ಚಿರತೆಯಿಂದ ಸಂಭವಿಸಿರುವ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ.


ಅ.31ರಂದು ನಡೆದ ಮೊದಲ ಪ್ರಕರಣದಲ್ಲಿ ಮಂಜುನಾಥ್ ಎಂಬ ಯುವಕನ ಬಲಿ ಪಡೆದ ಚಿರತೆಯನ್ನು ಈಗಾಗಲೇ ಸೆರೆ ಹಿಡಿದು ಬನ್ನೇರುಘಟ್ಟಕ್ಕೆ ಸ್ಥಳಾಂತರಿಸಲಾಗಿದೆ. ಮೊದಲ ಪ್ರಕರಣ ನಡೆದ ಸ್ಥಳದ ಹಲವೆಡೆ ಅಳವಡಿಸಿದ್ದ ಕ್ಯಾಮರಾ ಟ್ರಾಪ್‌ನಲ್ಲಿ ಚಿರತೆಯ ಚಲನವಲನದ ದೃಶ್ಯ ಸೆರೆಯಾಗಿತ್ತು. ಆದರೆ, 2, 3 ಹಾಗೂ 4ನೇ ಪ್ರಕರಣದ ಸ್ಥಳದ ಸುತ್ತ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ನಲ್ಲಿ ಚಿರತೆ ಸುಳಿವು ಪತ್ತೆಯಾಗಿರಲಿಲ್ಲ. ಗೂಗಲ್ ಮ್ಯಾಪ್ ಮೂಲಕ ಪರಿಶೀಲನೆ ನಡೆಸಿದ ವೇಳೆ ಕೊನೆಯ ಮೂರು ಪ್ರಕರಣಗಳು ಒಂದೂವರೆ ಕಿ.ಮಿ ಅಂತರದಲ್ಲೇ ನಡೆದಿರುವುದರಿಂದ ಒಂದೇ ▶ 8ನೇ ಪುಟಕ್ಕೆ

ಚಿರತೆ ಸೆರೆಗೆ ಕ್ರಮ ಕೈಗೊಳ್ಳಲಾಗಿದೆ

“ ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮದ ಜನರ ಮೇಲೆ ದಾಳಿ ನಡೆಸಿರುವ ಚಿರತೆ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. 120ಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಗಿದೆ. ವಿವಿಧೆಡೆ ಬೋನ್, ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ. ಸ್ಥಳದಲ್ಲೇ ಇಬ್ಬರು ಪಶುವೈದ್ಯರುಳ್ಳ ಅರವಳಿಕೆ ತಜ್ಞರ ತಂಡವನ್ನು ನಿಯೋಜಿಸಲಾಗಿದೆ. ಸಂಜೆ ವೇಳೆ ಮನೆಯಿಂದ ಹೊರ ಬರದಂತೆ ಜಾಗೃತಿ ಮೂಡಿಸಲಾಗುತ್ತಿದೆ. ಚಿರತೆಯ ಬಗ್ಗೆ ಪಿಸಿಸಿಎಫ್ ಮಾಹಿತಿ ಕೇಳಿದ್ದು, ವರದಿ ಸಲ್ಲಿಸಲಾಗಿದೆ.

–ಡಾ.ಮಾಲತಿ ಪ್ರಿಯಾ, ಸಿಎಫ್‌ಓ, ಮೈಸೂರು ವೃತ್ತ

ಮಕ್ಕಳು ಬಯಸಿದರೆ ಮೊಟ್ಟೆ ನೀಡಿ



ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ವೇಳೆ ಮಕ್ಕಳು ಮೊಟ್ಟೆಯನ್ನು ಕೇಳಿದರೆ ಮೊಟ್ಟೆಯನ್ನೇ ಕೊಡಬೇಕು. ಬಾಳೆಹಣ್ಣು, ಚಿಕ್ಕಿ ನೀಡುವಂತಿಲ್ಲ ಎಂದು ರಾಜ್ಯ ಸರ್ಕಾರ ಆದೇಶಿಸಿದೆ. ಸರ್ಕಾರಿ ಶಾಲೆಯ 1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಮೊಟ್ಟೆ ನೀಡುವ ಯೋಜನೆಯನ್ನು ಶಿಕ್ಷಣ ಇಲಾಖೆ ಜಾರಿಗೆ ತಂದಿದ್ದು, ಮೊಟ್ಟೆ ತಿನ್ನದ ವಿದ್ಯಾರ್ಥಿಗಳಿಗೆ ಮಾತ್ರ ಬಾಳೆಹಣ್ಣು, ಚಿಕ್ಕಿ ನೀಡುವಂತೆ ಸೂಚಿಸಿದೆ. ಆದರೆ, ಕೆಲವು ಶಾಲೆಗಳಲ್ಲಿ ಮಕ್ಕಳು ಮೊಟ್ಟೆ ಕೇಳಿದರೂ ಬಲವಂತವಾಗಿ ಬಾಳೆಹಣ್ಣು ಹಾಗೂ ಚಿಕ್ಕಿ ನೀಡುತ್ತಿರುವುದು ಕೇಳಿ ಬಂದಿದ್ದು, ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಫೆ.3ರಿಂದ ಶ್ರೀ ರೇಣುಕಾ ಎಲ್ಲಮ್ಮ ಜಾತ್ರಾ ಉತ್ಸವ



ಮೈಸೂರು,ಜ.23(ಆರ್‌ಕೆ)–ಮೈಸೂರಿನ ಮಂಡಿ ಮೊಹಲ್ಲಾದಲ್ಲಿ ಫೆ.3ರಿಂದ 6ರವರೆಗೆ ಶ್ರೀ ರೇಣುಕಾ ಎಲ್ಲಮ್ಮ ಜಾತ್ರಾ ಮಹೋತ್ಸವ ನಡೆಯಲಿದೆ. ಫೆ.3ರಂದು ಶ್ರೀಪರಶುರಾಮ ಶ್ರೀ ರೇಣುಕಾದೇವಿ, ಎಲ್ಲಾಂಭ ದೇವಿಗೆ ಪಂಚಾಮೃತ ಅಭಿಷೇಕ, ಕಲ್ಪೋಕ್ತ ಪೂಜೆ, ಕಲಶ ಸ್ಥಾಪನೆ, ಗಣಪತಿ–ನವಗ್ರಹ ಹೋಮ ನಂತರ ಅನ್ನಸಂತರ್ಪಣೆ ನಡೆಯಲಿದೆ.

ಫೆ.4ರಂದು ಹೋಮ, ಪೂರ್ಣಾಹುತಿ, ಪ್ರಸಾದ ವಿನಿಯೋಗ, ಫೆ.5ರಂದು ವಸ್ತ್ರಾಲಂಕಾರ, ಶ್ರೀ ಗಣಪತಿಗೆ ನವನೀತ ಅಲಂಕಾರ, ಅಷ್ಟೋತ್ತರ ಹಾಗೂ ಸಂಜೆ 6 ಗಂಟೆಗೆ ಶ್ರೀ ದೇವಿಯವರ ಉತ್ಸವ ಮತ್ತು ಫೆ.6ರಂದು ಬೆಳಿಗ್ಗೆ 10.30 ಗಂಟೆಗೆ ಶ್ರೀ ಸತ್ಯ ನಾರಾಯಣ ಪೂಜೆ ನೆರವೇರಲಿದ್ದು, ಪ್ರತೀದಿನ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್ ಆಡಳಿತ ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ 'ಧೀಮಂತರು' ಕೃತಿ ಬಿಡುಗಡೆ

● ರಂಗ ಸಾಹಿತಿ ಡಾ.ಹೆಚ್.ಎ.ಪಾರ್ಶ್ವನಾಥ್ ರಚಿತ ಕೃತಿ
● ಹಿರಿಯ ಸಾಹಿತಿ ಸಿಪಿಕೆ ಅವರಿಂದ ಕೃತಿ ಬಿಡುಗಡೆ



ಮೈಸೂರು,ಜ.23(ಪಿಎಂ)–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ), ಕದಂಬ ರಂಗವೇದಿಕೆ ಮತ್ತು ರೂಪ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಜ.25ರಂದು ರಂಗ ಸಾಹಿತಿ ಡಾ.ಹೆಚ್.ಎ.ಪಾರ್ಶ್ವನಾಥ್ ಅವರ 'ಧೀಮಂತರು' ಕೃತಿ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಕಸಾಪ ಸಾಹಿತ್ಯ ಭವನದಲ್ಲಿ ಅಂದು ಸಂಜೆ 5ಕ್ಕೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಕೃತಿ ಬಿಡುಗಡೆ ಮಾಡಲಿದ್ದಾರೆ ಎಂದರು.

ಕೃತಿ ಕುರಿತು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್ ಮಾತನಾಡಲಿದ್ದಾರೆ. ಅತಿಥಿಗಳಾಗಿ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್, ಸಾಹಿತಿ ಡಾ.ತಿಪ್ಪೇಸ್ವಾಮಿ, ಸಂವಹನ ಪ್ರಕಾಶನದ ಪ್ರಕಾಶಕ ಡಿ.ಎನ್.ಲೋಕಪ್ಪ ಪಾಲ್ಗೊಳ್ಳಲಿದ್ದಾರೆ. ಸದರಿ ಕೃತಿಯಲ್ಲಿ 40 ಸಾಧಕ ವ್ಯಕ್ತಿಗಳನ್ನು ಲೇಖಕರು ಚಿತ್ರಿಸಿದ್ದಾರೆ. ಸಾಹಿತ್ಯ, ಧಾರ್ಮಿಕ, ರಂಗಭೂಮಿ, ಜಾನಪದ, ವೈದ್ಯಕೀಯ, ಸಂಘಟನೆ, ಪತ್ರಿಕಾರಂಗದ ಸಾಧಕರ ಬಗ್ಗೆ ಕೃತಿಯಲ್ಲಿ ಬೆಳಕು ಚೆಲ್ಲಿದ್ದಾರೆ ಎಂದು ತಿಳಿಸಿದರು. ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಜಿಲ್ಲಾ ಕಸಾಪ ಜಂಟಿ ಕಾರ್ಯದರ್ಶಿ ಕೆಂಪಣ್ಣ, ಕೋಶಾಧ್ಯಕ್ಷ ಜಿ.ಪ್ರಕಾಶ್, ಕೃತಿ ಕರ್ತೃ ಡಾ.ಹೆಚ್.ಎ.ಪಾರ್ಶ್ವನಾಥ್ ಗೋಷ್ಠಿಯಲ್ಲಿದ್ದರು.

'ಲವ್‌ಸ್ಟೋರಿ 1998' ಯಶಸ್ವಿ ಪ್ರದರ್ಶನ



ಮೈಸೂರು,ಜ.23(ಪಿಎಂ)–ಯಶ್ವಿನ್ ಸಿನಿ ಪ್ರೊಡಕ್ಷನ್ ಹೌಸ್ ಬ್ಯಾನರ್‌ನಡಿ ನಿರ್ಮಿಸಿರುವ 'ಲವ್ ಸ್ಟೋರಿ 1998' ಸಿನಿಮಾ ಮೈಸೂರು ಸೇರಿದಂತೆ ರಾಜ್ಯಾದ್ಯಂತ 40 ಚಿತ್ರಮಂದಿರಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿದೆ ಎಂದು ಚಿತ್ರದ ನಿರ್ದೇಶಕ ನಾಗರಾಜ್ ತಲಕಾಡು ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2022ರ ಡಿ.30ರಂದು ಚಿತ್ರ ರಾಜ್ಯಾದ್ಯಂತ ಬಿಡುಗಡೆಗೊಂಡಿತು. ಮೈಸೂರಿನ ಪ್ರಭಾ ಚಿತ್ರಮಂದಿರದಲ್ಲಿ ಇಂದು 25ನೇ ದಿನದ ಪ್ರದರ್ಶನ ಕಾಣಲಿದೆ. ಅಂತರ ಜಾತಿ ಪ್ರೇಮ ವಿವಾಹದ ಕಥಾವಸ್ತು ಹೊಂದಿರುವ ಈ ಸಿನಿಮಾ, ಸಮಾಜಕ್ಕೆ ಉತ್ತಮ ಸಂದೇಶ ನೀಡಲಿದೆ ಎಂದರು. ಸಿನಿಮಾದ ನಾಯಕ ನಟ ಮಿಥುನ್, ನಿರ್ಮಾಪಕ ಬಿ.ಕುಮಾರಸ್ವಾಮಿ, ನಟ ಹರೀಶ್ ಗೋಷ್ಠಿಯಲ್ಲಿದ್ದರು.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ಒಂಟಿಕೊಪ್ಪಲಿನಲ್ಲಿ(ವಾರ್ಡ್.ನಂ.22) ಬಿಜೆಪಿ ಬೂತ್ ವಿಜಯ ಸಂಕಲ್ಪ ಅಭಿಯಾನದಡಿ ಮನೆ ಮನೆಗೆ ಭೇಟಿ ನೀಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆಯ ಕರಪತ್ರ ನೀಡಲಾಯಿತು. ಪಾಲಿಕೆ ಸದಸ್ಯರಾದ ಚಿಕ್ಕ ವೆಂಕಟು, ಜಗದೀಶ, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರಮೇಶ್, ಮುಖಂಡರಾದ ಸುರೇಂದ್ರ, ಗಿರೀಶ್ ಬಾಬು, ರಾಜು, ವೇಣು, ಗೋಪಾಲ, ಗೋವಿಂದ್ ರಾಜು, ಬಾಬು, ಜೀವನ್, ಶ್ರೀಮತಿ ಸುಧಾ ರಾಮಚಂದ್ರು, ಶ್ರೀಮತಿ ಛಾಯಾ ಸ್ವಾಮಿ, ರವೀಂದ್ರ ಬಾಬು ಮತ್ತಿತರರು ಭಾಗಿಯಾಗಿದ್ದರು.

ಮೈಸೂರಿನ ಚೆಲುವಾಂಬ ಆಸ್ಪತ್ರೆ ಕಾಂಪೌಂಡ್‌ನಲ್ಲಿ ಮ್ಯೂರಲ್ ಕಲಾಕೃತಿ ಮೂಲಕ ಸ್ತನ ಕ್ಯಾನ್ಸರ್ ಜಾಗೃತಿ



ಮೈಸೂರು, ಜ. 23– ಚೆಲುವಾಂಬ ಆಸ್ಪತ್ರೆಯ ಸಹಯೋಗದಲ್ಲಿ ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು ಕಾಂಪೌಂಡ್ ಚಿತ್ರಕಲೆ ಚಟುವಟಿಕೆಯನ್ನು ಮೈಸೂರು ಅಮಿಟಿ ಲೇಡೀಸ್ ಸರ್ಕಲ್ 108 ಮತ್ತು ಮೈಸೂರು ಅಮಿಟಿ ರೌಂಡ್ ಟೇಬಲ್ 156 ಆಯೋಜಿಸಿದ್ದವು. ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಚಿಕಿತ್ಸಕ ರೂಪವಾದ ಈ ಮ್ಯೂರಲ್ ಕಲಾಕೃತಿಯನ್ನು ಸೃಷ್ಟಿಸಲಾಗಿದೆ.

ಮ್ಯೂರಲ್ ವಾಲ್ ಪೇಂಟಿಂಗ್ ಅನಾವರಣ ಕಾರ್ಯಕ್ರಮದಲ್ಲಿ ಮೈಸೂರಿನ ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರ ಕುಮಾರ್ ಹಾಗೂ ಕ್ಲಬ್‌ನ ಸದಸ್ಯರು ಉಪಸ್ಥಿತರಿದ್ದರು. ಮೈಸೂರು ಅಮಿಟಿ ಲೇಡೀಸ್ ಸರ್ಕಲ್ 108ರ ಛೇರ್‌ಪರ್ಸನ್ ಶ್ರೀಮತಿ ಅಪರ್ಣಾ ರಂಗ ಮತ್ತು ಮೈಸೂರು ಅಮಿಟಿ ರೌಂಡ್ ಟೇಬಲ್ 156ರ ಚೇರ್ಮನ್ ಸೂರಜ್ ಹಾಜರಿದ್ದರು.

ಈ ಸಂದರ್ಭದಲ್ಲಿ ಮೈಸೂರು ಅಮಿಟಿ ಲೇಡಿಸ್ ಸರ್ಕಲ್ 108ರ ಚೇರ್‌ಪರ್ಸನ್ ಅಪರ್ಣಾ ರಂಗ ಮಾತನಾಡಿ, ಪ್ರತಿಯೊಬ್ಬ ಮಹಿಳೆಯೂ ಸ್ವತಃ ಸ್ತನ ಪರೀಕ್ಷೆ ಮಾಡಿಕೊಳ್ಳುವುದರ ಶಿಕ್ಷಣ ನೀಡುವುದು ಈ ಕಲೆಯ ಉದ್ದೇಶವಾಗಿದೆ. ಈ ರೀತಿ ಪರೀಕ್ಷೆ ಮಾಡಿಕೊಳ್ಳುವುದರಿಂದ ಸರಿಯಾದ ಚಿಕಿತ್ಸೆ ಪಡೆಯುವ ಅವಕಾಶ ಲಭಿಸುತ್ತದೆ. ಕಲಾಕೃತಿಯು ಆ ಸತ್ಯದತ್ತ ಗಮನ ಸೆಳೆಯುತ್ತದೆಯಲ್ಲದೇ ನಾವು ಅವರೊಂದಿಗೆ ಬೆಂಬಲವಾಗಿ ನಿಲ್ಲುತ್ತೇವೆ ಎಂದರು. ಮೈಸೂರಿನ ಕಲಾವಿದರಾದ ರಾಜ್‌ಕುಮಾರ್ ಅವರ ಚಿಂತನೆಯ ಕೂಸು ಈ ಮ್ಯೂರಲ್ ವಾಲ್ ಪೇಂಟಿಂಗ್‌ಗಳಾಗಿವೆ. ಮೈಸೂರು ಅಮಿಟಿ ಲೇಡಿಸ್ ಸರ್ಕಲ್ 108 ಮತ್ತು ಮೈಸೂರು ಅಮಿಟಿ ರೌಂಡ್ ಟೇಬಲ್ 156 ಆಯೋಜಿಸಿದ್ದ ವಾಲ್ ಪೇಂಟಿಂಗ್‌ನಲ್ಲಿ 30ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು.

ಡಾ.ಲಾವಣ್ಯಗೆ ಪಿಹೆಚ್‌ಡಿ ಪದವಿ



ಮೈಸೂರು,ಜ.23– ಶಾರದಾವಿಲಾಸ ಪದವಿ ಪೂರ್ವ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಎಂ.ಲಾವಣ್ಯ ಅವರು ಡಾ.ಆರ್.ರಾಮಕೃಷ್ಣ ಅವರ ಮಾರ್ಗದರ್ಶನದಲ್ಲಿ ಲೇಖಕಿ ನಳಿನಿಮೂರ್ತಿ ಅವರ ಸಾಹಿತ್ಯ ಕುರಿತು ಸಂಶೋಧಿಸಿ, ಮಂಡಿಸಿದ ಪ್ರಬಂಧಕ್ಕೆ ಮೈಸೂರು ವಿವಿ ಪಿಹೆಚ್‌ಡಿ ಪದವಿಯನ್ನು ನೀಡಿ, ಗೌರವಿಸಿದೆ.

ನಶಿಸಿ ಹೋಗುತ್ತಿರುವ ತಳ ಸಮುದಾಯಗಳ ವಿಶಿಷ್ಟ ಕಲೆಗಳ ತರಬೇತಿ ಶಿಬಿರಕ್ಕೆ ಶಾಸಕರಿಂದ ಚಾಲನೆ

ವಿದ್ಯಾರ್ಥಿಗಳಿಗೆ ಸೋಮನ ಕುಣಿತ, ತಮಟೆ ಕುಣಿತ, ತಂಬೂರಿ ಪದ, ರಂಗಗೀತೆ, ಸೋಬಾನೆ ಪದ ಇತ್ಯಾದಿಗಳ 20 ದಿನಗಳ ತರಬೇತಿ



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಸೋಮವಾರ ಆರಂಭವಾದ ಮೂಲ ಸಂಸ್ಕೃತಿ–ಕನ್ನಡ ಸಂಸ್ಕೃತಿ ಘೋಷಣೆಯಡಿ 'ನಶಿಸಿ ಹೋಗುತ್ತಿರುವ ತಳ ಸಮುದಾಯಗಳ ವಿಶಿಷ್ಟ ಕಲೆಗಳ ಕುರಿತ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಶಾಸಕ ನಾಗೇಂದ್ರ ಮಾತನಾಡುತ್ತಿರುವುದು.

ಮೈಸೂರು, ಜ.23(ಆರ್‌ಕೆಬಿ)– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮೂಲ ಸಂಸ್ಕೃತಿ– ಕನ್ನಡ ಸಂಸ್ಕೃತಿ ಘೋಷಣೆಯಡಿ 'ನಶಿಸಿ ಹೋಗುತ್ತಿರುವ ತಳ ಸಮುದಾಯಗಳ ವಿಶಿಷ್ಟ ಕಲೆ'ಗಳ ಕುರಿತ ತರಬೇತಿ ಶಿಬಿರ ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಸೋಮವಾರ ಆರಂಭವಾಯಿತು.

ತಳ ಸಮುದಾಯಗಳ ಜಾನಪದ ಕಲೆಗಳಾದ ಸೋಮನ ಕುಣಿತ, ತಮಟೆ ಕುಣಿತ, ಸೋಬಾನೆ ಪದ, ತಂಬೂರಿ, ರಂಗಗೀತೆ ಈ ಐದು ಪ್ರಕಾರಗಳ ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ 20 ದಿನಗಳ ಈ ತರಬೇತಿ ಶಿಬಿರ ಆಯೋಜಿಸಿದೆ. ಜಿಲ್ಲೆಯ ವಿವಿಧೆಡೆಯಿಂದ ಶಾಲಾ–ಕಾಲೇಜುಗಳ 50 ವಿದ್ಯಾರ್ಥಿ–ವಿದ್ಯಾರ್ಥಿನಿಯರು ಶಿಬಿರಕ್ಕೆ ಆಯ್ಕೆಯಾಗಿದ್ದು, ಅವರಿಗೆ ಆಯಾ ಪ್ರಕಾರಗಳ ಹಿರಿಯ ಕಲಾವಿದರು ತರಬೇತಿ ನೀಡಲಿದ್ದಾರೆ. ತರಬೇತಿಯಲ್ಲಿ ಕಲಿತ ಈ ಕಲೆಗಳನ್ನು ರಾಜ್ಯ ಮಟ್ಟದಲ್ಲಿ ಪ್ರದರ್ಶಿಸಲು ಅವಕಾಶವಿದೆ.

ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಸೋಮವಾರ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ನಮ್ಮ ಪ್ರಾಚೀನ ಕಲೆ, ಸಂಸ್ಕೃತಿಯನ್ನು ಅಸಡ್ಡೆ ಮಾಡುತ್ತಾ ಬಂದಿದ್ದರಿಂದಾಗಿ ತಳ ಸಮುದಾಯಗಳ ವಿಶಿಷ್ಟ ಕಲೆಗಳು ನಶಿಸುತ್ತಿವೆ. ಮೂಲ ಸಂಸ್ಕೃತಿಯನ್ನು ನಾವೇ ಆಚರಣೆ ಮಾಡದಿದ್ದರೆ ಅದು ಉಳಿಯುವುದಾದರು ಹೇಗೆ. ಹಾಗಾಗಿ ಸರ್ಕಾರ ಈ ಕಲೆಗಳನ್ನು ಉಳಿಸಲು ಮುಂದಾಗಿದೆ. ಈ ನಿಟ್ಟಿನಲ್ಲಿ ತರಬೇತಿ ಶಿಬಿರ ಹಮ್ಮಿಕೊಂಡಿದ್ದು, ಶಿಬಿರಾರ್ಥಿಗಳು ಉತ್ತಮವಾಗಿ ಕಲಿತು ನಮ್ಮ ಕಲೆ, ಸಂಸ್ಕೃತಿಯನ್ನು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಬೇಕಾಗಿದೆ ಎಂದರು.

ಮೇಯರ್ ಶಿವಕುಮಾರ್ ಮಾತನಾಡಿ, ನಶಿಸುತ್ತಿರುವ ಕಲೆಗಳನ್ನು ಮುಂದಿನ ಪೀಳಿಗೆಗೂ ಉಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇಂತಹ ತರಬೇತಿ ಆಯೋಜಿಸಿದೆ. ನನ್ನ ದೊಡ್ಡಪ್ಪ ತತ್ವದ ಮಹದೇವಸ್ವಾಮಿ ಅವರು ಅರಮನೆಯಲ್ಲಿ ಪದ ಹೇಳುತ್ತಿದ್ದರು. ಇಂದು ತಂಬೂರಿ ಕಲಾವಿದರ ಸಂಖ್ಯೆ ಕಡಿಮೆಯಾಗುತ್ತಿದೆ. ಇಂತಹ ಕಲೆಗಳು ನಶಿಸದೆ ಮುಂದಿನ ಪೀಳಿಗೆಗೂ ಉಳಿಸಿಕೊಳ್ಳುವುದು ಬಹಳ ಅಗತ್ಯವಾಗಿದೆ ಎಂದು ತಿಳಿಸಿದರು.

ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ನಂಜಯ್ಯ ಹೊಂಗನೂರು ಮಾತನಾಡಿ, ಈ ತರಬೇತಿಯಿಂದ ಅಳಿವಿನ ಅಂಚಿನಲ್ಲಿರುವ ಕಲೆ ಹಾಗೂ ಕಲಾವಿದರನ್ನು ಉಳಿಸುವ ಜೊತೆಗೆ ಸಂಸ್ಕೃತಿ ಉಳಿಯಲಿದೆ. ವಿವಿಧ ಶಾಲಾ– ಕಾಲೇಜುಗಳಿಂದ ಬಂದಿರುವ ವಿದ್ಯಾರ್ಥಿಗಳು ರಂಗಗೀತೆ, ಸೋಬಾನೆ ಪದ, ತಮಟೆ ಕುಣಿತ, ತಂಬೂರಿ ಕಲೆ ಮತ್ತು ಸೋಮನ ಕುಣಿತದ ತರಬೇತಿ ಪಡೆದು, ಮುಂದೆ ದೊಡ್ಡ ಕಲಾವಿದರಾಗಿ ಹೊರ ಹೊಮ್ಮಲು ಅವಕಾಶವಿದೆ. ಜೊತೆಗೆ ಕಲೆಯೂ ಉಳಿಸಿಕೊಂಡಂತಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ತಂಬೂರಿ ನೀಲಗಾರರ ಕಲಾವಿದ ಡಾ. ಮೈಸೂರು ಗುರುರಾಜ್, ಹಿರಿಯ ರಂಗಕರ್ಮಿ ವೈ.ಎಂ.ಪುಟ್ಟಣ್ಣಯ್ಯ, ಹಿರಿಯ ಸೋಬಾನೆ ಕಲಾವಿದೆ ಚಿಕ್ಕಮಂಚಮ್ಮ, ಹಿರಿಯ ಜಾನಪದ ಕಲಾವಿದ ದೇವರಾಜು, ಕಾರ್ಮಿಕ ಇಲಾಖೆ ಅಧಿಕಾರಿ ನಾಜಿಯಾ ಸುಲ್ತಾನಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಆದಿದ್ರಾವಿಡ ಮಾದಿಗ ಸಮುದಾಯ ಶಾಸಕ ಸ್ಥಾನ ಅಲಂಕರಿಸಿಲ್ಲ ಟಿ.ನರಸೀಪುರ ಮೀಸಲು ಕ್ಷೇತ್ರದಲ್ಲಿ ಟಿಕೆಟ್ ನೀಡಿ

ಡಾ. ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಯುವಕರ ಅಭಿವೃದ್ಧಿ ಮಹಾಸಂಘ ಒತ್ತಾಯ



ಮೈಸೂರು,ಜ.23(ಪಿಎಂ)–ರಾಜ್ಯದಲ್ಲಿ ಆದಿದ್ರಾವಿಡ ಮಾದಿಗ ಸಮುದಾಯ ಈವರೆಗೂ ಶಾಸಕ ಸ್ಥಾನ ಅಲಂಕರಿಸಲು ಸಾಧ್ಯವೇ ಆಗಿಲ್ಲ. ಹಾಗಾಗಿ ಮುಂಬರುವ ಚುನಾವಣೆಯಲ್ಲಿ ಟಿ.ನರಸೀಪುರ ವಿಧಾನಸಭಾ ಮೀಸಲು ಕ್ಷೇತ್ರದಲ್ಲಿ ಆದಿದ್ರಾವಿಡ ಮಾದಿಗ ಸಮುದಾಯದ ಸ್ಥಳೀಯ ಮುಖಂಡ ಬಾಲರಾಜ್ ಅವರಿಗೆ ಯಾವುದಾದರೂ ಪಕ್ಷ ಟಿಕೆಟ್ ನೀಡಬೇಕೆಂದು ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ (ಪೌರಕಾರ್ಮಿಕರ) ಯುವಕರ ಅಭಿವೃದ್ಧಿ ಮಹಾಸಂಘ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಂಘದ ಮಾಜಿ ಉಪಾಧ್ಯಕ್ಷ ಕೆ.ನಂಜಪ್ಪ ಬಸವನಗುಡಿ, ಅನಾದಿ ಕಾಲದಿಂದಲೂ ಎಲ್ಲಾ ವರ್ಗದ ಸೇವೆಯನ್ನು ಆದಿದ್ರಾವಿಡ ಮಾದಿಗ ಸಮಾಜ ಮಾಡಿಕೊಂಡು ಬರುತ್ತಿದೆ. ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಹಾಗೂ ರಾಜಕೀಯವಾಗಿ ಸೂಕ್ತ ಸ್ಥಾನಮಾನ ದೊರೆಯದೇ ನಮ್ಮ ಸಮುದಾಯ ಕೇವಲ ಸೇವೆ ಮಾಡಲು ಮಾತ್ರ ಸೀಮಿತವಾಗಿದೆ ಎಂದು ಹೇಳಿದರು.

ಸ್ವಾತಂತ್ರ್ಯ ಬಂದು 75 ವರ್ಷಗಳೇ ಕಳೆದರೂ ಸಮುದಾಯದ ಯಾರೂ ಶಾಸಕ ಸ್ಥಾನ ಅಲಂಕರಿಸಲು ಸಾಧ್ಯವೇ ಆಗಿಲ್ಲ. ಪರಿಷತ್ ಸದಸ್ಯರೂ ಆಗಿಲ್ಲ. ಹಾಗಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಟಿ.ನರಸೀಪುರ ಮೀಸಲು ಕ್ಷೇತ್ರದಲ್ಲಿ ಯಾವುದಾದರೂ ಪಕ್ಷಗಳು ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡುವ ಮೂಲಕ ನಮಗೆ ಸಾಮಾಜಿಕ ನ್ಯಾಯ ಒದಗಿಸಬೇಕು. ಈ ನಿಟ್ಟಿನಲ್ಲಿ ಮಹಾಸಂಘದ ನೇತೃತ್ವದಲ್ಲಿ ಸಮುದಾಯವು ಸದರಿ ಕ್ಷೇತ್ರಕ್ಕೆ ಸ್ಥಳೀಯ ಮುಖಂಡ ಬಾಲರಾಜ್ ಅವರನ್ನು ಕಣಕ್ಕಿಳಿಸಲು ಮುಂದಾಗಿದ್ದು, ಯಾವುದೇ ಪಕ್ಷವಾದರೂ ಸರಿ, ಅವರಿಗೆ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿದರು.

ಕ್ಷೇತ್ರದಲ್ಲಿ ನಮ್ಮ ಸಮುದಾಯದ ಬಾಲರಾಜ್ ಜನಪರ ಕೆಲಸ ಕಾರ್ಯದ ಮೂಲಕ ಸರ್ವ ಜನಾಂಗದ ಪ್ರೀತಿ–ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಯಾವ ಪಕ್ಷಗಳೂ ಟಿಕೆಟ್ ನೀಡದಿದ್ದರೂ ಅವರನ್ನು ಪಕ್ಷೇತರವಾಗಿ ಕಣಕ್ಕಿಳಿಸಲು ನಿರ್ಧರಿಸಿದ್ದೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮಹಾಸಂಘದ ಗೌರವಾಧ್ಯಕ್ಷ ಸಿ.ಎಂ.ರಾಮಯ್ಯ, ರಾಜ್ಯ ಕಾರ್ಯಾಧ್ಯಕ್ಷ ಪಿ.ಮಂಜುನಾಥ್, ನಗರಾಧ್ಯಕ್ಷ ಮಂಚಯ್ಯ, ನಗರ ಕಾರ್ಯಾಧ್ಯಕ್ಷ ಎಂ.ರಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಜಿ.ಮುರುಗೇಶ್, ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಿ.ಶ್ರೀನಿವಾಸ್ ಗಂಗೋತ್ರಿ ಸುದ್ದಿಗೋಷ್ಠಿಯಲ್ಲಿದ್ದರು.

ಜ.27, ಸಾತನೂರು ದೇವರಾಜರ ವಿಜ್ಞಾನ ಪುಸ್ತಕಗಳು ಲೋಕಾರ್ಪಣೆ

ಮೈಸೂರು: ಸ್ಪಂದನಾ ಸಾಂಸ್ಕೃತಿಕ ಪರಿಷತ್ತು ಹಾಗೂ ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘದ ಸಂಯುಕ್ತಾಶ್ರಯದಲ್ಲಿ ಜ.27ರಂದು ಸಂಜೆ 5 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ವಿಶ್ರಾಂತ ಪ್ರಾಂಶುಪಾಲ ಹಾಗೂ ವಿಜ್ಞಾನ ಲೇಖಕ ಸಾತನೂರು ದೇವರಾಜ್ ಅವರ ಎರಡು ವಿಜ್ಞಾನ ಪುಸ್ತಕಗಳ ಲೋಕಾರ್ಪಣೆ ಸಮಾರಂಭ ನಡೆಯಲಿದೆ.


ಪ್ರಸಿದ್ಧ ಸಾಹಿತಿ ಹಾಗೂ ಜಾನಪದ ವಿದ್ವಾಂಸ ಡಾ.ರಾಮೇಗೌಡ (ರಾಗೌ) ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಪುಸ್ತಕಗಳ ಲೋಕಾರ್ಪಣೆ ಮಾಡುವರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡುವರು. ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಸಾಹಿತಿ ಡಾ.ಪ್ರಸನ್ನ ಸಂತೆಕಡೂರು 'ಜೀನ್ ವೃತ್ತಾಂತ' ಪುಸ್ತಕ ಕುರಿತು ಹಾಗೂ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಜೀವವಿಜ್ಞಾನ ಉಪನ್ಯಾಸಕ ಡಾ.ಎ.ಎನ್.ಸಂತೋಷ್ ಕನ್ನಡ 'ಜೀನ್ ಥೆರಪಿ' ಪುಸ್ತಕ ಕುರಿತು ಮಾತನಾಡುವರು. ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಕೃತಿಕಾರ ಸಾತನೂರು ದೇವರಾಜ್, ಅಖಿಲ ಕರ್ನಾಟ ಲೇಖಕರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ಡಿ.ಎನ್.ಲೋಕಪ್ಪ, ಮಹಿಮಾ ಪ್ರಕಾಶನದ ಪ್ರಕಾಶಕ ಕೆ.ವಿ.ಶ್ರೀನಿವಾಸ್ ಉಪಸ್ಥಿತರಿರುವರು.

ಇಂದಿನಿಂದ ಉಚಿತ ಅಸ್ತಮ ತಪಾಸಣೆ ಶಿಬಿರ



ಮೈಸೂರು,ಜ.23–ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜ.23ರಿಂದ 28ರವರೆಗೆ ಉಚಿತ ಅಸ್ತಮ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಶ್ವಾಸಕೋಶ ತಜ್ಞ ವೈದ್ಯ ಡಾ.ಸುಯೋಗ್ ಯೋಗಣ್ಣ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಅಸ್ತಮ, ಅಲರ್ಜಿ, ಶ್ವಾಸಕೋಶದ ತೊಂದರೆ, ಉಸಿರಾಟದಲ್ಲಿ ತೊಂದರೆ, ಧೂಮಪಾನದ ಕೆಮ್ಮು, ಟಿ.ಬಿ.(ಕ್ಷಯ), ಗೊರಕೆಗೆ ಸಂಬಂಧಪಟ್ಟ ಕಾಯಿಲೆಗಳು ಹೀಗೆ ನಾನಾ ರೋಗ ಲಕ್ಷಣಗಳಿರುವವರು ಕೂಡಲೇ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಮಾಹಿತಿಗೆ 0821–2533600, 9986399862.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.1.2023 ಮಂಗಳವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ,
ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಯುಬಂಟು ಒಕ್ಕೂಟ:** ಡಿಜಿಟಲ್ ಮಾರ್ಕೆಟಿಂಗ್ ಕುರಿತು ಮಹಿಳಾ ಉದ್ಯಮಿಗಳಿಗಾಗಿ ಉಚಿತ ಆಫ್‌ಲೈನ್ ತರಬೇತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪ, ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ಕಿರಣ್ ಪಾಟೀಲ್, ಶ್ರೀಮತಿ ಕೆ.ರತ್ನಪ್ರಭಾ, ಅಧ್ಯಕ್ಷತೆ: ಶ್ರೀಮತಿ ಮಿಕಿಕೊ ತನಕಾ ಸ್ಥಳ: ಸ್ಕ್ಯಾನ್‌ರೇ ಟೆಕ್ನಾಲಜೀಸ್ ಸಭಾಂಗಣ, ಪ್ಲಾಟ್ ನಂ. 360, ಕೆಐಎಡಿಬಿ ರಸ್ತೆ, ಬೆಳಗ್ಗೆ 9 ರಿಂದ.

■ **ಕಾಲೇಜು ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ಮತ್ತು ನಿರ್ವಹಣಾ ಕಾಲೇಜು :** ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಜನಪದ ಮತ್ತು ಭಾವಗೀತೆ ಸ್ಪರ್ಧೆ, ಅಧ್ಯಕ್ಷತೆ : ಪ್ರಾಂಶುಪಾಲ ಪ್ರೊ. ಸೋಮಣ್ಣ, ಉದ್ಘಾಟನೆ : ವಿದ್ವಾನ್ ರಾ.ಸ. ನಂದಕುಮಾರ್, ಉಪಸ್ಥಿತರು : ಡಾ. ಎಸ್. ಮಂಜು, ಕೆ.ಕೆ. ದೇವಾನಂದ ವರಪ್ರಸಾದ್, ಆರ್. ಮಹೇಂದರ್, ಶ್ರೀಮತಿ ದಿವ್ಯಾ ಸಚ್ಚಿದಾನಂದ, ಪ್ರೊ. ಕೃಷ್ಣಮೂರ್ತಿ, ಡಾ. ಬಿ. ರವಿಶಂಕರ್, ಪ್ರೊ. ಹೆಚ್.ಎಸ್.ಧನಲಕ್ಷ್ಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು:** ಫಾರ್ಮಾಕೋವಿಜಿಲೆನ್ಸ್ ಫಾರ್ಮಾಸ್ಯುಟಿಕಲ್ ಕೇರ್ ಅಂಡ್ ಬಯೋಮೆಡಿಕಲ್ ರೀಸರ್ಚ್ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು: ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್ ಅಧ್ಯಕ್ಷ ಡಾ.ಟಿ.ವಿ.ನಾರಾಯಣ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಚಂದ್ರಶೇಖರ್, ಅಧ್ಯಕ್ಷತೆ: ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ಹನುಮಂತಾಚಾರ್ ಜೋಷಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ:** ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆ ಕುರಿತು ಕಾರ್ಯಾಗಾರ, ಉದ್ಘಾಟನೆ: ಶಾಸಕ ಡಾ.ಯತೀಂದ್ರ, ಮುಖ್ಯ ಅತಿಥಿಗಳು: ಉಪ ಪೊಲೀಸ್ ಆಯುಕ್ತ ಎಂ.ಮುತ್ತುರಾಜು, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ನೃಪತುಂಗ ಕನ್ನಡ ಶಾಲೆ, ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ :** ಪರೀಕ್ಷೆಯನ್ನು ಎದುರಿಸುವುದು ಹೇಗೆ? ಕುರಿತು 10ನೇ ತರಗತಿ ವಿದ್ಯಾರ್ಥಿಗಳ ಕಾರ್ಯಾಗಾರ, ಸ್ಥಳ: ಶಾಲೆಯ ಆವರಣ, ರಾಮಕೃಷ್ಣನಗರ, ಬೆಳಗ್ಗೆ 11 ಗಂಟೆಗೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ 125ನೇ ಜನ್ಮ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಮತ್ತು ವ್ಯಕ್ತಿತ್ವ ವಿಕಸನ ಕಾರ್ಯಾಗಾರ, ಸಾನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಬಹುಮಾನ ವಿತರಣೆ: ಕರಾಮುವಿವಿ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಪ್ರೊ.ಕೆ.ಅನಂತರಾಮು ಅವರಿಂದ ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ವ್ಯಕ್ತಿತ್ವದ ಆದರ್ಶಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಉಪಸ್ಥಿತರು: ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಮಹೇಶ ದಳಪತಿ, ನೋಡಲ್ ಅಧಿಕಾರಿ ಡಾ.ಪಿ.ಮಂಜುನಾಥ್, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ದಿ ಮಿಥಿಕ್ ಸೊಸೈಟಿ, ಬೆಂಗಳೂರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಇತಿಹಾಸ ವಿಭಾಗ :** ಪ್ರೊ. ಎ.ವಿ. ನರಸಿಂಹಮೂರ್ತಿ ದತ್ತಿ ಹಾಗೂ ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿ ಸ್ಮಾರಕ ದತ್ತಿ ಉಪನ್ಯಾಸ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ವಿದ್ವಾನ್ ಡಾ. ಎಚ್.ವಿ. ನಾಗರಾಜರಾವ್ ಅವರಿಂದ ತಾಳೆಗರಿಗಳ ಪ್ರಾಮುಖ್ಯತೆ ಕುರಿತು ವಿಷಯ ಮಂಡನೆ, 3ಡಿ ಡಿಜಿಟಲ್ ಕನ್ಸರ್ವೇಷನ್, ಮಿಥಿಕ್ ಸೊಸೈಟಿಯ ಮೈಸೂರು ಯೋಜನಾ ನಿರ್ದೇಶಕರಾದ ಪಿ.ಎಲ್. ಉದಯಕುಮಾರ್ ಅವರಿಂದ ಮಾರ್ಡನ್ ಮೆಥೆಡ್ಸ್ ಫಾರ್ ಎಪಿಗ್ರಾಫಿಕಲ್ ಸ್ಟಡೀಸ್ ವಿತ್ ಸ್ಪೆಷಲ್ ರೆಫರೆನ್ಸ್ ಟು 3ಡಿ ಟೆಕ್ನಾಲಜಿ ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು : ದಿ ಮಿಥಿಕ್ ಸೊಸೈಟಿ ಕಾರ್ಯದರ್ಶಿ ವಿ. ನಾಗರಾಜ್, ಮುಖ್ಯಮಂತ್ರಿಗಳ ಸಲಹೆಗಾರ ಬೇಳೂರು ಸುದರ್ಶನ, ಅಧ್ಯಕ್ಷತೆ : ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ ಸಿ.ಎ. ಶ್ರೀಧರ್, ಉಪಸ್ಥಿತರು : ಎಸ್. ರವಿ, ಪ್ರೊ ಜಿ.ಎಚ್. ನಾಗರಾಜು, ಸ್ಥಳ: ಜೂನಿಯರ್ ಬಿ.ಎ. ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ, ಮೈಸೂರು :** ಶ್ರುತಿಮಂಜರಿ ರಜತ ಸಂಭ್ರಮ, 25ನೇ ವಾರ್ಷಿಕ ಸಂಗೀತೋತ್ಸವ, ಸಂಜೆ 6ಕ್ಕೆ ಉದ್ಘಾಟನೆ: ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ: ರೋಟರಿ ಪಶ್ಚಿಮ ಸಂಸ್ಥೆ ಅಧ್ಯಕ್ಷ ಉಲ್ಲಾಸ್ ಪಂಡಿತ್, ಸಂಜೆ 7ಕ್ಕೆ ವಿದುಷಿ ಡಾ. ಆರ್.ಎನ್. ಶ್ರೀಲತಾ ಅವರಿಂದ ಗಾಯನ, ವಿದುಷಿ ಡಾ. ವೀಣಾ ಸುರೇಶ್ –ಪಿಟೀಲು, ವಿದ್ವಾನ್ ಪ್ರೊ. ಜಿ.ಎಸ್. ರಾಮಾನುಜನ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೃಚ್ಚಂಗಿ, ಸ್ಥಳ:ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ.

■ **ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ ಬೆಂಗಳೂರು ಚಾಪ್ಟರ್, ಬಾಸುದೇವ ಸೋಮಾನಿ ಕಾಲೇಜು, ಮೈಸೂರು :** ಮಹಿಳಾ ಸಬಲೀಕರಣದೊಂದಿಗೆ ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್. ಹೆಗ್ಡೆ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಗೌರವ ಅತಿಥಿಗಳು : ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್, ಕೊಲ್ಕತ್ತಾ ಪ್ರಧಾನ ಕಾರ್ಯದರ್ಶಿ ಡಾ. ಎಸ್. ರಾಮಕೃಷ್ಣ, ಬಾಸುದೇವ ಸೋಮಾನಿ ಕಾಲೇಜು ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಎಸ್. ಪ್ರಭ, ಸ್ಥಳ: ಬಾಸುದೇವ ಸೋಮಾನಿ ಕಾಲೇಜು ಸಭಾಂಗಣ, ಮಧ್ಯಾಹ್ನ 2ಕ್ಕೆ.

■ **ಕನ್ನಡ ಸಾಹಿತ್ಯ ಪರಿಷತ್ತು :** ನೂತನ ದಿನದರ್ಶಿಕೆ ಬಿಡುಗಡೆ, ವಿಶ್ವಮಾನವ ಕುವೆಂಪು ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಜಿಲ್ಲಾ ಕ್ನಡ ಸಾಹಿತ್ಯ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ : ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಸ್ಥಳ: ಕನ್ನಡ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

■ **ಸೇಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು :** ಜೋ–ಫೆಸ್ಟ್–2023, ಅಧ್ಯಕ್ಷತೆ : ಸಂಸ್ಥೆ ಕಾರ್ಯದರ್ಶಿ ರೆ. ಫಾ. ವಿಜಯಕುಮಾರ್, ಮುಖ್ಯ ಅತಿಥಿಗಳು : ಅಭಿಮನ್ಯು ಅಕಾಡೆಮಿ ಸಿಇಓ ಅರ್ಜುನ್ ದೇವಯ್ಯ ತೀಥಮಾಡ, ಹಿನ್ನಲೆ ಗಾಯಕ ನವೀನ್ ಸಜ್ಜು, ಸ್ಥಳ: ಸೇಂಟ್ ಜೋಸೆಫ್ ಸ್ಕೂಲ್, ಜಯಲಕ್ಷ್ಮಿಪುರಂ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ.ಮ.ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ–ಉಮೇಶ್.ಎಸ್., 8.30 "ಉಲಿ ಉಯ್ಯಾಲೆ" ಸರಣಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ–ಟಿ.ಎಸ್.ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ.ಎನ್.ರಘು **ಮಧ್ಯಾಹ್ನ:** 12.30 ದೇವರನಾಮ–ಕೆ.ಎಸ್. ಸುರೇಖಾ, ಮಂಜುಳಾ ಗುರುರಾಜ್, 12.45 ನೇತಾಜಿ ಪ್ರತಿಮೆಯ ಶಿಲ್ಪಿ ಅರುಣ್ ಯೋಗಿರಾಜ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ಸಾಯಿ ತೇಜಸ್ ಚಂದ್ರಶೇಖರ್, 3.00 ಸ್ಮಿತಾ ಶ್ರೀ ಕಿರಣ್–ವೇಣು ವಾದನ, 4.00 ಕಥಾ ಕಾಲಕ್ಷೇಪ "ಕಿಷ್ಕಿಂದ ಮತ್ತು ಸುಂದರ ಕಾಂಡ", ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್ ವಾಣಿ– "ಕೃಷಿ ಮೇಳ", 7.45 ವಿಜ್ಞಾನ ವಿಶೇಷ–ಆಕಾಶ ವೀಕ್ಷಣೆ–ಗ್ರಹತಾರೆಗಳ ಮಾಹಿತಿ ನೇರ ವೀಕ್ಷಕ ವಿವರಣೆ, ಭಾಗವಹಿಸುವ ತಜ್ಞರು–ಡಾ.ಎಸ್.ಎನ್. ಪ್ರಸಾದ್, ಅಮೋಘವರ್ಷ ನಡೆಸಿಕೊಡುತ್ತಾರೆ–ದಿವಾಕರ ಹೆಗಡೆ ಮತ್ತು ಬೇದ್ರೆ ಮಂಜುನಾಥ್, 9.15 ಯಕ್ಷಗಾನದ ಹಾಡುಗಳ–ರಾಮ್ ಸಾಲಿಯಾನ್ ಮತ್ತು ಸಂಗಡಿಗರು, 9.30 ಜಿ.ಉಷಾ–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ–ಗಣಪತಿ ಪದ್ಯಾಣ, ವ್ಯಾಖ್ಯಾನ– ಶ್ರೀಕೃಷ್ಣ ಭಟ್

ಬೂತ್ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ



ಮೈಸೂರು,ಜ.23– ಮೈಸೂರು ಪಾಲಿಕೆ 23ನೇ ವಾರ್ಡಿನ ಹಳೇಬಂಡಿಕೇರಿಯಲ್ಲಿರುವ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮನೆ ಮನೆಗೆ ಕರಪತ್ರಗಳನ್ನು ಹಂಚುವ ಮೂಲಕ ಬೂತ್ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಶಾಸಕ ಎಲ್.ನಾಗೇಂದ್ರ ಅವರಿಗೆ ಭಾರತ ಮಾತೆಯ ಫೋಟೋ ನೀಡುವ ಮೂಲಕ ಸ್ವಾಗತಿಸಲಾಯಿತು. ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಚಾಮರಾಜ ಕ್ಷೇತ್ರದ ಅಧ್ಯಕ್ಷರಾದ ಸೋಮಶೇಖರ್ ರಾಜು, ಪ್ರಧಾನ ಕಾರ್ಯದರ್ಶಿ ರಮೇಶ್, ಪುನೀತ್ ಅಭಿಯಾನದ ಸಂಚಾಲಕ ಶ್ರೀನಿವಾಸ್, ವಾರ್ಡ್ ಅಧ್ಯಕ್ಷ ಸುರೇಂದ್ರ, ಕಾರ್ಯದರ್ಶಿ ಶ್ರೀನಿವಾಸ್, ಫಲಾನುಭವಿಗಳ ಪ್ರಕೋಷ್ಠದ ನಗರ ಸಂಚಾಲಕ ಆರ್.ಪರಮೇಶ, ಹರ್ಷ, ಸುದರ್ಶನ್, ವಿಘ್ನೇಶ್ವರ ಭಟ್, ನವೀನ, ಕೆಂಪರಾಜು, ಪಾಪಣ್ಣ, ನಾಗೇಶ್, ಮಧುಸೂದನ್, ವಿಜಯಾನಂದ, ನಾಗರಾಜು, ಸಚಿನ್ ಇತರರು ಉಪಸ್ಥಿತರಿದ್ದರು.



ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರಿನ ಉದ್ಯಮಿ ಹೆಚ್.ಎಸ್.ಸುಜಿತ್‌ಕುಮಾರ್ ಅವರನ್ನು ಮೈಮುಲ್ ಮಾಜಿ ಅಧ್ಯಕ್ಷ, ಮೈಸೂರು ಎಪಿಎಂಸಿ ಮಾಜಿ ಅಧ್ಯಕ್ಷ, ಹಾಗೂ ಕಾಂಗ್ರೆಸ್ ಮುಖಂಡ ಮಾವಿನಹಳ್ಳಿ ಎಸ್.ಸಿದ್ದೇಗೌಡ, ಉದ್ಯಮಿ ಎಸ್.ರಮೇಶ್‌ಗೌಡ ಆತ್ಮೀಯವಾಗಿ ಅಭಿನಂದಿಸಿ, ಶುಭಕೋರಿದರು. ಈ ವೇಳೆ ಯುವ ಕಾಂಗ್ರೆಸ್ ಮುಖಂಡರಾದ ಹೇಮಂತ್‌ಕುಮಾರ್, ಮಾವಿನಹಳ್ಳಿ ರಮೇಶ್, ಜಯಪುರ ಗ್ರಾಪಂ ಸದಸ್ಯ ಎಸ್.ಸಂದೀಪ್‌ಗೌಡ ಉಪಸ್ಥಿತರಿದ್ದರು.

ಬಜೆಟ್‌ನಲ್ಲಿ ಭರಪೂರ ಕೊಡುಗೆ ನೀಡಲು ಬಿಜೆಪಿ ಸರ್ಕಾರದ ನಿರ್ಧಾರ

ಬಿಪಿಎಲ್ ಕುಟುಂಬಕ್ಕೆ 10 ಕೆಜಿ ಅಕ್ಕಿ, ಅಂಗನವಾಡಿ, ಆಶಾ ಕಾರ್ಯಕರ್ತರು, ವಿವಿಧ ಇಲಾಖೆ ಗುತ್ತಿಗೆ ನೌಕರರಿಗೆ ಗೌರವಧನ ಹೆಚ್ಚಳ, ಮನೆಯೊಡತಿಗೆ 2 ಸಾವಿರ ಸಹಾಯಧನ, ವಿವಿಧ ಮಾಸಿಕ ಪಿಂಚಣಿ ಹೆಚ್ಚಳಕ್ಕೆ ಚಿಂತನೆ

ಬೆಂಗಳೂರು, ಜ.23 (ಕೆಎಂಶಿ)– ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಐದರ ಬದಲು ಹತ್ತು ಕೆಜಿ ಅಕ್ಕಿ, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹಾಗೂ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ನೌಕರರ ಗೌರವಧನ ಹೆಚ್ಚಳ, ಕುಟುಂಬದ ಒಬ್ಬ ಮಹಿಳೆಗೆ ಮಾಸಿಕ ಎರಡು ಸಾವಿರ ಪಿಂಚಣಿ ಸೇರಿದಂತೆ ಭರಪೂರ ಕೊಡುಗೆಗಳನ್ನು ಮುಂಗಡ ಪತ್ರದಲ್ಲಿ ನೀಡಲು ಬಿಜೆಪಿ ಸರ್ಕಾರ ತೀರ್ಮಾನಿಸಿದೆ.

ಅಲ್ಲದೆ, ವಿಕಲಚೇತನ, ವಿಧವಾ, ವೃದ್ಧಾಪ್ಯ ಸೇರಿದಂತೆ ವಿವಿಧ ಮಾಸಿಕ ಪಿಂಚಣಿಯನ್ನು ಹೆಚ್ಚಳ ಮಾಡುವ ಮೂಲಕ ದೊಡ್ಡ ಪ್ರಮಾಣದಲ್ಲಿ ಬಿಜೆಪಿ ಪರವಾದ ಮತ ಕ್ರೋಢೀಕರಿಸಲು ಉದ್ದೇಶಿಸಲಾಗಿದೆ. ವಿಧಾನ ಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಹಣಕಾಸು ಇಲಾಖೆಯ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫೆ.17ರಂದು ಮಂಡಿಸಲಿರುವ 2023–24ನೇ ಸಾಲಿನ ಮುಂಗಡ ಪತ್ರದಲ್ಲಿ ಜನಪ್ರಿಯ ಯೋಜನೆಗಳು ಘೋಷಣೆ ಆಗಲಿವೆ.

ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು



ಪಣ ತೊಟ್ಟಿರುವ ಬಿಜೆಪಿ ನಾಯಕರು, ಮತದಾರರನ್ನು ಸೆಳೆಯಲು ಮುಂಗಡ ಪತ್ರ ವನ್ನು ಬಳಸಿಕೊಳ್ಳುತ್ತಿದ್ದಾರೆ.

ಅಧಿಕಾರಿಗಳು ಈಗಾಗಲೇ ಬಜೆಟ್ ಗಾತ್ರದ ಸ್ವರೂಪವನ್ನು ರೂಪಿಸಿದ್ದಾರೆ. ಸರ್ಕಾರದ ಆದೇಶದಂತೆ ಜನಪ್ರಿಯ ಯೋಜನೆ, ಕಾರ್ಯಕ್ರಮ ರೂಪಿಸುವ ಕಾರ್ಯದಲ್ಲಿ ಅಧಿಕಾರಿಗಳು ಮಗ್ನರಾಗಿದ್ದಾರೆ. ಎಲ್ಲಾ ವರ್ಗದವರಿಗೂ ಸಲ್ಲುವಂತೆ ಕಾರ್ಯಕ್ರಮಗಳು ರೂಪುಗೊಂಡಿದ್ದು, ಅವು ಹೊರಬರಬೇಕಷ್ಟೇ. ಬಿಜೆಪಿಯ ಸರ್ಕಾರ ಇದ್ದುದ್ದರಿಂದಲೇ ಇಂತಹ ಯೋಜನೆಯನ್ನು ಘೋಷಣೆ ಮಾಡಲು ಸಾಧ್ಯ ಎಂಬ ಭಾವನೆ ಜನರಲ್ಲಿ ಮೂಡಿಸಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಎಲ್ಲಾ ಯೋಜನೆಗಳು ಯಥಾವತ್ತಾಗಿ ಜಾರಿಗೊಳ್ಳಲಿವೆ.

ನಾವು ಭರವಸೆ ನೀಡುತ್ತಿಲ್ಲ. ಬಜೆಟ್‌ನಲ್ಲಿ ಮಾಡಿರುವ ಘೋಷಣೆಗಳನ್ನು ಅನುಷ್ಠಾನಗೊಳಿಸಲು ನಮ್ಮನ್ನೇ ಮರು ಆಯ್ಕೆ ಮಾಡಿ ಎಂದು ಮತದಾರರನ್ನು ಬಿಜೆಪಿ ಕೋರಲಿದೆ. ಈಗಾಗಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಪ್ರತಿ ಮನೆಗೆ 200 ಯುನಿಟ್‌ವರೆಗೆ ಉಚಿತ ವಿದ್ಯುತ್, ಮನೆಯೊಡತಿಗೆ ಮಾಸಿಕ 2000 ರೂ ನೀಡುವ ಘೋಷಣೆ ಮಾಡಿದ್ದಾರೆ.

ಮತ್ತೊಂದೆಡೆ ಪೂರ್ಣ ಪ್ರಮಾಣದ ಅಧಿಕಾರ ನೀಡಿದರೆ, ಮತ್ತೆ ರೈತರ ಸಾಲ ಮನ್ನಾ ಮಾಡುವುದಾಗಿ ಜೆಡಿಎಸ್ ಘೋಷಿಸಿದೆ. ಆದರೆ, ಬಿಜೆಪಿ ಚುನಾವಣೆಗೆ ನೀಡುವ ಭರವಸೆಗಳನ್ನು ಮುಂಗಡ ಪತ್ರದಲ್ಲಿ ಪ್ರಕಟಿಸಿ ಆಡಳಿತ ವಿರೋಧಿ ಅಲೆ ಉಂಟಾಗದಂತೆ ತಡೆಯುವ ಪ್ರಯತ್ನ ಮಾಡುತ್ತಿದೆ.

ಬಜೆಟ್‌ನಲ್ಲಿ ನೀಡಿದ ಭರವಸೆಗಳನ್ನು ಚುನಾವಣಾ ಪ್ರಚಾರದ ಸಮಯದಲ್ಲಿ ಬಳಸಿಕೊಳ್ಳಲು ಬಿಜೆಪಿ ಈಗಾಗಲೇ ಕಾರ್ಯತಂತ್ರ ರೂಪಿಸಿದೆ. ಅಷ್ಟೇ ಅಲ್ಲ, ಅಧಿಕಾರಕ್ಕೆ ಬರುವ ಹುಮ್ಮಸ್ಸಿನಲ್ಲಿರುವ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಲು ಉದ್ದೇಶಿರುವ ಕೆಲವು ಪ್ರಮುಖ ವಿಚಾರಗಳನ್ನು ಬಜೆಟ್‌ನಲ್ಲಿ ಬಿಂಬಿಸಿ ನಮ್ಮದು ಎಂದು ಹೇಳಿಕೊಳ್ಳಲು ಹೊರಟಿದೆ.

ಯುವಕನ ಬಲಿ ಪಡೆದ ಹುಲಿ ಮರಳಿ ಕಾಡಿಗೆ

ಯಶಸ್ವಿ ಕಾರ್ಯಾಚರಣೆ

ಹೆಚ್.ಡಿ.ಕೋಟೆ, ಜ.23(ಎಂಕೆ)– ತಾಲೂಕಿನ ನಾಗರಹೊಳೆ ಅಭಯಾರಣ್ಯದ ಬಳ್ಳೆ ಹಾಡಿಯಲ್ಲಿ ನಿನ್ನೆ ಯುವಕ ಹಾಗೂ ಇಂದು ಬಿಡಾಡಿ ಹಸುವೊಂದನ್ನು ಬಲಿ ಪಡೆದ ಹುಲಿಯನ್ನು ಕೂಂಬಿಂಗ್ ಕಾರ್ಯಾಚರಣೆ ಮೂಲಕ ಕಾಡಿಗಟ್ಟಲಾಗಿದೆ. ದಸರಾ ಆನೆ ಅರ್ಜುನನ ಮೂಲಕ ಸೋಮವಾರ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳು, ಸ್ಥಳೀಯ ಆದಿವಾಸಿಗಳಲ್ಲಿ ಆತಂಕ ಸೃಷ್ಟಿಸಿದ್ದ ಹುಲಿಯನ್ನು ಕಾಡಿಗಟ್ಟಿದ್ದಾರೆ. ಈ ಹುಲಿಯು ಭಾನುವಾರ ಬಳ್ಳೆ ಹಾಡಿಯಲ್ಲಿ ಮಂಜು(18) ಎಂಬ ಯುವಕನನ್ನು ಬಲಿ ಪಡೆದಿದ್ದು, ಸೋಮವಾರ ಇಲ್ಲಿನ ಮಾಸ್ತಿಗುಡಿ ಸಮೀಪದಲ್ಲಿದ್ದ ಬಿಡಾಡಿ ಹಸುವೊಂದನ್ನು ಬಲಿ ಪಡೆದಿದೆ. ಜನವಸತಿಯ ಸಮೀಪದಲ್ಲೇ ಬೀಡುಬಿಟ್ಟಿದ್ದ ಬ್ಯಾಕ್ ವಾಟರ್ ಫೀಮೇಲ್ ಟೈಗರ್ ಮತ್ತು ನಾಲ್ಕು ಮರಿಗಳನ್ನು ಬಳ್ಳೆ ಆನೆ ಶಿಬಿರದಲ್ಲಿದ್ದ ಆನೆಗಳ ಮೂಲಕ ಕೂಂಬಿಂಗ್ ಕಾರ್ಯಾಚರಣೆ ನಡೆಸಿ ಕಾಡಿನ ಒಳಭಾಗಕ್ಕೆ ಓಡಿಸಿದ್ದಾರೆ.

ಕನ್ನಡದ ಖ್ಯಾತ ಖಳನಟ ಲಕ್ಷ್ಮಣ್ ವಿಧಿವಶ

ಬೆಂಗಳೂರು: ಹಿರಿಯ ನಟ ಲಕ್ಷ್ಮಣ್ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. 300ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಲಕ್ಷ್ಮಣ್ ಅವರಿಗೆ 74 ವರ್ಷವಾಗಿತ್ತು. ಲಕ್ಷ್ಮಣ್ ಅವರು ಅಂಬರೀಶ್ ಅವರ ಅನೇಕ ಸಿನಿಮಾಗಳಲ್ಲಿ ಬಣ್ಣ ಹಚ್ಚಿದ್ದರು.



ಭಾನುವಾರ ರಾತ್ರಿ ಲಕ್ಷ್ಮಣ್ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಇಂದು ಮುಂಜಾನೆ 3.30ರ ಸುಮಾರಿಗೆ ಅವರನ್ನು ನಾಗರಬಾವಿಯಲ್ಲಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಇಸಿಜಿ ಮಾಡಿ ಅವರನ್ನು ಮನೆಗೆ ಕರೆದುಕೊಂಡು ಬರಲಾಯಿತು. ಮುಂಜಾನೆ ಅವರಿಗೆ ಹೃದಯಾಘಾತ ಸಂಭವಿಸಿದೆ. ಅವರ ಮನೆಯಲ್ಲಿ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ಇಡಲಾಗಿದೆ.

ಲಕ್ಷ್ಮಣ್ ಅವರು ಪೋಷಕ ಪಾತ್ರದ ಮೂಲಕ ಗಮನ ಸೆಳೆದಿದ್ದರು. ಅನೇಕ ಸಿನಿಮಾಗಳಲ್ಲಿ ಅವರು ಪೊಲೀಸ್ ಅಧಿಕಾರಿ ಪಾತ್ರ ಮಾಡಿದ್ದರು. 'ಒಲವಿನ ಉಡುಗೊರೆ', 'ಸಾಂಗ್ಲಿಯಾನ' ಮೊದಲಾದವು ಅವರ ಅಭಿನಯದ ಪ್ರಮುಖ ಚಿತ್ರಗಳು. ಅಂಬರೀಷ್, ವಿಷ್ಣುವರ್ಧನ್, ಶಂಕರ್ ನಾಗ್ ಸೇರಿದಂತೆ ಕನ್ನಡದ ದಿಗ್ಗಜರ ಜೊತೆ ಅವರು ತೆರೆ ಹಂಚಿಕೊಂಡಿದ್ದರು. ಆರಂಭದಲ್ಲಿ ಖಳನಟನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದ ಲಕ್ಷ್ಮಣ್ ನಂತರ ಪೋಷಕ ಪಾತ್ರದಲ್ಲಿ ಅಭಿನಯಿಸಿದ್ದರು. ನಟ ಲಕ್ಷ್ಮಣ್ ನಿಧನಕ್ಕೆ ಹಲವು ಕಲಾವಿದರು ಸಂತಾಪ ಸೂಚಿಸಿದ್ದಾರೆ.

ನಾಡಿನ ವಿಚಾರದಲ್ಲಿ ಎಲ್ಲರೂ ಒಂದಾಗಬೇಕು

ಗಣರಾಜ್ಯೋತ್ಸವ ಪರೇಡ್‌ಗೆ ಕೆಲ ದಿನದಲ್ಲೇ ಅತ್ಯದ್ಭುತ ಸ್ತಬ್ಧಚಿತ್ರ ಸಿದ್ಧ; ಸಿಎಂ ಬಣ್ಣನೆ



ನವದೆಹಲಿಯಲ್ಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸಾಗಲಿರುವ ಕರ್ನಾಟಕದ 'ನಾರಿಶಕ್ತಿ' ಸ್ತಬ್ಧಚಿತ್ರ

ಬೆಂಗಳೂರು, ಜ.23– ನಾಡಿನ ವಿಚಾರದಲ್ಲಿ ಎಲ್ಲರೂ ಒಂದಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನವದೆಹಲಿಯಲ್ಲಿ ಗಣರಾಜ್ಯೋತ್ಸವದಲ್ಲಿ ಕರ್ನಾಟಕ ಸ್ತಬ್ಧಚಿತ್ರ ಸಾಗುವ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾಡಿನ ವಿಚಾರ ಎದುರಾದಾಗ



ಸಣ್ಣ ಭಾವನೆಗಳನ್ನು ಬಿಟ್ಟು ಎಲ್ಲರೂ ಒಂದು ಗೂಡಬೇಕು. ನಾಡಿನ ಗೌರವಕ್ಕೆ ಚ್ಯುತಿಯಾಗದಂತೆ ನಡೆದು ಕೊಳ್ಳಬೇಕು ಎಂದರು. ಕರ್ನಾಟಕದ ಸ್ತಬ್ಧಚಿತ್ರವನ್ನು ನಿರಾಕರಿಸಿದ್ದರ ಸಂಬಂಧ ಸರ್ಕಾರವನ್ನು ಟೀಕಿಸಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ಟಾಂಗ್ ನೀಡಿ, ಯು.ಪಿ.ಎ ಸರ್ಕಾರವಿದ್ದಾಗ 2009ರಲ್ಲಿ ರಾಜ್ಯದಿಂದ ಕಳುಹಿಸಿದ್ದ ಸ್ತಬ್ಧಚಿತ್ರವನ್ನು ನಿರಾಕರಿಸಲಾಗಿತ್ತು. ರಾಜ್ಯದ ಬಗ್ಗೆ ಅಭಿಮಾನವಿದ್ದಿದ್ದರೆ ಆಗ ಒತ್ತಡ ಹೇರಿ ಸ್ತಬ್ಧಚಿತ್ರಕ್ಕೆ ಅವಕಾಶ ಮಾಡಿಕೊಡಬಹುದಿತ್ತು ಎಂದು ಹೇಳಿದರು.

ನಂತರ ಸತತ 14 ವರ್ಷ ಸ್ಥಬ್ಧಚಿತ್ರ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದೆ. ಕಳೆದ ಬಾರಿ ಪ್ರಶಸ್ತಿ ಪಡೆದ ರಾಜ್ಯಗಳಿಗೆ ಬೇರೆ ಸಂದರ್ಭದಲ್ಲಿ ಅವಕಾಶ ನೀಡಬೇಕೆಂಬ ಚಿಂತನೆಯಿತ್ತು. ಆದಾಗ್ಯೂ ನಾನು ಮತ್ತು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ರಕ್ಷಣಾ ಸಚಿವರೊಂದಿಗೆ ಮಾತನಾಡಿ, ಕರ್ನಾಟಕದ ಸ್ತಬ್ಧಚಿತ್ರಕ್ಕೆ ಅವಕಾಶ ಕೇಳಿದೆವು. ಹಾಗೆಯೇ ಅವಕಾಶ ಮಾಡಿಕೊಡಲಾಗಿದ್ದು, ಕೇವಲ 8–10 ದಿನಗಳಲ್ಲಿ 'ನಾರಿ ಶಕ್ತಿ' ವಿಷಯ ವಸ್ತುವಿನಡಿ ಅತ್ಯದ್ಭುತವಾದ ಸ್ತಬ್ಧಚಿತ್ರ ನಿರ್ಮಿಸಲಾಗಿದೆ ಎಂದು ತಿಳಿಸಿದರು.



ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಸಂಸ್ಥೆ(ಮೈಲ್ಯಾಕ್)ಗೆ ಭೇಟಿ ನೀಡಿದ್ದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಜನರಲ್ ಮ್ಯಾನೇಜರ್ ರಾಜೀವ್ ಶರ್ಮ, ಡೆಪ್ಯುಟಿ ಜನರಲ್ ಮ್ಯಾನೇಜರ್ ಕೆ.ಎಸ್.ಅನಂತ ಹಾಗೂ ಉಪ ಪ್ರಾದೇಶಿಕ ಮುಖ್ಯಸ್ಥ ಸೆಲ್ವಕುಮಾರ್ ಅವರನ್ನು ಮೈಲ್ಯಾಕ್ ಅಧ್ಯಕ್ಷ ಆರ್.ರಘು ಅಭಿನಂದಿಸಿದರು. ಈ ವೇಳೆ ಮೈಲ್ಯಾಕ್ ವ್ಯವಸ್ಥಾಪಕ ನಿರ್ದೇಶಕ ಕುಮಾರಸ್ವಾಮಿ, ಜನರಲ್ ಮ್ಯಾನೇಜರ್ ಹರಕುಮಾರ್ ಹಾಗೂ ನಿವೃತ್ತ ಬ್ಯಾಂಕ್ ಅಧಿಕಾರಿ ನಾರಾಯಣಗೌಡರು ಉಪಸ್ಥಿತರಿದ್ದರು.



ಕರ್ನಾಟಕ ಕ್ಷತ್ರಿಯ ಒಕ್ಕೂಟದ ಮಹಿಳಾ ರಾಜ್ಯಾಧ್ಯಕ್ಷೆ ಶ್ರೀಮತಿ ಉಮಾಮೂರ್ತಿ ರಾವ್, ಜಿಲ್ಲಾ ಅಧ್ಯಕ್ಷೆ ಸವಿತಾ ಘಾಟ್ಕೆ, ಯುವ ಘಟಕದ ಪ್ರಧಾನ ಕಾರ್ಯದರ್ಶಿ ಗಣೇಶ್ ಲಾಲಿ, ಮುಖಂಡರಾದ ವಕೀಲ ಶಿವರಾಜ್ ರಾವ್ ಹಾಗೂ ಶ್ರೀಮತಿ ಗೀತಾ ಅವರನ್ನು ಕ್ಷತ್ರಿಯ ಸೀರವಿ ಸಮಾಜದ ಮಹಿಳಾ ಅಧ್ಯಕ್ಷೆ ಶ್ರೀಮತಿ ಇಂದಿರಾ, ಹೇಮರಾಮ ಹಾಗೂ ರಾಮಚಂದ್ರ ಅವರು ಅಭಿನಂದಿಸಿದರು. ಇದೇ ವೇಳೆ ಜ.29ರಂದು ನಡೆಯಲಿರುವ ಕರ್ನಾಟಕ ಕ್ಷತ್ರಿಯ ಒಕ್ಕೂಟದ ಬೃಹತ್ ಸಮಾವೇಶ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಇಂದು ಭತ್ತ, ರಾಗಿ ಖರೀದಿ ಉದ್ಘಾಟನೆ

ಮೈಸೂರು,ಜ.23– ರೈತರಿಗೆ ಮಾಹಿತಿ ನೀಡುವ ಉದ್ದೇಶದಿಂದ 2022–23ನೇ ಸಾಲಿನ ಭತ್ತ ಮತ್ತು ರಾಗಿ ಖರೀದಿಯ ಉದ್ಘಾಟನೆಯನ್ನು ಜ.24 ರಂದು ಸಂಜೆ 4.30 ಗಂಟೆಗೆ ಬಂಡೀಪಾಳ್ಯದ ಬಿ–ಬ್ಲಾಕ್‌ನ ಎಪಿಎಂಸಿ ಯಾರ್ಡ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಸಹಕಾರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದು, ಸದರಿ ಕಾರ್ಯಕ್ರಮಕ್ಕೆ ಶಾಸಕರಾದ ಜಿ.ಟಿ.ದೇವಗೌಡ, ಯತೀಂದ್ರ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಹಾಗೂ ಇತರರು ಮುಖ್ಯ ಅತಿಥಿಗಳು ಆಗಮಿಸಲಿದ್ದಾರೆ. ಕಾರ್ಯಕ್ರಮಕ್ಕೆ ಸಾರ್ವಜನಿಕರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಬಂಡೀಪಾಳ್ಯ ಖರೀದಿ ಕೇಂದ್ರದ ಖರೀದಿ ಅಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದು, ನಾಳೆ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ವರ್ಗಾವಣೆ ಕೌನ್ಸಿಲಿಂಗ್

ಮೈಸೂರು,ಜ.23– ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ 2022–23ನೇ ಸಾಲಿನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ವರ್ಗಾವಣೆ ಕೌನ್ಸಿಲಿಂಗ್ ನಿಗದಿಪಡಿಸಲಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಜ.24ರಂದು ಬೆಳಗ್ಗೆ ತಾಲೂಕು ಹಂತದಲ್ಲಿ ಹಾಗೂ ಮಧ್ಯಾಹ್ನ ಜಿಲ್ಲಾ ಹಂತದಲ್ಲಿ ಪ್ರಾಥಮಿಕ ವಿಭಾಗದವರಿಗೆ ಕೌನ್ಸಿಲಿಂಗ್ ನಡೆಯಲಿದ್ದು, ಜ.25ರಂದು ಜಿಲ್ಲಾ ಹಂತದಲ್ಲಿ ಪ್ರೌಢಶಾಲಾ ವಿಭಾಗದವರಿಗೆ ಕೌನ್ಸಿಲಿಂಗ್ ನಡೆಯಲಿದೆ. ಕೌನ್ಸಿಲಿಂಗ್ ದಿನ ಬೆಳಗ್ಗೆ 10 ಗಂಟೆಗೆ ಕಚೇರಿ ಆವರಣದಲ್ಲಿ ತಪ್ಪದೇ ಎಲ್ಲ ಶಿಕ್ಷಕರು ಕೌನ್ಸಿಲಿಂಗ್‌ಗಳಿಗೆ ಹಾಜರಾಗಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಆಸ್ತಿ ಕಬಳಿಸುವ ಯತ್ನ; ಆರೋಪ



ಮೈಸೂರು,ಜ.23(ಪಿಎಂ)– ರಾಜು ಕ್ಷತ್ರಿಯ ಟ್ರಸ್ಟ್‌ನ ಪದಾಧಿಕಾರಿಗಳು ಟ್ರಸ್ಟ್‌ನ ಮಾತೃಸಂಸ್ಥೆಯಾದ ರಾಜು ಕ್ಷತ್ರಿಯ ಮಹಾಮಂಡಳಿಯ ಆಸ್ತಿ ಕಬಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಮಹಾಮಂಡಳಿ ಪದಾಧಿಕಾರಿಗಳು ಆರೋಪಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಮಂಡಳಿ ಅಧ್ಯಕ್ಷ ಸಿರಿಬಾಲು, ಮೈಸೂರಿನ ಸರಸ್ವತಿಪುರಂನ 4ನೇ ಅಡ್ಡರಸ್ತೆಯಲ್ಲಿರುವ (ನಂ.2899, ಸಿಹೆಚ್–15) ಮಹಾ ಮಂಡಳಿ ಆಸ್ತಿಯನ್ನು ಹೆಚ್ಚಿನ ಅಭಿವೃದ್ಧಿ, ಉಸ್ತುವಾರಿಗೆಂದು ಷರತ್ತುಗಳೊಂದಿಗೆ ಸದರಿ ಟ್ರಸ್ಟ್‌ಗೆ ವಹಿಸಿಕೊಡಲಾಗಿದೆ. ಆದರೆ ಯಾವುದೇ ಷರತ್ತುಗಳನ್ನು ಪಾಲಿಸದೇ ಸದರಿ ಆಸ್ತಿಯು ಟ್ರಸ್ಟ್‌ಗೆ ಸೇರಿದ್ದೆಂದು ಕೋರ್ಟ್‌ನಲ್ಲಿ ದಾವೆ ಸಹ ಹೂಡಿದ್ದರು ಎಂದರು. ಇದೀಗ ಟ್ರಸ್ಟ್ ಸ್ಥಾಪಿಸಿ 86 ವರ್ಷಗಳು ಆಗದೇ ಇದ್ದರೂ 86ನೇ ವಜ್ರ ಮಹೋತ್ಸವ ಆಚರಿಸಿದ್ದಾರೆ ಎಂದು ದೂರಿದರು. ಮಹಾಮಂಡಳಿ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಕಾರ್ಯದರ್ಶಿ ನರಸಿಂಹರಾಜು, ಉಪಾಧ್ಯಕ್ಷ ಶಂಕರ್ ರಾಜು, ಖಜಾಂಚಿ ಪುಟ್ಟರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ಉಚಿತ ತಪಾಸಣೆ; ವಿಶೇಷ ಚಿಕಿತ್ಸಾ ಶಿಬಿರ

ಮೈಸೂರು,ಜ.23– ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಹೊರರೋಗಿ ಪಂಚಕರ್ಮ ವಿಭಾಗದಲ್ಲಿ (ರೂಂ ನಂ.–14) ಜನವರಿ ತಿಂಗಳ ಪ್ರತೀ ಸೋಮವಾರ ಮತ್ತು ಮಂಗಳವಾರ ದಂದು ಪ್ರಿ ಡಯಾಬಿಟಿಸ್ ಮತ್ತು ಬಾರ್ಡರ್ ಲೈನ್ ಡಯಾಬಿಟಿಸ್ ತೊಂದರೆಗಳಿಗೆ ಉಚಿತ ತಪಾಸಣಾ ಮತ್ತು ವಿಶೇಷ ಚಿಕಿತ್ಸಾ ಶಿಬಿರ ನಡೆಸಲಾಗುತ್ತಿದೆ. ಶಿಬಿರದಲ್ಲಿ ಉಚಿತ ಆಯುರ್ವೇದ ಔಷಧಿಗಳನ್ನು ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಪಂಚಕರ್ಮ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ ಡಾ.ಮಾನಸ ಶೆಟ್ಟಿ (ದೂ.ಸಂ : 8867851004) ಅವರನ್ನು ಬೆಳಗ್ಗೆ 9ರಿಂದ ಸಂಜೆ 4 ರವರೆಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಚಾರ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು 317ಜಿ, ಲಯನ್ಸ್‌ನ ಜಿಲ್ಲಾ ಗೌವರ್ನರ್ ಆಗಿ ಆಯ್ಕೆಯಾದ ಡಾ.ಎನ್.ಕೃಷ್ಣೇಗೌಡ ಅವರನ್ನು ವಿವೇಕಾ ಸೋಷಿಯಲ್ ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು. ಕ್ಲಬ್‌ನ ಕಾರ್ಯದರ್ಶಿ ಡಿ.ಹರೀಶ್, ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮರು ಚಾಲನೆ

ವಿಧಾನಸಭಾ ಚುನಾವಣೆ; ಐದು ಕ್ಷೇತ್ರಗಳ ಅಭ್ಯರ್ಥಿ ಘೋಷಣೆ



ಬೆಂಗಳೂರು,ಜ.23–ಸರ್ವೋದಯ ಕರ್ನಾಟಕ ಪಕ್ಷದ ಮರು ಚಾಲನಾ ಸಮಾರಂಭದಲ್ಲಿ ರಾಜ್ಯದ ಐದು ವಿಧಾನಸಭಾ ಕ್ಷೇತ್ರಗಳಿಗೆ ಅಧಿಕೃತ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ.

ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಮುದಾಯ ಭವನದಲ್ಲಿ ಸೋಮವಾರ 'ಶ್ರೀಸಾಮಾನ್ಯನ ಸರ್ವಾಂಗೀಣ ಅಭಿವೃದ್ಧಿ' ಧ್ಯೇಯ ವಾಕ್ಯದೊಂದಿಗೆ ಸರ್ವೋದಯ ಕರ್ನಾಟಕ ಪಕ್ಷದ ಮರು ಚಾಲನೆ ನೀಡಲಾಗಿದ್ದು, ಇದೇ ವೇಳೆ ಮೇಲುಕೋಟೆ ವಿಧಾನಸಭಾ ಕ್ಷೇತ್ರಕ್ಕೆ ದರ್ಶನ್ ಪುಟ್ಟಣ್ಣಯ್ಯ, ಮಂಡ್ಯ ಕ್ಷೇತ್ರಕ್ಕೆ ಎಸ್.ಸಿ.ಮಧುಚಂದನ್, ವಿರಾಜಪೇಟೆಗೆ ಮನುಸೋಮಯ್ಯ, ಬೆಳ್ತಂಗಡಿಗೆ ಆದಿತ್ಯ ಕೊಲ್ಲಾಜೆ ಹಾಗೂ ಬೀಳಗಿ ಕ್ಷೇತ್ರಕ್ಕೆ ಶೈಲಾ ನಾಯಕ್ ಅವರನ್ನು ಮುಂಬರುವ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಸಮಾರಂಭದಲ್ಲಿ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಸರ್ವೋದಯ ಕರ್ನಾಟಕ ಪಕ್ಷ ಮರು ಚಾಲನೆ ಪಡೆದಿದೆ. 2005ರಲ್ಲಿ ಅಸ್ತಿತ್ವಕ್ಕೆ ಬಂದ ಈ ಪಕ್ಷ ರೈತ, ದಲಿತ ಚಳವಳಿ ಪರ ನಿಂತಿತ್ತು. ದಿವಂಗತ ಪುಟ್ಟಣ್ಣಯ್ಯ, ದೇವನೂರ ಮಹಾದೇವ ಇನ್ನಿತರ ಪ್ರಮುಖರು 21–22 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದರು. ದೇಶದಲ್ಲಿ ರೈತರು ಹಾಗೂ ದಲಿತರು ಒಟ್ಟುಗೂಡಿ ಸ್ಥಾಪಿಸಿದ ಮೊದಲ ಪಕ್ಷ ಎನ್ನುವ ಹೆಗ್ಗಳಿಕೆಗೂ ಪಾತ್ರವಾಗಿತ್ತು. ಮಿತ್ರ ಸಂಘಟನೆಯಾದ ಸ್ವರಾಜ್ ಇಂಡಿಯಾ ಚುನಾವಣಾ ಕಣದಿಂದ ಹಿಂದೆ ಸರಿದಿತ್ತು ಆದರೆ ಈ ಬಾರಿ ಒಗ್ಗಟ್ಟಿನಿಂದ ಚುನಾವಣೆ ಎದುರಿಸಲು ಸಜ್ಜಾಗಿದ್ದೇವೆ ಎಂದರು.

ಹಿರಿಯ ಚಿಂತಕ ಮೈಕೆಲ್ ಫರ್ನಾಂಡಿಸ್ ಮಾತನಾಡಿ, ದೇಶದ ಶೇ.40ರಷ್ಟು ಆಸ್ತಿ ಶೇ.3 ರಷ್ಟು ಜನರ ಬಳಿ ಇರುವುದು ದುರದೃಷ್ಟಕರ. ಅಂಬಾನಿ, ಅದಾನಿಯಂತವರು ಭಾರೀ ಶ್ರೀಮಂತರಾಗುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಅಸಂವಿಧಾನಿಕ ಪ್ರಕ್ರಿಯೆಗಳು ನಡೆಯುತ್ತಿರುವ ಪರಿಸ್ಥಿತಿ ಯಲ್ಲಿ ಸಮಾನ ಮನಸ್ಕ ಪಕ್ಷಗಳು ಒಕ್ಕೂಟ ಮಾಡಿಕೊಂಡು ಚುನಾವಣೆಯಲ್ಲಿ ಹೋರಾಟ ನಡೆಸಬೇಕೆಂದು ಸಲಹೆ ನೀಡಿದರು.

ಸಫಾಯಿ ಕರ್ಮಚಾರಿ ಅಭಿಯಾನದ ಬೇಜವಾಡ ವಿಲ್ಸನ್, ದೇಶದಲ್ಲಿ ಇನ್ನೂ ಮಲ ಹೊರುವುದನ್ನು ತಪ್ಪಿಸಲಾಗಿಲ್ಲ. ಇದಕ್ಕಾಗಿ ಸೂಕ್ತ ಯಂತ್ರೋಪಕರಣಗಳ ಬಳಕೆ ಆಗುತ್ತಿಲ್ಲ. ಅಸ್ಪೃಶ್ಯತೆ ಇನ್ನೂ ಜೀವಂತವಾಗಿರುವ ಬಗ್ಗೆ ದೇವನೂರು ಮಹದೇವರಂತೆ ನನಗೂ ತೀವ್ರ ನೋವಾಗಿದೆ ಎಂದು ಹೇಳಿದರು. ಕವಿಯತ್ರಿ ಕೆ ಷರೀಫಾ, ಸಂಸ್ಥಾಪನಾ ಸದಸ್ಯ ಇಂದೂಧರ ಹೊನ್ನಾಪುರ ಮಾತನಾಡಿದರು.

ಶ್ರದ್ಧಾಂಜಲಿ: ಸಮಾರಂಭದಲ್ಲಿ ಇತ್ತೀಚೆಗೆ ನಿಧನರಾದ ಹಿರಿಯ ಸಮಾಜವಾದಿ ಪ. ಮಲ್ಲೇಶ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಾಹಿತಿ ದೇವನೂರು ಮಹಾದೇವ, ಸರ್ವೋದಯ ಕರ್ನಾಟಕ ಪಕ್ಷದ ಅಧ್ಯಕ್ಷ ಚಾಮರಸ ಮಾಲಿ ಪಾಟೀಲ್, ಕಾರ್ಯಾಧ್ಯಕ್ಷ ಅಮ್ಜದ್ ಪಾಷಾ, ಖಜಾಂಚಿ ಶಿವರಾಜ್, ಸುನೀತಾ ಪುಟ್ಟಣ್ಣಯ್ಯ, ಕುಷ್ಟಗಿ, ಗುರುಪ್ರಸಾದ್ ಕೆರಗೋಡು, ಪ್ರಸನ್ನ ಎನ್.ಗೌಡ, ಜೆ.ಎಂ. ವೀರ ಸಂಗಯ್ಯ, ದರ್ಶನ್ ಪುಟ್ಟಣ್ಣಯ್ಯ, ಎಸ್.ಸಿ. ಮಧುಚಂದ್ರನ್, ತಗ್ಗಳ್ಳಿ ಪ್ರಸನ್ನ ಸೇರಿದಂತೆ ಮುಖಂಡರು, ಚಿಂತಕರು, ರೈತ ಮುಖಂಡರು ಉಪಸ್ಥಿತರಿದ್ದರು.



ನಕ್ಕರೆ ಅದೇ ಸ್ವರ್ಗ



ಒಬ್ಬಾತ : ನನ್ನ ಹೆಂಡ್ತಿ ವಟವಟ ಮಾತಾಡ್ತಾನೆ ಇರ್ತಾಳೆ ತಲೆ ಕೆಟ್ಟು ಹೋಗುತ್ತೆ !

ಮತ್ತೊಬ್ಬಾತ : ನನ್ನ ಹೆಂಡ್ತಿಯೂ ಹೀಗೆ ಮಾತಾಡ್ತಿದ್ಲು. ಈಗ ಬಾಯಿ ಮುಚ್ಕೊಂಡಿದ್ದಾಳೆ.

ಒಬ್ಬಾತ : ಹೇಗೆ ಸಾಧ್ಯವಾಯ್ತೊ...!

ಮತ್ತೊಬ್ಬಾತ : ಏನಿಲ್ಲ ಕಣೋ, ಮೇಕಪ್ ಮಾಡ್ಕೋತಿದ್ದಾಗ ಲಿಪ್‌ಸ್ಟಿಕ್ ಕೊಡು ಅಂದ್ಲು, ತಕ್ಷಣ ಫೆವಿಕಾಲ್ ಟ್ಯೂಬ್ ಕೈಗೆ ಕೊಟ್ಟೆ ಅಷ್ಟೇ...!!

ಮೈಸೂರು ಮಿತ್ರ

ಮಂಗಳವಾರ, 24 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದುಃಖಿತರಾಗಿದ್ದರೂ ತಮಗಿಂತ ಹೆಚ್ಚು ದುಃಖಿತರಾದವರನ್ನು ನೋಡಿಯಾದರೂ ಬದುಕು ಸಾಗಿಸಬೇಕು. –ನೀತಿಸಾರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡುಗೆ ಯಾಕೆ ಹಿಂಗೆ ಅಂದ್ರೆ ಕೋಣೆ ಕಿರಿದಾಗಿತ್ತು ಅಂದ್ಲಂತೆ

ನಿಮ್ಮ ಪತ್ರಗಳು

ಒಟ್ಟಾಗಿ ಅಭಿನಂದಿಸೋಣವೇ?

ಮಾನ್ಯರೆ,

ಸೇಡಂ ತಾಲೂಕಿನ ಮಳಖೇಡದಲ್ಲಿ ಇತ್ತೀಚಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು 52,072 ಬಂಜಾರ ಸಮುದಾಯದ ಕುಟುಂಬಗಳಿಗೆ ಏಕಕಾಲಕ್ಕೆ ನಿವೇಶನ ಹಕ್ಕುಪತ್ರ ವಿತರಿಸಿದ ಬಗ್ಗೆ (ಸಾಂಕೇತಿಕವಾಗಿ) ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದೆ. ಇದೇ ಸಂದರ್ಭದಲ್ಲಿ ಮಾತನಾಡಿರುವ ರಾಜ್ಯ ಕಂದಾಯ ಸಚಿವ ಅಶೋಕ್ ರಾಜ್ಯದ ಮೂರು ಸಾವಿರ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾವು ಮಾಡಿದ ಅಡುಗೆಯನ್ನು ಬಿಜೆಪಿ ಬಡಿಸುತ್ತಿದೆ ಎಂದು ವ್ಯಂಗ್ಯವಾಗಿ ಹೇಳಿ, ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆ 2013 ರಿಂದ 2018 ರವರೆಗಿನ ಅವರ ಸರ್ಕಾರದ ಅವಧಿಯಲ್ಲಿ ಪ್ರಾರಂಭ ಮಾಡಲಾಯಿತು. ಈ ಬಗ್ಗೆ ಸಮಿತಿಯೊಂದನ್ನು ರಚಿಸಿ, ಅದನ್ನು ಅನುಷ್ಠಾನಗೊಳಿಸಲು ಐಎಎಸ್ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ಮಾಡಲಾಗಿತ್ತು ಎಂದು ಹೇಳಿರುವ ಅವರು, ನಂತರ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿಲ್ಲ. ಹಾಗಾಗಿ ತಮ್ಮ ಪಕ್ಷಕ್ಕೆ ಹಕ್ಕು ಪತ್ರ ವಿತರಿಸಲು ಸಾಧ್ಯವಾಗಲಿಲ್ಲ ಎಂದು ಹೇಳಿ ಇದು ತಮ್ಮ ಸರ್ಕಾರದ ಸಾಧನೆ ಎಂದು ಪರೋಕ್ಷವಾಗಿ ಹೇಳಿದ್ದಾರೆ. ಅಡುಗೆ ಯಾರೇ ಮಾಡಿದರೂ, ಬಡಿಸುವವರೇ ಕ್ರೆಡಿಟ್ ತೆಗೆದುಕೊಳ್ಳುವ ಹಾಗೆ ಪ್ರಸ್ತುತ ಸನ್ನಿವೇಶದಲ್ಲಿ ಆಡಳಿತಾರೂಢ ಬಿಜೆಪಿ ರಾಜಕೀಯ ಲಾಭ ಪಡೆದಿದೆ. ಅದೇನೇ ಇರಲಿ, ಎರಡು ಪಕ್ಷಗಳ ಶ್ರಮದಿಂದ ಸೂರಿಲ್ಲದ ಜನರಿಗೆ ತಮ್ಮದೇ ಆದ ಸೂರು ದೊರಕ್ಕಿದ್ದು, ಇದಕ್ಕಾಗಿ ಅಡುಗೆ ಮಾಡಿದವರು ಹಾಗೂ ಅದನ್ನು ಬಡಿಸಿದವರು–ಎರಡೂ ಪಕ್ಷಗಳನ್ನು ಅಭಿನಂದಿಸೋಣವೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮೈಸೂರು ವಿವಿ ಅತಿಥಿ ಉಪನ್ಯಾಸಕರ ಪರಿಷ್ಕೃತ ವೇತನಕ್ಕೆ ಆಗ್ರಹ

ಮಾನ್ಯರೆ,

ವಿಧಾನ ಪರಿಷತ್ ಮಾಜಿ ಉಪಸಭಾಪತಿ, ಹಾಲಿ ಸದಸ್ಯರಾದ ಮರಿತಿಬ್ಬೇಗೌಡರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮೈಸೂರು ವಿವಿ ಅತಿಥಿ ಉಪನ್ಯಾಸಕರ ಪರಿಷ್ಕೃತ ವೇತನ ನೀಡಲು, ಮೈಸೂರು ವಿ ವಿ ರಚಿಸಿದ್ದ ಸಮಿತಿಯು ಆರು ತಿಂಗಳು ಅಧ್ಯಯನ ನಡೆಸಿ ತಿಂಗಳಿಗೆ 28 ಸಾವಿರ ರೂ.ಗಳಿಂದ 37 ಸಾವಿರ ರೂಗಳಿಗೆ ವೇತನ ಪರಿಷ್ಕರಿಸಿದ್ದು, ಸಿಂಡಿಕೇಟ್ ಸಭೆಯೂ ಅನುಮೋದನೆ ನೀಡಿ, ಒಂದು ತಿಂಗಳು ಪರಿಷ್ಕೃತ ವೇತನವನ್ನು ನೀಡಿ, ನಂತರ ಏಕಾಏಕಿ, ಏಕಪಕ್ಷೀಯವಾಗಿ ಅನಧಿಕೃತವಾಗಿ ಹಿಂಪಡೆದಿರು ವುದು ವಿವಿ ನಿಯಮಾವಳಿಗೆ ವಿರುದ್ಧವಾಗಿದೆ ಎಂದು ಕಿಡಿಕಾರಿರುವ ಸಂಗತಿ ಶ್ಲಾಘನೀಯ. ನಾನು ಈ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ಗಮನ ಸೆಳೆದಾಗ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಅವರು ಅಧಿವೇಶನ ಮುಗಿದ ಬಳಿಕ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರು. ಇದುವರೆಗೂ ಕ್ರಮವಹಿಸಿಲ್ಲ. ತಕ್ಷಣವೇ ಉನ್ನತ ಶಿಕ್ಷಣ ಸಚಿವರು ಆರ್ಥಿಕ ಇಲಾಖೆ, ಮೈಸೂರು ವಿವಿ ಅಧಿಕಾರಿಗಳ ಸಭೆ ನಡೆಸಿ ಯುಜಿಸಿ ನಿಯಮದಂತೆ ಅತಿಥಿ ಉಪನ್ಯಾಸಕರಿಗೆ ಪರಿಷ್ಕೃತ ವೇತನ ನೀಡಲು ಕ್ರಮ ಕೈಗೊಳ್ಳಬೇಕು. ಮೈಸೂರು ವಿವಿಯಲ್ಲಿ 406 ಖಾಯಂ ಹುದ್ದೆಗಳು ಬಹಳ ವರ್ಷಗಳಿಂದ ಖಾಲಿ ಉಳಿದಿವೆ. ಕಳೆದ 12 ವರ್ಷಗಳಿಂದ 77 ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡಿಲ್ಲ. ಹೈದರಾಬಾದ್ ಕರ್ನಾಟಕದಡಿ 17 ಹುದ್ದೆ ಭರ್ತಿ ಮಾಡಿಲ್ಲ. ಈ 406 ಹುದ್ದೆಗಳಿಂದ ಮಾಸಿಕ 10 ಕೋಟಿ ಸರ್ಕಾರಕ್ಕೆ ಉಳಿಯಲಿದೆ. ವರ್ಷಕ್ಕೆ 120 ಕೋಟಿ ಉಳಿಯಲಿದ್ದು, ಪರಿಷ್ಕೃತ ವೇತನ ನೀಡಿದರೆ ಕೇವಲ 24 ಕೋಟಿ ರೂ ವೆಚ್ಚವಾಗಲಿದೆ. ವಿವಿಯಲ್ಲಿ ಸುಮಾರು 900 ಅತಿಥಿ ಉಪನ್ಯಾಸಕರಿದ್ದು ಇವರು ಕೆಲಸ ಮಾಡದಿದ್ದರೆ ಪಾಠ, ಪ್ರವಚನಕ್ಕೆ ಅಡ್ಡಿಯಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ

–ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ.ನಗರ, ಮೈಸೂರು.

ಮೈಸೂರಿನಲ್ಲಿ ಬೆಂಬಿಡದೆ ಕಾಡುತ್ತಿರುವ ಚಿರತೆ

ಮಾನ್ಯರೆ,

ಮೈಸೂರಿನ ಜಿಲ್ಲೆಯಾದ್ಯಂತ ಸುಮಾರು ಮೂರು ತಿಂಗಳಿಂದ ಚಿರತೆಗಳ ಹಾವಳಿಯು ಅತಿಯಾಗಿದ್ದು, ನಾಲ್ವರನ್ನು ಬಲಿ ತೆಗೆದುಕೊಂಡು ಕುಟುಂಬಸ್ಥರನ್ನು ಅನಾಥರನ್ನಾಗಿ ಮಾಡಿದೆ. ಅದರ ಬೆನ್ನ ಹಿಂದೆಯೇ ಟಿ.ನರಸೀಪುರ ತಾಲೂಕಿನ ಕನ್ನನಾಯಕನಹಳ್ಳಿಯ ಮಹಿಳೆಯು ಹಸುವಿಗೆ ಹುಲ್ಲನ್ನು ತರಲೆಂದು ಸಂಜೆ ಹೊರ ಹೋದಾಗ ಚಿರತೆ ದಾಳಿ ಮಾಡಿ, ಆಕೆಯನ್ನು ಬಲಿಪಡೆದಿದೆ. ಅದರ ಬೆಳಿಗ್ಗೆ ಪಕ್ಕದ ಊರಾದ ಹೊರಳಹಳ್ಳಿಯಲ್ಲಿ ಸಂಜೆ 6 ಗಂಟೆಗೆ ಅಂಗಡಿಗೆ ಬಿಸ್ಕತ್ ತೆಗೆದುಕೊಳ್ಳಲು ಬಂದಿದ್ದ 11 ವರ್ಷದ ಬಾಲಕನ ಮೇಲೆ ದಾಳಿ ನಡೆಸಿ, ಹೊತ್ತೊಯ್ದಿದೆ. ಈ ವಿಷಯ ತಿಳಿದು ಕುಟುಂಬಸ್ಥರು ಯುವಕನಿಗಾಗಿ ಎಲ್ಲೆಡೆ ಹುಡುಕಿದರೂ ಸಿಗಲಿಲ್ಲ. ಆದರೆ ಬೆಳಗ್ಗೆ ದೇಹದ ಅರ್ಧ ಭಾಗವೇ ಇಲ್ಲದ ಯುವಕನ ಶವವು ಪತ್ತೆಯಾಯಿತು. ಈ ರೀತಿಯ ಭಯಾನಕ ಘಟನೆಯನ್ನು ನೋಡಿದಂತಹ ಗ್ರಾಮಸ್ಥರು ಹಾಗೂ ಕುಟುಂಬದವರಿಗೆ ಆಘಾತವೇ ಸಂಭವಿಸಿದೆ. ಹೀಗೆ ಚಿರತೆಯ ದಾಳಿಯಿಂದಾಗಿ ಮೈಸೂರು ಜಿಲ್ಲೆಯಲ್ಲಿ ನಾಲ್ಕು ಸಾವು ಸಂಭವಿಸಿದೆ. ಇನ್ನು ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ಘಟನೆಗಳು ಸಂಭವಿಸದ ಹಾಗೆ ಅರಣ್ಯ ಇಲಾಖೆ ಹಾಗೂ ಜಿಲ್ಲಾಡಳಿತ ಕಠಿಣ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಜನರನ್ನು ಪ್ರಾಣಾಪಾಯದಿಂದ ಕಾಪಾಡಲು ಮುಂದಾಗಬೇಕಿದೆ.

–ಕೆ. ಎನ್ ಅನುಶ್ರೀ, ಮಾನಸ ಗಂಗೋತ್ರಿ, ಮೈಸೂರು

ಗ್ರಂಥಾಲಯ ಇಲಾಖೆಯಲ್ಲಿ ಹಣವಿಲ್ಲವೇ?

ಮಾನ್ಯರೇ

ಕರ್ನಾಟಕ ರಾಜ್ಯ ಸರಕಾರದ ಗ್ರಂಥಾಲಯ ಇಲಾಖೆಯು ಹಲವಾರು ಯೋಜನೆಗಳಲ್ಲಿ ಒಂದೊಂದು ವರ್ಷ ಪ್ರಕಟವಾದ ಪುಸ್ತಕಗಳನ್ನು ಲೇಖಕರಿಂದ ಹಾಗೂ ಪ್ರಕಾಶಕರಿಂದ ಕೊಳ್ಳುತ್ತದೆ ಹಾಗೂ ಹಣವನ್ನು ನೇರವಾಗಿಯೇ ಲೇಖಕ ಅಥವಾ ಪ್ರಕಾಶಕರ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ. ನನ್ನ ಸುದರ್ಶನ ಪ್ರಕಾಶನದಿಂದ ಪ್ರಕಟವಾದ 'ಚಿಗುರಿನ ಆಸೆ' ಕಥಾ ಸಂಕಲನವನ್ನು 1920ರಲ್ಲಿ ಗ್ರಂಥಾಲಯ ಇಲಾಖೆಯು ರಾಜ್ಯದ ಗ್ರಂಥಾಲಯಗಳಿಗೆ ಪೂರೈಕೆ ಮಾಡುವ ಸಲುವಾಗಿ ಕೊಳ್ಳಲು ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿತ್ತು ಹಾಗೂ ಮೊದಲು ಎಂಬತ್ತು ಪುಸ್ತಕಗಳನ್ನು ಪೂರೈಸುವಂತೆ ಲೇಖಕಿ ಮಾಲತಿ ಶಿವರಾಂ ಅವರಿಗೆ ಸೂಚಿಸಿತು. ಲೇಖಕಿಯವರು 79 ಪುಸ್ತಕಗಳನ್ನು ಇಲಾಖೆಗೆ ಪೂರೈಸಿ ಅಗತ್ಯ ಸ್ವೀಕೃತಿಯನ್ನೂ ಪಡೆದರು. ಆ ಪುಸ್ತಕಗಳ ಹಣವನ್ನು ಲೇಖಕಿಯವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುವುದೆಂದೂ ಹೇಳಲಾಗಿತ್ತು. 16.01.2021 ರಂದು ಪುಸ್ತಕಗಳನ್ನು ಪಡೆದ ಇಲಾಖೆ ಲೇಖಕಿಗೆ ಹಣ ಪಾವತಿ ಮಾಡಲು ಮರೆತೇ ಬಿಟ್ಟಿದೆ ತಮ್ಮ ಕೈಯಿಂದ ಹಣ ಹಾಕಿ ಪುಸ್ತಕವನ್ನು ಗ್ರಂಥಾಲಯ ಇಲಾಖೆಗೆ ಪೂರೈಕೆ ಮಾಡಿದ ಹಣವನ್ನು ನಿರೀಕ್ಷಿಸುತ್ತಿರುವ ಲೇಖಕಿಯ ಗತಿಯೇನಾಗಬೇಕು? ಅದೂ ಕೇವಲ ಐದು ಸಾವಿರ ಚಿಲ್ಲರೆ ಮೊತ್ತವನ್ನು ಪಾವತಿ ಮಾಡಲು ಇಲಾಖೆಯಲ್ಲಿ ಹಣವಿಲ್ಲವೇ?

–ಕೊ.ಸು.ನರಸಿಂಹ ಮೂರ್ತಿ, ಸುದರ್ಶನ ಪ್ರಕಾಶನ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖ

ಕನ್ನಡ ಭೀಷ್ಮ ಗುಬ್ಬಿ ವೀರಣ್ಣ

ಅದು ಸಾವಿರದೊಂಬೈನೂರ ಮೂವತ್ತೈದರ ದಶಕದ ಕಾಲ. ಆ ದಿನಗಳಲ್ಲಿ ಜನರಿಗೆ ಮನರಂಜನೆಗಾಗಿ ನಾಟಕಗಳನ್ನು ಬಿಟ್ಟರೆ ಮತ್ತೊಂದು ಮಾರ್ಗ ಇರಲಿಲ್ಲ. ಸಾಮಾನ್ಯ ಜನರು ಮಾತ್ರವಲ್ಲದೆ, ವಿಐಪಿ ಹಾಗೂ ವಿವಿಐಪಿಗಳಿಗೂ ಅಷ್ಟೆ. ಆಳುವ ರಾಜ, ಮಹಾರಾಜ, ಸುಲ್ತಾನ, ನಿಜಾಮ, ಪಾಳೆಗಾರರಿಂದ ಹಿಡಿದು ಆಳಿಸಿಕೊಳ್ಳುವ ಸಾಮಾನ್ಯ ಜನರತನಕ ನಾಟಕಗಳೇ ಆವರಿಸಿಕೊಂಡಿದ್ದವು. ಹಾಗೆಯೇ ಆನಂದ ನೀಡುತ್ತಿದ್ದವು. ಹಾಗಾಗಿ ನಾಟಕ ಮಾಧ್ಯಮ ತುಂಬಾ ಪ್ರಭಾವಶಾಲಿ ಆಗಿತ್ತು. ಅಂತಹ ದಿನಮಾನ ದಲ್ಲಿ 1934 ಡಿಸೆಂಬರ್ 31ರ ಒಂದು ರಾತ್ರಿ ಬೆಂಗಳೂರಿನಲ್ಲಿ 'ಕುರುಕ್ಷೇತ್ರ' ನಾಟಕ ನೋಡಲು ಜನರು ಸಾಗರದೋಪಾದಿಯಲ್ಲಿ ತುಂಬಿದ್ದರು. ದೂರದ ಅಕ್ಕ ಪಕ್ಕದ ಹಳ್ಳಿಗಳ ಜನರೆಲ್ಲಾ ಎತ್ತಿನಗಾಡಿ ಕಟ್ಟಿಕೊಂಡು ಬಂದು ನೆರೆದಿದ್ದರು. 'ಕುರುಕ್ಷೇತ್ರ' ನಾಟಕ ಶುರು ವಾಯಿತು. ನೋಡ ನೋಡುತ್ತಿದ್ದಂತೆ ನೆರೆದಿದ್ದ ಜನರೆಲ್ಲಾ ಗಾಬರಿಗೊಂಡರು. ಆನೆ, ಕುದುರೆಗಳೆಲ್ಲಾ ಜೀವಂತವಾಗಿ ರಂಗಮಂದಿರಕ್ಕೆ ಬಂದು ಸ್ಟೇಜ್ ಮೇಲೆ ಪ್ರತ್ಯಕ್ಷವಾಗಿ ದಿಗ್ಭ್ರಮೆ ಮೂಡಿಸಿದ್ದವು. ಸಾಮಾನ್ಯ ಜನರಿರಲಿ, ಅಂದು ನಾಟಕ ನೋಡಲು ಬಂದಿದ್ದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ಮಹದಾಶ್ಚರ್ಯ. ಮಹಾರಾಜರು ನಾಟಕವನ್ನು ಮೆಚ್ಚಿಕೊಂಡು ಮುಕ್ತ ಕಂಠದಿಂದ ಪ್ರಶಂಸಿಸಿದರು. ಅಷ್ಟೇ ಅಲ್ಲ, ಇದಕ್ಕೆ ಕಾರಣಕರ್ತರಾದ ನಾಟಕ ಕಂಪನಿಯ ಮಾಲೀಕರಿಗೆ ಚಿನ್ನದ ತೋಡ ತೊಡಿಸಿ ಸನ್ಮಾನಿಸಿದರಲ್ಲದೆ ಇನ್ನಷ್ಟು ಜೀವಂತ ಆನೆ ಹಾಗೂ ಕುದುರೆಗಳನ್ನು ಅವರಿಗೆ ಕೊಡುಗೆಯಾಗಿಕೊಟ್ಟರು.

ಹೀಗೆ ಜೀವಂತ ಆನೆ, ಕುದುರೆಗಳ ಕೊಡುಗೆಯೊಡನೆ ಚಿನ್ನದ ತೋಡ ತೊಡಿಸಿಕೊಂಡು ಮಹಾರಾಜರಿಂದ ಅಂದು ಮಹಾ ಗೌರವ, ಸನ್ಮಾನ ಸ್ವೀಕರಿಸಿದವರು ಅಪ್ರತಿಮ ನಟ, ರಂಗರತ್ನಾಕರ ಡಾ.ಗುಬ್ಬಿ ವೀರಣ್ಣನವರು. ಹೊಸ ಹೊಸ ಆವಿಷ್ಕಾರ, ಪ್ರಯೋಗಶೀಲತೆಯೊಡನೆ ರಂಗಭೂಮಿಯಲ್ಲಿ ನಿರಂತರ ನಿರತರಾಗಿದ್ದ ಗುಬ್ಬಿ ವೀರಣ್ಣನವರ ವಿಶಿಷ್ಟ ಪ್ರಯೋಗ ಅಂದಿನ 'ಕುರುಕ್ಷೇತ್ರ' ನಾಟಕ. ತಮ್ಮ ಉಸಿರಿಗೆ ಉಸಿರಾದ ಗುಬ್ಬಿ ಕಂಪನಿಯ ಸುವರ್ಣ ಮಹೋತ್ಸವಕ್ಕೆಂದೇ ಸುವಿಖ್ಯಾತ ನಾಟಕಕಾರ ಸಾಹಿತಿ ಬಿ.ಪುಟ್ಟಸ್ವಾಮಯ್ಯನವರಿಂದ ವಿಶೇಷವಾಗಿ ರಚಿಸಿದ್ದ 'ಕುರುಕ್ಷೇತ್ರ' ನಾಟಕದ ಪ್ರದರ್ಶನವದು.

ರಂಗಭೂಮಿಯನ್ನು ತಾಯಿಯಂತೆ ಪ್ರೀತಿಸುತ್ತಿದ್ದ ಪ್ರಯೋಗಶೀಲ ಮನೋಧರ್ಮದ ಡಾ.ಗುಬ್ಬಿ ವೀರಣ್ಣನವರ ಕನ್ನಡ ರಂಗ ಭೂಮಿಯ ಸಾಧನೆ ಅದ್ವಿತೀಯ, ಅಸದೃಶ. ಕನ್ನಡ ರಂಗ ಭೂಮಿಯ ಇತಿಹಾಸದ ಜೊತೆ ಹಾಸು ಹೊಕ್ಕಾಗಿರುವ ತುಂಬ ಮಹತ್ವದ ಹೆಸರು ಗುಬ್ಬಿವೀರಣ್ಣನವರದು. ಮೇರು ವ್ಯಕ್ತಿತ್ವದ ಮಹಾನ್ ಕಲಾವಿದ ಗುಬ್ಬಿ ವೀರಣ್ಣನವರು ಕಲಾ ಜಗತ್ತಿಗೆ ನೀಡಿರುವ ಕೊಡುಗೆ ಅನುಪಮ. ನಟಸಾರ್ವಭೌಮ ಡಾ.ರಾಜ್‌ಕುಮಾರ್ ಅವರಂಥಾ ಮಹಾನ್ ಕಲಾವಿದರನ್ನು ಕಲಾ ಲೋಕಕ್ಕೆ ಕೊಟ್ಟ ಹಿರಿಮೆ ಕೂಡ ಇವರದೇ. ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ಎಂಬುದು ಗುಬ್ಬಿ ಕಂಪನಿಯ ಪೂರ್ಣ ಹೆಸರು. ಕನ್ನಡ ಕುಲ ಕೋಟಿಯ ಹೃನ್ಮನಗಳಲ್ಲಿ ಇದು ಸದಾ ಹಚ್ಚ ಹಸುರು. ಕರ್ನಾಟಕ ಸಾಂಸ್ಕೃತಿಕ ಬದುಕಿಗೆ ಜೀವಸತ್ವವಾಗಿ, ನಿತ್ಯ ಸಂಜೀವಿನಿಯಾಗಿ ಈ ಭವ್ಯ ಕಲಾಶಾಲೆ ವಹಿಸಿರುವ ಪಾತ್ರ ಹಿರಿದಾದದ್ದು. ಗುಬ್ಬಿ ಕಂಪನಿಯ ಹಿರಿಮೆ ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದಾದ್ಯಂತ ಅದರ ಘನತೆ ಉತ್ತುಂಗಕ್ಕೇರಿದೆ. ಕನ್ನಡ ರಂಗ ಭೂಮಿಯ ಇತಿಹಾಸದ ಸಿಂಹಪಾಲು ಗುಬ್ಬಿ ಕಂಪನಿಯದು.

ಗುಬ್ಬಿ ಕಂಪನಿ ಮತ್ತು ಗುಬ್ಬಿ ವೀರಣ್ಣ ಇದೊಂದು ಅಪೂರ್ವ ಅವಿನಾಭಾವ ಸಂಬಂಧ. ಗುಬ್ಬಿ ಕಂಪನಿ ಎಂದೊಡನೆಯೇ ಥಟ್ಟನೆ ನಮ್ಮೆದುರು ಕಾಣಿಸಿಕೊಳ್ಳುವ ಮಹಾಚೇತನ ಗುಬ್ಬಿ ವೀರಣ್ಣ. ಅವರು ಒಬ್ಬ ವ್ಯಕ್ತಿಯಲ್ಲ, ಕಲಾ ಜಗತ್ತಿನ ಮಹಾಶಕ್ತಿ. ಕಲೆ ವೀರಣ್ಣನವರ ಜೀವದುಸಿರು, ಕಲೆಯ ಕಾಯಕ. ಕಲೆಯೇ ಗುಬ್ಬಿ ವೀರಣ್ಣನವರ ಸರ್ವಸ್ವ. ಅವರ ದೃಷ್ಟಿಯಲ್ಲಿ ಕಲೆ ಕಲೆಗಾಗಿ ಅಲ್ಲ. ಕಲೆ ಬದುಕಿನ ಸರ್ವೋನ್ನತಿಗಾಗಿ, ಬದುಕಿನ ಪರಿಪೂರ್ಣತೆಗಾಗಿ. ಸಾಂಪ್ರದಾಯಿಕ ಶಾಲೆಯ ಓದು ಒಂದಿನಿತೂ ಇಲ್ಲದೆ ಬದುಕಿನ ಪಾಠಶಾಲೆಯಲ್ಲಿಯೇ ಕಲಿತು, ಬದುಕಿನ ಮುಕ್ತ ವಿಶ್ವವಿದ್ಯಾನಿಲಯದ ನಿರಂತರ ವಿದ್ಯಾರ್ಥಿಯಾಗಿದ್ದ ಗುಬ್ಬಿ ವೀರಣ್ಣನವರು ರೂಪಿಸಿದ್ದು, ರೂಢಿಸಿದ್ದು ಬದುಕನ್ನು ಬೆಳಗುವ ಕಲೆ. ಅವರು ಹಚ್ಚಿಟ್ಟ ಕಲಾಜ್ಯೋತಿ ಎಂದಿಗೂ ನಂದದ ನಂದಾದೀಪ. ಇದರಿಂದ ಬೆಳಕು ಕಂಡವರು ಬಹಳ ಬಹಳ, ಬದುಕು ಹಾಗೂ ಕಲೆಯನ್ನು ಕುರಿತಂತೆ ಅವರಂತೆ ಸೂಕ್ಷ್ಮಾವಲೋಕನ ಮಾಡಿದವರು ತುಂಬ ವಿರಳ. ಬದುಕು ಹಾಗೂ ಕಲೆಗಳ ಸಾಮರಸ್ಯವನ್ನು ಸಾಧಿಸಿದ ಅಪರೂಪದ ಮಹತ್ವದ ಕಲಾವಿದರ ಸಾಲಿನಲ್ಲಿ ಗುಬ್ಬಿ ವೀರಣ್ಣ ಅಗ್ರಶ್ರೇಣಿಯಲ್ಲಿ ನಿಲ್ಲುತ್ತಾರೆ. ಇತರರೂ ಹಾಗೆಯೇ ನಿಲ್ಲುವಂತೆ ಸ್ಫೂರ್ತಿಯಾಗುತ್ತಾರೆ. ಯಾವುದೇ ಕಲೆ ಅಥವಾ ಕಲಾವಿದನ ಹಿರಿಮೆಗೆ ಅರ್ಥಪೂರ್ಣತೆ ಬರುವುದು ಜನಕೋಟಿಯ ಹೃನ್ಮನಗಳಿಗೆ ಹತ್ತಿರವಾದಾಗಲೇ. ಈ ನಿಟ್ಟಿನಲ್ಲಿ ಗುಬ್ಬಿ ವೀರಣ್ಣನವರು ಸಾರ್ಥಕ ಕಲಾವಿದರು. ಅವರು ಬದುಕಿನುದ್ದಕ್ಕೂ ಕಲೆಯನ್ನು ಕಾಯಕವಾಗಿ ತ್ರಿಕರಣಪೂರ್ವಕವಾಗಿ ನಡೆಸಿಕೊಂಡು ಬಂದು ಜನರ ಮನಸ್ಸಿಗೆ ಆತ್ಮೀಯತೆಯ ಸ್ನೇಹಸೇತು ನಿರ್ಮಿಸಿದವರು. ಸರ್ವೋದಯ ಪಥದಲ್ಲಿ ಜನಕೋಟಿಗೆ ಬೆಳಕಾದವರು. ಒಂದು ರೀತಿ ರಂಗ ಭೂಮಿಗೆ ತಾಯಿ ಬೇರಿವರು.


ರಂಗಭೂಮಿ ಮತ್ತು ಚಲನ ಚಿತ್ರರಂಗದ ಉಭಯ ಕ್ಷೇತ್ರಗಳಿಗೂ ಮಹಾ ಗುರುವಿನಂತಿದ್ದ ಗುಬ್ಬಿ ವೀರಣ್ಣ ಜನಿಸಿದ್ದು 1891 ಜನವರಿ 24ರಲ್ಲಿ. ತಂದೆ ಹಂಪಣ್ಣ. ತಾಯಿ ರುದ್ರಮ್ಮ. ಜನ್ಮ ಸ್ಥಳ ತುಮಕೂರು ಜಿಲ್ಲೆಯ ಗುಬ್ಬಿ. ಅದಕ್ಕೇನೆ ಗುಬ್ಬಿ ಎಂಬುದು ವೀರಣ್ಣನವರ ಹೆಸರಿನ ಜೊತೆ ಹೆಮ್ಮೆಯಿಂದ ಉಬ್ಬಿ ನಿಂತಿರುವುದು. ಹೆತ್ತವರಿಗೆ ಮೂರನೇ ಮಗು ಇವರು. ಗುಬ್ಬಿಯಂತಹ ಪುಟ್ಟ ಗ್ರಾಮವನ್ನು ಜಗದ್ವಿಖ್ಯಾತಿ ಮಾಡಿದ ಹಿರಿಮೆ ಈ ನೆಲದ ಸುಪುತ್ರ ಗುಬ್ಬಿ ವೀರಣ್ಣನವರಿಗೆ ಸಲ್ಲುತ್ತದೆ. ಹುಟ್ಟೂರು ಗುಬ್ಬಿಯ ನೆಲದಲ್ಲೇ ಬಾಲ್ಯ ಕಳೆದ ಅವರು ತಮ್ಮ ಆರನೆಯ ವಯಸ್ಸಿಗೇ 1896ರಲ್ಲಿ ಗುಬ್ಬಿ ಕಂಪನಿ ಸೇರಿದವರು. ಬಾಲಕ ವೀರಣ್ಣ ಸೂಕ್ಷ್ಮಮತಿಯುಳ್ಳ ಚುರುಕು ಸ್ವಭಾವದ ಧೈರ್ಯಶಾಲಿ ಹುಡುಗನಾಗಿದ್ದ. ಅಷ್ಟು ಚಿಕ್ಕವಯಸ್ಸಿಗೇ ಎಂಥಾ ಪಾತ್ರ ಮಾಡಲೂ ಸೈ ಎನ್ನುತ್ತಿದ್ದ. ಹಾಗಾಗಿ ಬಾಲಕ ವೀರಣ್ಣನಿಗೆ ಹೆಚ್ಚು ಹೆಚ್ಚು ಬಾಲ ಪಾತ್ರಗಳು ನಾಟಕಗಳಲ್ಲಿ ದೊರೆತು ಎತ್ತರೆತ್ತರಕ್ಕೆ ಬೆಳೆಯಲು ಬಾಲ್ಯವೇ ಚಿಮ್ಮು ಹಲಗೆ ಆಗಿತ್ತು. ರಂಗ ಕಲೆಗಳಾದ ತಬಲ, ಹಾರ್ಮೋನಿಯಂ, ಪಿಟೀಲು, ಕೊಳಲು, ವಸ್ತ್ರ ವಿನ್ಯಾಸ, ಮೇಕಪ್, ಗಾಯನ ಸೇರಿದಂತೆ ಪ್ರತಿಯೊಂದರಲ್ಲೂ ನಿಸ್ಸೀಮ ಸಾಧಕರಾಗಿ 1913ರಲ್ಲಿ ದಾವಣಗೆರೆಗೆ ನಾಟಕ ಕಂಪನಿ ಬರುವ ಹೊತ್ತಿಗೆ ವೀರಣ್ಣ ಪ್ರಸಿದ್ಧ ನಟರಾಗಿ ಬೆಳೆದು ಬಿಟ್ಟಿದ್ದರು. ಕಂಪನಿಯ ಆಧಾರ ಸ್ತಂಭವೂ ಆಗಿದ್ದರು. ಸ್ತ್ರೀ ಪಾತ್ರಗಳನ್ನು ಚೆನ್ನಾಗಿ ಮಾಡುವುದರಲ್ಲಿ ಅವತ್ತಿನ ಕಾಲದಲ್ಲಿ ಗುಬ್ಬಿವೀರಣ್ಣನವರಿಗೆ ಸಮ ಮತ್ತೊಬ್ಬರಿರಲಿಲ್ಲ.

ಚಂದಣ್ಣ ಮತ್ತು ನೆಟ್ಕಲ್ಲಪ್ಪ ಹಾಗೂ ಅಬ್ದುಲ್ ಅಜೀಜ್ ಸಾಹೇಬರಿಂದ 1884ರಲ್ಲಿ ಆರಂಭಗೊಂಡಿದ್ದ ಗುಬ್ಬಿ ಕಂಪನಿಗೆ ಅವರುಗಳ ಕಾಲಾನಂತರ 1917ರಲ್ಲಿ ಗುಬ್ಬಿ ವೀರಣ್ಣನವರು ಮಾಲೀಕರಾದರು. ವೀರಣ್ಣನವರು ಗುಬ್ಬಿ ಕಂಪನಿಯ ಜೊತೆ ಜೊತೆಗೆ ಇಡಿಯಾಗಿ ಕನ್ನಡ ರಂಗಭೂಮಿಯ ಸರ್ವತೋಮುಖ ಪ್ರಗತಿಗೆ ಶ್ರಮಿಸಿದ ರೀತಿ ಚಿರಸ್ಮರಣೀಯ. ಕನ್ನಡ ರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟ ಕೀರ್ತಿ ಅವರದು. ಅಷ್ಟೇ ಅಲ್ಲ ಕಲಾವಿದರಿಗೆ ಅನ್ನಧಾತರಾಗಿದ್ದರು.

ಗುಬ್ಬಿ ಕಂಪನಿಯು ಆರಂಭದಿಂದಲೂ ಕಲಾವಿದರ ಪಾಲಿಗೆ ತವರು ಮನೆ. ವೀರಣ್ಣನವರ ಹೃದಯ ವೈಶಾಲ್ಯತೆಯಿಂದ ಕಲಾವಿದರು ಪ್ರೀತಿ ವಾತ್ಸಲ್ಯಗಳ ಸವಿಸಾರ ಪಡೆದು ಸಂತೃಪ್ತಿ ಪಡೆಯುತ್ತಿದ್ದರು. ಇಂದು ಕಲಾ ಜಗತ್ತಿನಲ್ಲಿ ರಾರಾಜಿಸುತ್ತಿರುವ ಬಹುತೇಕ ಕಲಾವಿದರು ಗುಬ್ಬಿ ಕಂಪನಿಯಿಂದ ಬಂದವರು. ವೀರಣ್ಣನವರ ಶಿಷ್ಯ ವಾತ್ಸಲ್ಯದಲ್ಲಿ ಬೆಳಕು ಕಂಡವರು. ಗುರುವಾಗಿ ಗುರಿಯೆಡೆಗೆ ಕಲಾವಿದರ ಸಮುದಾಯವನ್ನು ಮುನ್ನಡೆಸಿದ ಆಚಾರ್ಯ ಪುರುಷ ವೀರಣ್ಣ ಜ್ಞಾನಸಂಪನ್ನರಾದರೂ ವಿನಯದ ಮಹಾ ಸಾಗರ, ಕಲೆಯ ಮೇರು ಶಿಖರ. ವರನಟ ಡಾ.ರಾಜ್‌ಕುಮಾರ್, ಬಿ.ಆರ್.ಪಂತುಲು, ಬಿ.ಜಯಮ್ಮ, ಎಂ.ವಿ. ರಾಜಮ್ಮ, ನರಸಿಂಹರಾಜು, ಬಾಲಕೃಷ್ಣ, ಜಿ.ವಿ.ಅಯ್ಯರ್, ಹೊನ್ನಪ್ಪ ಭಾಗವತರ್, ಕೆಂಪರಾಜ ಅರಸ್, ವಾಸುದೇವರಾವ್, ಆರ್.ನಾಗೇಂದ್ರರಾವ್, ರತ್ನಾಕರ್, ಇವರೇ ಮೊದಲಾದ ನೂರಾರು ಪ್ರತಿಭಾನ್ವಿತ ನಟ, ನಟಿಯರನ್ನು ಕನ್ನಡ ಚಿತ್ರರಂಗಕ್ಕೆ ನೀಡಿದ ಹೆಗ್ಗಳಿಕೆ ಗುಬ್ಬಿ ವೀರಣ್ಣನವರಿಗೆ ಸಲ್ಲುತ್ತದೆ. ಅಂತೆಯೇ ಪ್ರಖ್ಯಾತ ರಂಗ ಕಲಾವಿದರಾದ ಕೆ.ಹಿರಣ್ಣಯ್ಯ, ಎಂ.ಎಸ್.ಗಂಗಾಧರರಾವ್, ಸುಬ್ಬಯ್ಯ ನಾಯ್ಡು, ಸಿ.ಬಿ.ಮಲ್ಲಪ್ಪ, ನಾಗೇಶರಾವ್, ಶೇಷಾಚಾರ್, ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ, ಬಿ.ವಿ.ಕಾರಂತ್, ಮಳವಳ್ಳಿ ಸುಂದರಮ್ಮ, ಅಶ್ವತ್ಥಮ್ಮ, ಸ್ವರ್ಣಮ್ಮ, ಸುಂದರಮ್ಮ ಇವರೇ ಮೊದಲಾದವರು ಗುಬ್ಬಿ ಕಂಪನಿ ಕನ್ನಡ ರಂಗಭೂಮಿಗೆ ನೀಡಿದ ಅಪೂರ್ವ ಕೊಡುಗೆ. 1930ರಲ್ಲಿ ಗುಬ್ಬಿ ಕಂಪನಿಗೆ ಪ್ರತಿದಿನ ಒಂದು ಸಾವಿರ ರೂಪಾಯಿಗೂ ಹೆಚ್ಚು ಆದಾಯ ಇದ್ದದ್ದೇ ಗುಬ್ಬಿ ವೀರಣ್ಣನವರ ಖ್ಯಾತಿಗೆ ಸಾಕ್ಷಿ. ಗುಬ್ಬಿ ಕಂಪನಿಯ ನಾಟಕಗಳಿಗೆ ವಿದ್ವನ್ಮಣಿಗಳಾದ ಬಿ.ಪುಟ್ಟಸ್ವಾಮಯ್ಯ, ದೇವುಡು ನರಸಿಂಹಶಾಸ್ತ್ರಿ, ಬೆಳ್ಳಾವೆ ನರಹರಿ ಶಾಸ್ತ್ರಿಗಳಂತಹ ಪ್ರತಿಭಾ ಸಂಪನ್ನರಿಂದ ನಾಟಕಗಳ ರಚನೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹೀಗೆ ಎಲ್ಲ ಬಗೆಯ ನಾಟಕಗಳೂ ಗುಬ್ಬಿ ಕಂಪನಿಯಲ್ಲಿ ಪ್ರಯೋಗ ಕಾಣುತ್ತಿದ್ದವು. ಇದೆಲ್ಲವೂ ವೀರಣ್ಣನವರ ದೂರದರ್ಶಿತ್ವದ ಫಲ. ಸಂಸಾರನೌಕೆ, ಸದಾರಮೆ, ಕುರುಕ್ಷೇತ್ರ, ಹೇಮರೆಡ್ಡಿ ಮಲ್ಲಮ್ಮ, ಗುಲೇಬಕಾವಲಿ, ದಶಾವತಾರ, ಸಂಪೂರ್ಣ ರಾಮಾಯಣ, ಬೇಡರಕಣ್ಣಪ್ಪ, ಕಬೀರ್, ಪ್ರಭಾಮಣಿ ವಿಜಯ, ಲವಕುಶ, ಹರಿಮಾಯೆ, ಹಿಸ್ ಲವ್ ಅಫೈರ್, ಅಣ್ಣತಮ್ಮ, ಕಳ್ಳರ ಕೂಟ, ಗುಣಸಾಗರಿ, ಜೀವನ ನಾಟಕ, ಕೃಷ್ಣಲೀಲೆ ಇವೇ ಮೊದಲಾದವು ಅಪೂರ್ವ ಯಶಸ್ಸು ಕಂಡು ಜನಮನ ಸೂರೆಗೊಂಡ ನಾಟಕಗಳು. ಮುಂದೆ ಇವು ಚಲನಚಿತ್ರಗಳಾಗಿಯೂ ಪ್ರಸಿದ್ಧಿಗೊಳಿಸಿದವು. ದಶಾವತಾರ ನಾಟಕದ ವೈಭವಪೂರ್ಣ ದೃಶ್ಯಗಳಂತೂ ಕಲಾರಸಿಕರ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ಅಸಾಮಾನ್ಯ ಪ್ರತಿಭೆಯ ಹುಟ್ಟು ಕಲಾವಿದ ವೀರಣ್ಣನವರ ಅಮೋಘ ಅಭಿನಯ ಉಲ್ಲೇಖನೀಯ ದಾಖಲೆ. ಹಾಸ್ಯ ರತ್ನರಾಗಿ ಅವರು ಜನಮನ ರಂಜಿಸಿದ ರೀತಿ ವಿಶಿಷ್ಟ. ಮಾತಿನ ಚಲನ ಚಿತ್ರಗಳು ಬರುವುದಕ್ಕಿಂತ ಮೊದಲು ಮೂಕಿ ಚಿತ್ರಗಳನ್ನು ತಯಾರಿಸಿದ ಹೆಗ್ಗಳಿಕೆ ವೀರಣ್ಣನವರದು. ಮೂಕಿ ಚಿತ್ರಗಳನ್ನು ನಿರ್ಮಿಸಿದ ಮೊದಲ ಕನ್ನಡಿಗರೂ ಇವರೇ. 1931ರಲ್ಲಿ 'ಹಿಸ್‌ಲವ್ ಅಫೇರ್', ಹಾಗೂ ಆನಂತರ 'ಹರಿಮಾಯೆ' ಮತ್ತು 'ಕಳ್ಳರಕಳ್ಳ' ಎಂಬ ಮೂಕಿ ಚಿತ್ರಗಳನ್ನು ನಿರ್ಮಿಸಿ ಆ ಕಾಲದಲ್ಲಿ ಭಾರೀ ಸುದ್ದಿ ಮಾಡಿದ್ದರು. ಮೂಕಿ–ಟಾಕಿ ಚಿತ್ರಗಳೆರಡರಲ್ಲೂ ಇವರದ್ದು ಅದ್ಭುತ ಸಾಧನೆ.

ವೃತ್ತಿ ರಂಗಭೂಮಿ ಹಾಗೂ ಚಲನ ಚಿತ್ರರಂಗದ ಅಭಿವೃದ್ಧಿಗಾಗಿ ತಮ್ಮ ಇಡೀ ಬದುಕನ್ನು ಮುಡಿಪಿಟ್ಟು ದುಡಿದ ಮಹಾನ್ ಸಾಧಕ ಗುಬ್ಬಿ ವೀರಣ್ಣನವರಿಗೆ ಸಾಂಸ್ಕೃತಿಕ ನಗರಿ, ರಾಜರೂರು ಮೈಸೂರಿನ ಜನತೆ 1912ರಲ್ಲಿ ಚಿನ್ನದ ಪದಕದೊಡನೆ ಗೌರವಿಸಿದ್ದಾರೆ. 1921ರಲ್ಲಿ ಪ್ರಹಸನ ಪಿತಾಮಹ ಟಿ.ಪಿ.ಕೈಲಾಸಂ ಇವರ ನಾಟಕಗಳನ್ನು ಮೆಚ್ಚಿ ಕೈಗಡಿಯಾರ ತೊಡಿಸಿ ಸನ್ಮಾನಿಸಿದ್ದಾರೆ. 1942ರಲ್ಲಿ ಮೈಸೂರು ದೊರೆ ಜಯ ಚಾಮರಾಜ ಒಡೆಯರ್ 'ನಟರತ್ನಾಕರ' ಬಿರುದು ನೀಡಿ ತಮ್ಮ ರಾಜಲಾಂಛನ ಗಂಡಭೇರುಂಡದ ಬಂಗಾರದ ಕಡಗವನ್ನು ಗುಬ್ಬಿವೀರಣ್ಣನವರಿಗೆ ತೊಡಿಸಿ ಗೌರವಿಸಿದ್ದಾರೆ.ಇದಕ್ಕೂ ಮೊದಲು 1923ರಲ್ಲಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ವರ್ಸಟೈಲ್ ಕಮೆಡಿಯನ್' ಎಂಬ ಬಿರುದಿನಿಂದ ಕರೆದು ಗುಬ್ಬಿ ವೀರಣ್ಣನವರನ್ನು ಸನ್ಮಾನಿಸಿದ್ದರು. ಅಭಿಮಾನಿ ಕಲಾ ರಸಿಕರು ಬೆಂಗಳೂರಿನಲ್ಲಿ ಬಹು ದೊಡ್ಡ ವರ್ಣರಂಜಿತ ಸಮಾರಂಭ ಆಯೋಜಿಸಿ 'ವಿನೋದ ರತ್ನಾಕರ' ಪ್ರಶಸ್ತಿ ನೀಡಿ ಗುಬ್ಬಿ ವೀರಣ್ಣನವರನ್ನು ಸತ್ಕರಿಸಿದ್ದಾರೆ. 1955ರಲ್ಲಿ ಕೇಂದ್ರ ಸರ್ಕಾರದ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 1972ರಲ್ಲಿ ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಸೇರಿದಂತೆ ನೂರಾರು ಪ್ರಶಸ್ತಿ ಪುರಸ್ಕಾರ, ಗೌರವ, ಬಿರುದುಗಳು ಗುಬ್ಬಿ ವೀರಣ್ಣನವರ ಶಿರವನ್ನು ಅಲಂಕರಿಸಿವೆ. ಇವೆಲ್ಲಕ್ಕೂ ಚಿನ್ನದ ಕಲಶವಿಟ್ಟಂತೆ ಕರ್ನಾಟಕ ರಾಜ್ಯ ಸರ್ಕಾರ ಗುಬ್ಬಿ ವೀರಣ್ಣನವರ ಹೆಸರಿನಲ್ಲಿ 5 ಲಕ್ಷ ರೂ. ಗೌರವ ನಗದಿನ ಮೌಲ್ಯದ ಪ್ರಶಸ್ತಿ ಸ್ಥಾಪಿಸಿದೆ. ಪ್ರಾರಂಭದಲ್ಲೇ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಡಾ.ರಾಜ್‌ಕುಮಾರ್ ಪಡೆದು ಇದಕ್ಕೊಂದು ಬಹುದೊಡ್ಡ ಮೌಲ್ಯವನ್ನು ತಂದು ಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾಲಯ ಗುಬ್ಬಿ ವೀರಣ್ಣ ಅಧ್ಯಯನ ಪೀಠವನ್ನು ಸ್ಥಾಪಿಸಿದ್ದು, ಗುಬ್ಬಿ ವೀರಣ್ಣ ಅವರ ಬಣ್ಣದ ಬದುಕಿಗೊಂದು ಚಿನ್ನದ ಕಿರೀಟ ತೊಡಿಸಿದೆ.

ಸಂಪೂರ್ಣ ಕಲಾವಿದರ ಕುಟುಂಬವೇ ಆದ ಗುಬ್ಬಿ ವೀರಣ್ಣನವರ ತಾರಾ ಪತ್ನಿ ಬಿ.ಜಯಮ್ಮ ಕೂಡ ಖ್ಯಾತ ನಟಿಯಾಗಿ ಜನಮನ ಗೆದ್ದವರು. ಪುತ್ರ ಜಿ.ವಿ.ಶಿವಾನಂದ್, ಮೊಮ್ಮಗಳು ಜಯಶ್ರೀ ಸೇರಿದಂತೆ ಅವರ ಕುಟುಂಬದ ಅನೇಕ ಕುಡಿಗಳು ಚಿತ್ರರಂಗ ಮತ್ತು ರಂಗಭೂಮಿ ಯಲ್ಲಿ ತೊಡಗಿಸಿಕೊಂಡಿದ್ದಾರೆ. ತಮ್ಮ ಜೀವನದ ಕಡೆಗಾಲದ ತನಕವೂ ಬಣ್ಣದ ಬದುಕಿನಲ್ಲಿ ಸೇವೆಗೈದು ದಣಿದ ಗುಬ್ಬಿ ವೀರಣ್ಣನವರು 1972 ಅಕ್ಟೋಬರ್ 18ರಂದು ತಮ್ಮ 82ನೇ ವಯಸ್ಸಿನಲ್ಲಿ ರಂಗೈಕ್ಯರಾದರು. ಆದರೇನಂತೆ ರಂಗಭೂಮಿ ಮತ್ತು ಚಿತ್ರರಂಗ ಇರುವ ತನಕವೂ ಇವರು ಇದ್ದೇ ಇರುತ್ತಾರೆ. ಇಲ್ಲಿ ಅಂಥಾ ಅಪೂರ್ವ ಸಾಧನೆ ಗುಬ್ಬಿ ವೀರಣ್ಣನವರದು.



ರಂಗಭೂಮಿಯನ್ನು ತಾಯಿಯಂತೆ ಪ್ರೀತಿಸುತ್ತಿದ್ದ ಪ್ರಯೋಗಶೀಲ ಮನೋಧರ್ಮದ ಡಾ.ಗುಬ್ಬಿ ವೀರಣ್ಣನವರ ಕನ್ನಡ ರಂಗ ಭೂಮಿಯ ಸಾಧನೆ ಅದ್ವಿತೀಯ, ಅಸದೃಶ. ಕನ್ನಡ ರಂಗ ಭೂಮಿಯ ಇತಿಹಾಸದ ಜೊತೆ ಹಾಸು ಹೊಕ್ಕಾಗಿರುವ ತುಂಬ ಮಹತ್ವದ ಹೆಸರು ಗುಬ್ಬಿವೀರಣ್ಣನವರದು. ಮೇರು ವ್ಯಕ್ತಿತ್ವದ ಮಹಾನ್ ಕಲಾವಿದ ಗುಬ್ಬಿ ವೀರಣ್ಣನವರು ಕಲಾ ಜಗತ್ತಿಗೆ ನೀಡಿರುವ ಕೊಡುಗೆ ಅನುಪಮ. ನಟಸಾರ್ವಭೌಮ ಡಾ.ರಾಜ್‌ಕುಮಾರ್ ಅವರಂಥಾ ಮಹಾನ್ ಕಲಾವಿದರನ್ನು ಕಲಾ ಲೋಕಕ್ಕೆ ಕೊಟ್ಟ ಹಿರಿಮೆ ಕೂಡ ಇವರದೇ. ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ಎಂಬುದು ಗುಬ್ಬಿ ಕಂಪನಿಯ ಪೂರ್ಣ ಹೆಸರು. ಕನ್ನಡ ಕುಲಕೋಟಿಯ ಹೃನ್ಮನಗಳಲ್ಲಿ ಇದು ಸದಾ ಹಚ್ಚ ಹಸುರು.

ಜನವರಿ 24. ರಂಗಭೀಷ್ಮ, ಖ್ಯಾತ ಚಲನಚಿತ್ರ ನಟ ಗುಬ್ಬಿ ವೀರಣ್ಣನವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಟೀಂ ಮೈಸೂರು ತಂಡದಿಂದ ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ ಆಚರಣೆ




ಮೈಸೂರು, ಜ.23(ಎಸ್‌ಪಿಎನ್)– ಸಯ್ಯಾಜಿರಾವ್ ರಸ್ತೆಯ ಸ್ವಾತಂತ್ರ್ಯ ಸೇನಾನಿ ಸುಭಾಷ್ ಚಂದ್ರ ಬೋಸ್ ವೃತ್ತದಲ್ಲಿ ಟೀಂ ಮೈಸೂರು ತಂಡದಿಂದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 127ನೇ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಭಾವಚಿತ್ರಕ್ಕೆ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಪುಷ್ಪಾರ್ಚನೆ ಮಾಡಿದರು. ನಂತರ ಮಾತನಾಡಿ, ಟೀಂ ಮೈಸೂರು ತಂಡದ ಪದಾಧಿಕಾರಿಗಳು ನಿರಂತರವಾಗಿ ಒಂದಿಲ್ಲೊಂದು ವಿಚಾರ ಮುಂದಿಟ್ಟು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ಸಂತೋಷದ ವಿಷಯ. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಸೇನೆಯನ್ನು ಕಟ್ಟಿ, ವಿಶ್ವವೇ ಭಾರತದ ಕಡೆಗೆ ತಿರುಗಿ ನೋಡುವಂತೆ ಮಾಡಿದ್ದರು. ಅಂತಹ ಸ್ವಾತಂತ್ರ್ಯ ಸೇನಾನಿ ಸಾಧನೆ ಕುರಿತು ಯುವಕರಲ್ಲಿ ಪರಿಚಯಿಸುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಅವರ ಜನ್ಮ ದಿನಾಚರಣೆಯನ್ನು 'ಪರಾಕ್ರಮ ದಿವಸ್' ಎಂದು ಘೋಷಿಸಿರುವುದು ಅತ್ಯಂತ ಸಂತಸದ ವಿಚಾರ ಎಂದು ತಿಳಿಸಿದರು. ಈ ವೇಳೆ ನಿವೃತ್ತ ಸೇನಾನಿಗಳಾದ ಸುಬೇದಾರ್ ಇ.ಸುರೇಶ್, ಎಸ್.ನಟರಾಜು, ಸಿ.ಮಂಜು, ಆರ್.ಎಂ.ಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಪಾಲಿಕೆ ಸದಸ್ಯ ರಂಗಸ್ವಾಮಿ, ತಂಡದ ಗೋಕುಲ್ ಗೋವರ್ಧನ್, ಹರ್ಷ, ಯಶವಂತ್, ಕಿರಣ್, ಅನಿಲ್ ಜೈನ್, ಮುರಳಿ, ಹರೀಶ್ ಶೆಟ್ಟಿ, ಯತೀಶ್, ಮಂಜುನಾಥ್, ಸುನಿಲ್, ನವೀನ್, ಆನಂದ್, ಪ್ರಸನ್ನ ರಾಜ್, ಸುಮಂತ್, ಅಭಿಷೇಕ್, ಸಂತೋಷ್, ಸಹನ, ದೀಪ, ಮಂಜುನಾಥ್, ಹರೀಶ್, ದಾಮೋದರ್, ಶೇಖರ್, ಮುಖಂಡರಾದ ಸತೀಶ್, ಮಹೇಶ್ ಹರೀಶ್, ಸ್ವಾಮಿ ಇತರರಿದ್ದರು.

ಚಿರತೆ ಅಟ್ಟಹಾಸದಿಂದ ನಲುಗಿರುವ ತಿ.ನರಸೀಪುರಕ್ಕೆ ಇಂದು ಉಸ್ತುವಾರಿ ಸಚಿವರ ಭೇಟಿ: ಸಂತ್ರಸ್ತರಿಗೆ ಸಾಂತ್ವನ

ಮೈಸೂರು, ಜ.23– ಚಿರತೆ ಉಪಟಳ ಹೆಚ್ಚಾಗಿರುವ ತಿ.ನರಸೀಪುರಕ್ಕೆ ಸಹಕಾರ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನಾಳೆ(ಮಂಗಳವಾರ) ಭೇಟಿ ನೀಡಿ, ನೊಂದವರಿಗೆ ಸಾಂತ್ವನ ಹೇಳಲಿದ್ದಾರೆ. ಮೂರು ದಿನ ಮಂಡ್ಯ, ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿರುವ ಸಚಿವರು, ಮಂಡ್ಯದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಬಳಿಕ ಸಂಜೆ 4.30ರ ವೇಳೆಗೆ ತಿ.ನರಸೀಪುರಕ್ಕೆ ಆಗಮಿಸಿ, ಚಿರತೆ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೆ ಸಾಂತ್ವನ ಹೇಳಲಿದ್ದಾರೆ. ಅಲ್ಲಿಂದ ಮೈಸೂರಿಗೆ ಆಗಮಿಸಿ ಸಂಜೆ 6.15ಕ್ಕೆ ಬಂಡಿಪಾಳ್ಯದಲ್ಲಿ ಬೆಂಬಲ ಬೆಲೆ ಯೋಜನೆಯಡಿ ರಾಗಿ ಮತ್ತು ಭತ್ತ ಖರೀದಿ ಕೇಂದ್ರವನ್ನು ಉದ್ಘಾಟಿಸಿ, ನಂತರ ಕೊಡಗಿನ ವಿರಾಜಪೇಟೆಗೆ ಪ್ರಯಾಣ ಬೆಳೆಸಲಿದ್ದಾರೆ.



ಆಕ್ರೋಶದ ಬಿಸಿ: ಚಿರತೆ ದಾಳಿಯಿಂದ ತಿ.ನರಸೀಪುರ ತಾಲೂಕಿನ ಜನತೆ ನಲುಗಿ ಹೋಗಿದ್ದಾರೆ. ಈವರೆಗೆ ಚಿರತೆ ನಾಲ್ವರನ್ನು ಬಲಿ ಪಡೆದಿದೆ. ಮೊನ್ನೆ ಹೊರಳಹಳ್ಳಿಯ 11 ವರ್ಷದ ಜಯಂತ್‌ನನ್ನು ಬಲಿ ಪಡೆದಿದೆ. ಬಾಲಕನ ರುಂಡವಿಲ್ಲದ ಮೃತದೇಹ ಪತ್ತೆಯಾದ ಬಳಿಕ ಜನರ ಆಕ್ರೋಶದ ಕಟ್ಟೆ ಒಡೆದಿದೆ. ರಸ್ತೆ ತಡೆ ನಡೆಸಿ ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಲ್ಲದೆ, ಉಸ್ತುವಾರಿ ಸಚಿವರು ಹಾಗೂ ಸಂಸದರು ಭೇಟಿ ನೀಡಿಲ್ಲವೆಂದು ಬೇಸರ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ ಸಚಿವರು ಭೇಟಿ ನೀಡುತ್ತಿದ್ದು, ಸಹಜವಾಗಿ ಸಾರ್ವಜನಿಕರ ಆಕ್ರೋಶ ಎದುರಿಸುವ ಸ್ಥಿತಿ ಎದುರಾಗಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸುತ್ತೂರು ಜಾತ್ರೆಗೆ ಅದ್ದೂರಿ ತೆರೆ

ಲಕ್ಷ ಲಕ್ಷ ಭಕ್ತರ ಭೇಟಿ: ಟ್ರಾಫಿಕ್ ಜಾಮ್

ಸುತ್ತೂರು, ಜ.23– ಕಪಿಲಾ ನದಿ ತೀರದ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಕಳೆದ 6 ದಿನಗಳಿಂದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ನೇತೃತ್ವದಲ್ಲಿ ಅದ್ದೂರಿಯಾಗಿ ನಡೆದ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಸೋಮವಾರ ಸಂಪನ್ನಗೊಂಡಿತು.

ಇಂದು ನಡೆದ ಕೃಷಿ ಮೇಳ ಹಾಗೂ ವಸ್ತು ಪ್ರದರ್ಶನ ಸಮಾರೋಪ ಸಮಾರಂಭದೊಂದಿಗೆ ಜಾತ್ರೆಯ ಎಲ್ಲಾ ಕಾರ್ಯಕ್ರಮಗಳಿಗೆ ಪೂರ್ಣವಿರಾಮ ಬಿತ್ತು. 6 ದಿನಗಳ ಕಾಲ ನಿರಂತರವಾಗಿ ಜನಜಾಗೃತಿ ಕೇಂದ್ರವಾಗಿ ರೂಪಗೊಂಡಿದ್ದ ಜಾತ್ರಾ ಮಹೋತ್ಸವಕ್ಕೆ ಲಕ್ಷೋಪಲಕ್ಷ ಭಕ್ತಸಾಗರ ಹರಿದು ಬಂದಿತ್ತು. ಪ್ರತಿನಿತ್ಯ ಧಾರ್ಮಿಕ ಉತ್ಸವ, ಸಾಂಸ್ಕೃತಿಕ ಕಲರವ, ಕೃಷಿ ವೈವಿಧ್ಯ, ವಿಚಾರ ಸಂಕಿರಣ ಸೇರಿದಂತೆ ಹಲವು ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳ ಮೂಲಕ ಕಳೆಗಟ್ಟಿದ ಜಾತ್ರೆಗೆ ದೇಶ ವಿದೇಶ ಸೇರಿದಂತೆ ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ ಭಕ್ತರು ಸಾಕ್ಷಿಯಾದರು.

ಕಳೆದ 2 ವರ್ಷಗಳ ಕಾಲ ಕೊರೊನಾ ಹಿನ್ನೆಲೆಯಲ್ಲಿ ಸರಳವಾಗಿ ನಡೆದಿದ್ದ ಜಾತ್ರಾ ಮಹೋತ್ಸವ ಈ ಬಾರಿ ಅದ್ದೂರಿಯಾಗಿ ನಡೆಯಿತು. ಜಾತ್ರಾ ಮಹೋತ್ಸವಕ್ಕೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿದ್ದರು. ಈ ಬಾರಿ ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳ, 1 ಎಕರೆಯಲ್ಲಿ ಕೃಷಿ ಬ್ರಹ್ಮಾಂಡ, ಕರಕುಶಲ, ಕೈಮಗ್ಗ, ಗೃಹೋಪಯೋಗಿ ವಸ್ತುಗಳ ಪ್ರದರ್ಶನ, ಚಿತ್ರ ಸಂತೆ, ಗಾಳಿಪಟ ಸ್ಪರ್ಧೆ, ಕುಸ್ತಿ ಪಂದ್ಯಾವಳಿ ಹಮ್ಮಿಕೊಳ್ಳಲಾಗಿತ್ತು. ಅಲ್ಲದೇ ಜ.21ರಂದು ನಡೆದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ರಥೋತ್ಸವದಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಂಡು ಪುನೀತರಾದರು. ಜ.23 ರಂದು ಭಾನುವಾರ ರಾತ್ರಿ ಉತ್ಸವ ಮೂರ್ತಿ ತೆಪ್ಪೋತ್ಸವ ನಡೆಯಿತು. ಬಾಣಬಿರುಸು ಪ್ರದರ್ಶನ ವೀಕ್ಷಣೆಗಾಗಿ ಕ್ಷೇತ್ರ ಜನಜಂಗುಳಿ ಕೂಡಿತ್ತು. ಇದೇ ವೇಳೆ ಪ್ರಥಮ ಬಾರಿಗೆ ಯುವ ಬ್ರಿಗೇಡ್ ವತಿಯಿಂದ ಕಪಿಲಾ ಆರತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ತೆಪ್ಪೋತ್ಸವಕ್ಕೆ ನಿರೀಕ್ಷೆಗೂ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ಸುತ್ತೂರು ಬಳಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಪರಿಣಾಮ ಭಕ್ತರು ಭಾನುವಾರ ರಾತ್ರಿ ಮನೆಗೆ ತೆರಳಲು ಸಾಧ್ಯವಾಗದೆ ಸೋಮವಾರ ಬೆಳಗ್ಗೆ ತೆರಳಿದ ಬಗ್ಗೆ ವರದಿಯಾಗಿದೆ. ಜಾತ್ರಾ ಮಹೋತ್ಸವದಲ್ಲಿ ಈ ಬಾರಿ 114 ಮಂದಿ ನೂತನ ಜೋಡಿಗಳು ಸತಿಪತಿಗಳಾದರು. ಒಟ್ಟಾರೆ ಈ ಬಾರಿಯ ಜಾತ್ರಾ ಮಹೋತ್ಸವಕ್ಕೆ ವರ್ಣರಂಜಿತ ತೆರೆಬಿದ್ದಿದ್ದು, ಕೃಷಿ, ಕೈಗಾರಿಕೆ, ಆರೋಗ್ಯ, ತಾಂತ್ರಿಕ, ಕರಕುಶಲ, ವಾಣಿಜ್ಯ, ಶೈಕ್ಷಣಿಕ ಹಾಗೂ ವಿಜ್ಞಾನ ಅರಿವು ಮೂಡಿಸಲಾಯಿತು.

ನೌಕಾಪಡೆಗೆ ಜಲಾಂತರ್ಗಾಮಿ ಐಎನ್ಎಸ್ ವಾಗಿರ್ ಸೇರ್ಪಡೆ

ಮುಂಬೈ: ಕಲ್ವರಿ ದರ್ಜೆಯ ಐದನೇ ಜಲಾಂತರ್ಗಾಮಿ ನೌಕೆ ಐಎನ್ಎಸ್ ವಾಗಿರ್ ಭಾರತೀಯ ನೌಕಾಪಡೆಗೆ ಸೋಮವಾರ ಸೇರ್ಪಡೆಯಾಗಿದೆ.

ಇದರೊಂದಿಗೆ ಭಾರತೀಯ ನೌಕಾಪಡೆಯು ಮತ್ತಷ್ಟು ಬಲವರ್ಧಿಸಿಕೊಂಡಿದೆ.

ಐಎನ್ಎಸ್ ವಾಗಿರ್ ಅನ್ನು ಫ್ರಾನ್ಸ್ ತಂತ್ರಜ್ಞಾನದೊಂದಿಗೆ ಮಜಗಾನ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದೆ. ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್. ಹರಿ ಕುಮಾರ್ ಉಪಸ್ಥಿತಿಯಲ್ಲಿ ಜಲಾಂತರ್ಗಾಮಿ ನೌಕೆ ಸೇರ್ಪಡೆಗೊಂಡಿದೆ.

ಸುಧಾರಿತ ತಂತ್ರಜ್ಞಾನದ ಐಎನ್ಎಸ್ ವಾಗಿರ್, ಶತ್ರುಗಳ ದಾಳಿ ತಡೆಯಲು, ಸಾಗರದಲ್ಲಿ ಭಾರತದ ರಕ್ಷಣೆಯ ಬಲವರ್ಧನೆಗೆ, ಗುಪ್ತಚರ ಹಾಗೂ ನಿಗಾ ವಹಿಸಲು ನೆರವಾಗಲಿದೆ. ಜಗತ್ತಿನ ಅತ್ಯುತ್ತಮ ಸೆನ್ಸಾರ್‌ಗಳನ್ನು ಇದು ಒಳಗೊಂಡಿವೆ. ವಾಗಿರ್ ಅಂದರೆ 'ಸ್ಯಾಂಡ್ ಷಾರ್ಕ್' ಎಂದಾಗಿದ್ದು, ರಹಸ್ಯ, ನಿರ್ಭಯತೆಯನ್ನು ಪ್ರತಿಬಿಂಬಿಸುತ್ತದೆ.

ಲಾರಿ ಡಿಕ್ಕಿ; ಬೈಕ್ ಸವಾರ ಸಾವು

ಮೈಸೂರು, ಜ.23– ಲಾರಿ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಮೈಸೂರು–ಮಾನಂದವಾಡಿ ರಸ್ತೆಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಹೆಚ್.ಡಿ.ಕೋಟೆ ತಾಲೂಕು ಮಾದಾಪುರ ಗ್ರಾಮದ ನಿವಾಸಿ ಸಿದ್ದರಾಜು(50) ಅಪಘಾತದಲ್ಲಿ ಮೃತಪಟ್ಟವರು. ಇವರು ಮೈಸೂರಿನಿಂದ ಬೈಕ್‌ನಲ್ಲಿ ಗ್ರಾಮಕ್ಕೆ ತೆರಳುತ್ತಿದ್ದಾಗ ರಾತ್ರಿ ಸುಮಾರು 9 ಗಂಟೆ ವೇಳೆಗೆ ಅರಸನಕೆರೆ ಗೇಟ್ ತಿರುವಿನ ಬೆಳ್ಳಿಕೊಳಗ ಎಸ್ಟೇಟ್ ಬಳಿ ಹಿಂಬದಿಯಿಂದ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಸಿದ್ದರಾಜು ನೆಲಕ್ಕುರುಳಿ ತೀವ್ರ ಪೆಟ್ಟಿನಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ಜಯಪುರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ, ಮೃತದೇಹವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿದರು. ಘಟನೆ ಸಂಬಂಧ ಪ್ರಕರಣ ದಾಖಲು ಪ್ರಕ್ರಿಯೆ ನಡೆದಿದೆ. ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ತಮಿಳುನಾಡು: ದೇವಸ್ಥಾನದ ಉತ್ಸವದ ವೇಳೆ ಕ್ರೇನ್ ಕುಸಿದು ನಾಲ್ವರು ಸಾವು

ಚೆನ್ನೈ: ತಮಿಳುನಾಡಿನ ರಾಣಿಪೇಟ್ ಜಿಲ್ಲೆಯ ಕಿಲ್ವೀಡಿ ಗ್ರಾಮದಲ್ಲಿ ದೇವಸ್ಥಾನದ ಉತ್ಸವದ ವೇಳೆ ಕ್ರೇನ್ ಕುಸಿದು ನಾಲ್ವರು ಸಾವಿಗೀಡಾಗಿದ್ದಾರೆ ಮತ್ತು ಹಲವರು ಗಾಯಗೊಂಡಿರುವ ಘಟನೆ ಭಾನುವಾರ ರಾತ್ರಿ ನಡೆದಿದೆ. ಮೃತರನ್ನು ಮುತ್ತುಕುಮಾರ್ (31), ಜ್ಯೋತಿಬಾಬು (19) ಮತ್ತು ಎಸ್.ಭೂಪಾಲನ್ (41) ಎಂದು ಗುರುತಿಸಲಾಗಿದೆ.

ಕಿಲ್ವೀಡಿ ಗ್ರಾಮದಲ್ಲಿ ನಡೆದ ದ್ರೌಪತಿ ಅಮ್ಮನವರ ಉತ್ಸವದ ಸಂದರ್ಭದಲ್ಲಿ ಪಟ್ಟಣದಾದ್ಯಂತ ಮೆರವಣಿಗೆಯಲ್ಲಿ ದೇವರ ವಿಗ್ರಹವನ್ನು ಹೊತ್ತ ಕ್ರೇನ್‌ನಲ್ಲಿ ಎಂಟು ಜನರು ಇದ್ದರು. ಮೆರವಣಿಗೆ ವೇಳೆ ಕ್ರೇನ್ ಕುಸಿದು ಬಿದ್ದಿದ್ದು, ಮೇಲಿದ್ದ ಎಂಟು ಮಂದಿ ನೆಲಕ್ಕೆ ಬಿದ್ದು ತೀವ್ರವಾಗಿ ಗಾಯಗೊಂಡಿದ್ದಾರೆ. ಅಪಘಾತ ಸಂಭವಿಸಿದಾಗ ಸುಮಾರು 1,500 ಜನರು ರಸ್ತೆ ಮತ್ತು ದೇವಸ್ಥಾನದ ಆವರಣದಲ್ಲಿ ಇದ್ದರು.

ಕೆ.ಎಲ್. ರಾಹುಲ್–ಅಥಿಯಾ ಶೆಟ್ಟಿ ಅದ್ದೂರಿ ಮದುವೆ

ಮುಂಬೈ: ಬಾಲಿವುಡ್‌ನ ಲವ್ ಬರ್ಡ್ಸ್ ಅಥಿಯಾ ಶೆಟ್ಟಿ ಮತ್ತು ಕೆ.ಎಲ್ ರಾಹುಲ್ ಸೋಮವಾರ (ಜ.23)ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಸಾಕಷ್ಟು ವರ್ಷಗಳ ಪ್ರೀತಿಗೆ ಮದುವೆಯೆಂಬ ಮುದ್ರೆ ಒತ್ತಿದ್ದಾರೆ. ಈ ಚೆಂದದ ಜೋಡಿಯ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡ್ತಿದೆ.



ಕ್ರಿಕೆಟಿಗ ಕೆ.ಎಲ್. ರಾಹುಲ್ ಮತ್ತು 'ಹೀರೋ' ಸಿನಿಮಾದ ನಟಿ ಅಥಿಯಾ ಶೆಟ್ಟಿ ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು. ಸೋಮವಾರ ಸುನೀಲ್ ಶೆಟ್ಟಿ ಅವರ ಬಂಗಲೆಯಲ್ಲಿ ಇವರ ಮದುವೆ ನೆರವೇರಿದೆ. ಈ ಸಂಭ್ರಮಕ್ಕೆ ಇಡೀ ಬಾಲಿವುಡ್ ಚಿತ್ರರಂಗವೇ ಸಾಕ್ಷಿಯಾಗಿದೆ.

ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ

21 ಅಂಡಮಾನ್–ನಿಕೋಬಾರ್ ದ್ವೀಪಗಳಿಗೆ ಪರಮವೀರ ಚಕ್ರ ಪ್ರಶಸ್ತಿ ಪುರಸ್ಕೃತರ ಹೆಸರಿಟ್ಟ ಪ್ರಧಾನಿ ಮೋದಿ



ನವದೆಹಲಿ: ಸ್ವಾತಂತ್ರ್ಯ ಹೋರಾಟಗಾರ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 126ನೇ ಜನ್ಮಜಯಂತಿ ಹಿನ್ನೆಲೆಯಲ್ಲಿ ಪರಾಕ್ರಮ ದಿವಸ ಅಂಗವಾಗಿ 21 ಪರಮ ವೀರ ಚಕ್ರ ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು ಅಂಡಮಾನ್ ನಿಕೋಬಾರ್‌ನ ಅತಿದೊಡ್ಡ ಹೆಸರು ಇಡದಿರುವ ದ್ವೀಪಗಳಿಗೆ ನಾಮಕರಣ ಮೂಲಕ ನೇತಾಜಿ ಅವರಿಗೆ ಇಂದು ಪ್ರಧಾನಿ ನರೇಂದ್ರ ಮೋದಿ ಗೌರವ ಸಮರ್ಪಿಸಿದ್ದಾರೆ.

ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ 21 ಅತಿದೊಡ್ಡ ಹೆಸರಿಡದ ದ್ವೀಪಗಳಿಗೆ ಹೆಸರಿಡುವ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದರು. ನೇತಾಜಿ ಸುಭಾಷ್ ಚಂದ್ರ ಬೋಸ್ ದ್ವೀಪದಲ್ಲಿ ನಿರ್ಮಿಸಲಿರುವ ನೇತಾಜಿಗೆ ಸಮರ್ಪಿಸಲಾದ ರಾಷ್ಟ್ರೀಯ ಸ್ಮಾರಕದ ಮಾದರಿಯನ್ನು ಅನಾವರಣಗೊಳಿಸಿದರು.

ಸುಬೇದಾರ್ ಮೇಜರ್ ಸಂಜಯ್ ಕುಮಾರ್ ಮತ್ತು ಸುಬೇದಾರ್ ಮೇಜರ್ ಯೋಗೇಂದ್ರ ಸಿಂಗ್ ಯಾದವ್ (ನಿವೃತ್ತ) ಸೇರಿದಂತೆ 21 ಪರಮವೀರ ಚಕ್ರ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಈ ದ್ವೀಪಗಳಿಗೆ ಇಡಲಾಗಿದೆ.

ಕಾರ್ಯಕ್ರಮವನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ, ಇಂದು ಹೊಸ ಹೆಸರುಗಳನ್ನು ಪಡೆದಿರುವ 21 ದ್ವೀಪಗಳ ಹೆಸರುಗಳಲ್ಲಿ ಹಲವು ಸಂದೇಶಗಳು ಅಡಕವಾಗಿವೆ. ಏಕ್ ಭಾರತ್, ಶ್ರೇಷ್ಠ ಭಾರತ್; ಈ ಸಂದೇಶ ನಮ್ಮ ಸಶಸ್ತ್ರ ಪಡೆಗಳ ಶೌರ್ಯವನ್ನು ಬಿಂಬಿಸುತ್ತದೆ ಎಂದರು.

ವೀರ ಸಾವರ್ಕರ್ ಮತ್ತು ದೇಶಕ್ಕಾಗಿ ಹೋರಾಡಿದ ಅನೇಕ ವೀರರು ಅಂಡಮಾನ್‌ನ ಈ ನೆಲದಲ್ಲಿ ಬಂಧಿತರಾಗಿದ್ದರು. ನಾನು 4–5 ವರ್ಷಗಳ ಹಿಂದೆ ಪೋರ್ಟ್ ಬ್ಲೇರ್‌ಗೆ ಭೇಟಿ ನೀಡಿದಾಗ ಅಲ್ಲಿನ 3 ಪ್ರಮುಖ ದ್ವೀಪಗಳಿಗೆ ಭಾರತೀಯ ಹೆಸರುಗಳನ್ನು ಇಟ್ಟು ಬಂದಿದ್ದೆ ಎಂದರು.

ತ್ರಿವರ್ಣ ಧ್ವಜ ಹಾರಿಸಿದ ನಾಡು: ಅಂಡಮಾನ್‌ನ ಈ ನಾಡು ಮೊಟ್ಟ ಮೊದಲ ಬಾರಿಗೆ ತ್ರಿವರ್ಣ ಧ್ವಜವನ್ನು ಹಾರಿಸಿದ ನಾಡು. ಅಲ್ಲಿ ಮೊದಲ ಬಾರಿಗೆ ಸ್ವತಂತ್ರ ಭಾರತದ ಸರ್ಕಾರ ರಚನೆಯಾಯಿತು. ಇಂದು ನೇತಾಜಿ ಸುಭಾಷ್ ಬೋಸ್ ಅವರ ಜನ್ಮದಿನ ದೇಶವು ಈ ದಿನವನ್ನು ಪರಾಕ್ರಮ್ ದಿವಸ್ ಎಂದು ಆಚರಿಸುತ್ತದೆ ಎಂದರು.

ಎಲ್ಲಾ 21 ಪರಮವೀರರಿಗೆ "ಇಂಡಿಯಾ ಫಸ್ಟ್" ಒಂದೇ ನಿರ್ಣಯವಾಗಿತ್ತು. ಇಂದು ಈ ದ್ವೀಪಗಳ ನಾಮಕರಣದಲ್ಲಿ, ಅವುಗಳ ನಿರ್ಣಯವು ಶಾಶ್ವತವಾಗಿ ಅಮರವಾಗಿದೆ. ಅಂಡಮಾನ್‌ನ ಸಾಮರ್ಥ್ಯ ಅಪಾರವಾಗಿದೆ. ಕಳೆದ 8 ವರ್ಷಗಳಲ್ಲಿ ದೇಶವು ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಮಾಡಿದೆ ಎಂದರು.

21 ಪ್ರಶಸ್ತಿ ಪುರಸ್ಕೃತರು ಯಾರು: ಹೆಸರಿಸದ ಅತೀ ದೊಡ್ಡ ದ್ವೀಪಕ್ಕೆ ಭಾರತದ ಮೊದಲ ಪರಮವೀರ ಚಕ್ರ ಪ್ರಶಸ್ತಿ ಪುರಸ್ಕೃತ ಮೇಜರ್ ಸೋಮನಾಥ್ ಶರ್ಮಾ ಅವರ ಹೆಸರನ್ನು ಇಡಲಾಗಿದೆ. ಅವರು 1950 ರಲ್ಲಿ ಮರಣೋತ್ತರ ಪ್ರಶಸ್ತಿಯನ್ನು ಪಡೆದರು. 1947 ರಲ್ಲಿ ಪಾಕಿಸ್ತಾನಿ ದಾಳಿಕೋರರಿಂದ ಶ್ರೀನಗರ ವಿಮಾನ ನಿಲ್ದಾಣವನ್ನು ರಕ್ಷಿಸುವಲ್ಲಿ ಹುತಾತ್ಮರಾಗಿದ್ದರು.

ದ್ವೀಪಗಳಿಗೆ ಸುಬೇದಾರ್ ಮತ್ತು ಹೊನಿ ಕ್ಯಾಪ್ಟನ್ (ಆಗ ಲ್ಯಾನ್ಸ್ ನಾಯಕ್) ಕರಮ್ ಸಿಂಗ್, 2ನೇ ಲೆಫ್ಟಿನೆಂಟ್ ರಾಮ ರಾಘೋಬಾ ರಾಣೆ ಸೇರಿದಂತೆ ಇತರೆ 20 ಪರಮ ವೀರ ಚಕ್ರ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಇಡಲಾಗಿದೆ. ನಾಯಕ್ ಜಾದುನಾಥ್ ಸಿಂಗ್; ಕಂಪನಿ ಹವಾಲ್ದಾರ್ ಮೇಜರ್ ಪಿರು ಸಿಂಗ್; ಕ್ಯಾಪ್ಟನ್ ಜಿಎಸ್ ಸಲಾರಿಯಾ; ಲೆಫ್ಟಿನೆಂಟ್ ಕರ್ನಲ್ (ಆಗಿನ ಮೇಜರ್) ಧನ್ ಸಿಂಗ್ ಥಾಪಾ; ಸುಬೇದಾರ್ ಜೋಗಿಂದರ್ ಸಿಂಗ್; ಮೇಜರ್ ಶೈತಾನ್ ಸಿಂಗ್, ಲ್ಯಾನ್ಸ್ ನಾಯಕ್ ಆಲ್ಬರ್ಟ್ ಎಕ್ಕಾ ಇತರ ಪ್ರಶಸ್ತಿ ಪುರಸ್ಕೃತರು.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಐತಿಹಾಸಿಕ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ನೇತಾಜಿ ಅವರ ಸ್ಮರಣೆಯನ್ನು ಗೌರವಿಸಲು, ರಾಸ್ ದ್ವೀಪಗಳನ್ನು ನೇತಾಜಿ ಸುಭಾಷ್ ಚಂದ್ರ ಬೋಸ್ ದ್ವೀಪ ಎಂದು ಮರುನಾಮಕರಣ ಮಾಡಿದರು. ಶಹೀದ್ ದ್ವೀಪ್ ಮತ್ತು ಸ್ವರಾಜ್ ದ್ವೀಪ್ ಎಂದು ಮರುನಾಮಕರಣ ಮಾಡಲಾಗಿದೆ

ಪರಿಸರ ತಜ್ಞರು, ಭೂ ವಿಜ್ಞಾನಿಗಳು ಸೇರಿದಂತೆ ಸಂಬಂಧಿಸಿದ ತಜ್ಞರ ಅಭಿಪ್ರಾಯ ಪಡೆಯದೇ

ಚಾಮುಂಡಿಬೆಟ್ಟದಲ್ಲಿ 'ಪ್ರಸಾದ್' ಯೋಜನೆಯಡಿ ಯಾವುದೇ ಅಭಿವೃದ್ಧಿ ಕಾಮಗಾರಿ ನಡೆಸಬಾರದು

ಮಾಜಿ ಸಚಿವರೂ ಆದ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಒತ್ತಾಯ

ಮೈಸೂರು,ಜ.23(ಪಿಎಂ)–ಪರಿಸರ ತಜ್ಞರು, ಭೂ ವಿಜ್ಞಾನಿಗಳು ಸೇರಿದಂತೆ ಸಂಬಂಧಿಸಿದ ತಜ್ಞರ ಅಭಿಪ್ರಾಯ ಪಡೆಯದೇ 'ಪ್ರಸಾದ್' ಯೋಜನೆಯಡಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಚಾಮುಂಡಿಬೆಟ್ಟದಲ್ಲಿ ನಡೆಸಬಾರದು ಎಂದು ಮಾಜಿ ಸಚಿವರೂ ಆದ ಶಾಸಕ ಜಿಟಿದೇವೇಗೌಡ ಒತ್ತಾಯಿಸಿದ್ದಾರೆ

ಬೆಟ್ಟದಲ್ಲಿ ಪಿಲಿಗ್ರಿಮೇಜ್ ರಿಜುವಿನೇಷನ್ ಅಂಡ್ ಸ್ಪಿರಿಚ್ಯುಯಲ್, ಹೆರಿಟೇಜ್ ಆಗ್‌ಮೆಂಟೇಷನ್ ಡ್ರೈವ್ (ಪ್ರಸಾದ್) ಯೋಜನೆಯಡಿ ರಾಜ್ಯ ಪ್ರವಾಸೋದ್ಯಮ ಇಲಾಖೆ ಉದ್ದೇಶಿಸಿರುವ ಅಭಿವೃದ್ಧಿ ಕೆಲಸಗಳು ಬೆಟ್ಟದ ಪ್ರಾಕೃತಿಕ ಸಂರಚನೆ, ಸಹಜ ಸೌಂದರ್ಯಕ್ಕೆ ಮತ್ತು ಧಾರ್ಮಿಕ ಪಾವಿತ್ರ್ಯಕ್ಕೆ ಕುಂದು ತರಬಹುದೆಂದು ಪರಿಸರ ಕಾಳಜಿವುಳ್ಳ ನಾಗರಿಕರು, ಭಕ್ತರು ತೀವ್ರ ಕಳವಳ ವ್ಯಕ್ತಪಡಿಸಿರುವುದು, ಅಭಿವೃದ್ಧಿ ಕಾಮಗಾರಿ ಆರಂಭಿಸುವ ಮೊದಲು ತಜ್ಞರ ಅಭಿಪ್ರಾಯ ಪಡೆಯಬೇಕು ಮತ್ತು ಪರಿಸರಕ್ಕೆ ಪೂರಕ ಕಾಮಗಾರಿ ಮಾತ್ರವೇ ಮಾಡಬೇಕೆಂದು ಒತ್ತಾಯಿಸಿರುವುದನ್ನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ.



ಚಾಮುಂಡಿಬೆಟ್ಟ ನಾನು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹಿನ್ನೆಲೆಯಲ್ಲಿ ಮಾಧ್ಯಮಗಳ ಈ ವರದಿಗಳನ್ನು ಗಂಭೀರವಾಗಿ ಪರಿಗಣಿಸಿದ್ದೇನೆ. ಈ ಬಗ್ಗೆ ಕೆಲವು ತಜ್ಞರು ಮತ್ತು ಪರಿಸರ ಪ್ರೇಮಿಗಳ ಜೊತೆಗೆ ಚರ್ಚಿಸಿದಾಗ, ಅವರೆಲ್ಲರೂ ವ್ಯಕ್ತಪಡಿಸುತ್ತಿರುವ ಅಭಿಪ್ರಾಯ ಸರಿಯಿದೆ ಅನಿಸಿದೆ. ಚಾಮುಂಡಿ ಬೆಟ್ಟದ ಪ್ರಾಕೃತಿಕ ಸಂರಚನೆ ತುಂಬಾ ಸೂಕ್ಷ್ಮವೆಂದು ತಜ್ಞರು ಅಭಿಪ್ರಾಯಟ್ಟಿದ್ದಾರೆ. ಹೀಗಿರುವಾಗ ಬೆಟ್ಟದ ಧಾರಣಾ ಸಾಮರ್ಥ್ಯ ತಿಳಿಯದೆ ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಿಸುವುದರಿಂದ ಅಪಾಯಕಾರಿಯಾಗುವ ಸಾಧ್ಯತೆ ಹೆಚ್ಚಿದೆ ಎಂದು ಶಾಸಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಸಿಯವರು ತಜ್ಞರೊಂದಿಗೆ ಸಮಾಲೋಚಿಸಬೇಕು: ಕ್ಷೇತ್ರದ ಶಾಸಕನಾಗಿ ಚಾಮುಂಡಿ ಬೆಟ್ಟದ ರಕ್ಷಣೆ, ಚಾಮುಂಡೇಶ್ವರಿ ದೇವಿ ಭಕ್ತರು ಹಾಗೂ ಪರಿಸರದ ಬಗ್ಗೆ ಕಾಳಜಿ ಹೊಂದಿರುವ ನಾಗರಿಕರ ಭಾವನೆ ಅರ್ಥ ಮಾಡಿಕೊಳ್ಳುವುದು ನನ್ನ ಆದ್ಯ ಕರ್ತವ್ಯ ಹಾಗಾಗಿ ಬೆಟ್ಟದಲ್ಲಿ ಪ್ರಸಾದ್ ಯೋಜನೆಯಡಿ ಉದ್ದೇಶಿತ ಕಾಮಗಾರಿ ಆರಂಭಿಸುವ ಮುನ್ನ ತಜ್ಞರ ಅಭಿಪ್ರಾಯ ಪಡೆಯುವುದು ಸೂಕ್ತ. ತಜ್ಞರ ಅಭಿಪ್ರಾಯ ಗಳನ್ನು ನೀಡುವವರೆಗೆ ಬೆಟ್ಟದಲ್ಲಿ ಯಾವುದೇ ಕಾಮಗಾರಿ ಆರಂಭಿಸಬಾರದು. ಈ ಬಗ್ಗೆ ಜಿಲ್ಲಾಧಿಕಾರಿಗಳು ವಿವಿಧ ತಜ್ಞರ ಜೊತೆಗೆ ಸಮಾಲೋಚನೆ ನಡೆಸಬೇಕೆಂದು ಶಾಸಕರು ಪ್ರಕಟಣೆಯಲ್ಲಿ ಸೂಚಿಸಿದ್ದಾರೆ.

ವನ್ಯಜೀವಿ ದಾಳಿ ತಡೆಗೆ ಶಾಶ್ವತ ಕ್ರಮ ಕೈಗೊಳ್ಳಿ

ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ ಆಗ್ರಹ

ಮೈಸೂರು,ಜ.23(ಪಿಎಂ)–ವನ್ಯಜೀವಿಗಳು ನಾಡಿಗೆ ಲಗ್ಗೆ ಇಟ್ಟು ಜನ, ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿರುವುದು ತೀವ್ರ ಆತಂಕಕಾರಿ. ಕಾಡು ಮೃಗಗಳ ದಾಳಿ ತಡೆಗೆ ಶಾಶ್ವತ ಕ್ರಮ ಕೈಗೊಳ್ಳಲು ಅರಣ್ಯ ಇಲಾಖೆ ಮುಂದಾಗಬೇಕು ಎಂದು ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಆಗ್ರಹಿಸಿದ್ದಾರೆ.



ಇತ್ತೀಚೆಗೆ ಮೈಸೂರು ಜಿಲ್ಲೆಯ ಸುತ್ತಮುತ್ತ ಚಿರತೆ ಹಾವಳಿ ಹೆಚ್ಚಾಗಿದ್ದು, 11 ವರ್ಷದ ಬಾಲಕ ಸೇರಿದಂತೆ ನಾಲ್ವರು ಬಲಿಯಾಗಿದ್ದಾರೆ. ಅಲ್ಲದೇ ಭಾನುವಾರ ನಾಗರಹೊಳೆ ಅಭಯಾರಣ್ಯದಲ್ಲಿ ಹುಲಿ ದಾಳಿಗೆ ಬಾಲಕನೋರ್ವ ತುತ್ತಾಗಿರುವುದು ನಿಜಕ್ಕೂ ನೋವಿನ ಸಂಗತಿ. ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ. ವನ್ಯಜೀವಿಗಳ ದಾಳಿ ತಡೆಗೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ತಜ್ಞರ ಉನ್ನತ ಮಟ್ಟದ ಸಮಿತಿ ರಚಿಸಲು ಮುಖ್ಯಮಂತ್ರಿಗಳು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಕ್ರಮ ವಹಿಸಬೇಕು. ಜೊತೆಗೆ ಮೃತರ ಕುಟುಂಬಕ್ಕೆ ನೀಡುವ ಪರಿಹಾರ ಮೊತ್ತವನ್ನು ಸರ್ಕಾರ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ವನ್ಯಜೀವಿಗಳ ದಾಳಿಯಿಂದ ಜನ–ಜಾನುವಾರುಗಳ ಜೀವ ಹೋಗುತ್ತಿರುವುದು ಮಾತ್ರವಲ್ಲದೆ, ರೈತರ ಬೆಳೆಗಳು ನಾಶವಾಗುತ್ತಿದೆ. ಇಂತಹ ಹಲವಾರು ಪ್ರಕರಣಗಳು ವರದಿಯಾಗಿದ್ದರೂ ಅರಣ್ಯ ಇಲಾಖೆ ಜಾಗೃತಗೊಳ್ಳದಿರುವುದು ನಿಜಕ್ಕೂ ಬೇಸರದ ಸಂಗತಿ. ಮಾನವ ಮತ್ತು ಕಾಡುಪ್ರಾಣಿ ಸಂಘರ್ಷ ತಡೆಯುವಲ್ಲಿ ಹಿಂದಿನಿಂದಲೂ ಅರಣ್ಯ ಇಲಾಖೆ ಸಂಪೂರ್ಣ ವಿಫಲವಾಗಿದೆ ಎಂದು ಪ್ರಕಟಣೆಯಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 'ದೇಶಿ ಉತ್ಸವ'ಕ್ಕೆ ಚಾಲನೆ



ಮೈಸೂರು, ಜ.23(ಎಸ್‌ಪಿಎನ್)– ಮೈಸೂರು ಶ್ರೀನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವತಿಯಿಂದ ವಿದ್ಯಾರ್ಥಿಗಳಲ್ಲಿ ದೇಶಿ ಆಟಗಳ ಪರಿಚಯಿಸುವ ಕುರಿತು ಆಯೋಜಿಸಿದ್ದ 'ದೇಶಿ ಉತ್ಸವ'ಕ್ಕೆ ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಜೋಶಿ ಹನುಮಂತಚಾರ್ ಚಾಲನೆ ನೀಡಿ, ಶುಭ ಹಾರೈಸಿದರು.

ಈ ವೇಳೆ ವಿವಿಧ ಸಾಂಪ್ರದಾಯಕ ಆಟಗಳಾದ ಅಳಿಗುಳಿ, ಚೌಕಬಾರ, ಪಗಡೆ, ಲಗೋರಿ, ಎತ್ತಿನಗಾಡಿ ಸವಾರಿ, ಕೆಸರು ಗದ್ದೆ ಓಟ, ಓಕುಳಿ ಸೇರಿದಂತೆ ಇತರೆ ಮನರಂಜನಾ ಆಟಗಳನ್ನು ಆಯೋಜಿಸಿ, ಈ ಆಟಗಳಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಳ್ಳಲು ಪ್ರೋತ್ಸಾಹಿಸಲಾಯಿತು. ಇದರ ಜೊತೆಗೆ ಜಾನಪದ ಕಲೆಗಳಾದ ಪೂಜಾ ಕುಣಿತ, ದೊಣ್ಣೆವರಸೆ, ಮಲ್ಲ ಕಂಬದಂತಹ ದೇಶಿ ನೃತ್ಯ ಪ್ರಕಾರಗಳನ್ನು ಪರಿಚಯಿಸಲಾಯಿತು. ಅಂತೆಯೇ ಬಿಸೊಕಲ್ಲು, ಒನಕೆ, ದರ್ಪಣ, ಒಳಕಲ್ಲು, ಸೇರು ಪಾವು, ಚಟಾಕು, ನೊಗ ಸೇರಿದಂತೆ ಇತರೆ ಗೃಹೋಪಯೋಗಿ ವಸ್ತುಗಳನ್ನು ಪ್ರದರ್ಶಿಸಿ ವಿದ್ಯಾರ್ಥಿಗಳು ಖುಷಿಪಟ್ಟರು.

ಈ ವೇಳೆ ಮೈಸೂರು ಮತ್ತು ಮಂಗಳೂರು ವಿಭಾಗದ ಆರ್‌ಎಸ್‌ಎಸ್ ಪರ್ಯಾವರಣ್ ಪ್ರಮುಖ್ ಮಾ.ವೆಂಕಟರಾಮ್, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಪ್ರದಾನಾಚಾರ್ಯ ರಾಧಿಕಾ ಮೂರ್ತಿ ಸೇರಿದಂತೆ ಇತರ ಬೋಧಕ ಮತ್ತು ಬೋಧಕೇತರ ವರ್ಗ ಉಪಸ್ಥಿತರಿದ್ದರು.

ವಿದ್ಯಾವರ್ಧಕ ಕಾಲೇಜು: ಮೊದಲ ಎಂ.ಕಾಂ ವಿದ್ಯಾರ್ಥಿಗಳಿಗೆ ಸ್ವಾಗತ



ಮೈಸೂರು, ಜ.23– ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಜೀವನದಲ್ಲಿ ಸಾಮರ್ಥ್ಯ, ನಡವಳಿಕೆ, ಗುಣ ಮತ್ತು ಶಿಸ್ತುಗಳನ್ನು ಮೈಗೂಡಿಸಿಕೊಳ್ಳಬೇಕು ಮತ್ತು ತಮ್ಮ ಕೌಶಲ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಎಂ.ಎಸ್‌ಗಿರಿಧರ ರಾವ್ ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಕೇಂದ್ರದಲ್ಲಿ ಸೋಮವಾರ ಆಯೋಜಿಸಿದ್ದ ಪ್ರಥಮ ಎಂ.ಕಾಂ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಗುರಿಯನ್ನು ಹೊಂದಿರಬೇಕು, ಆ ಗುರಿಯನ್ನು ತಲುಪಲು ಶ್ರಮ ಪಡಬೇಕು. ಕಠಿಣ ಪರಿಶ್ರಮಕ್ಕೆ ಪರ್ಯಾಯ ವಿಲ್ಲ. ಪರಿಶ್ರಮಪಡುವುದರಿಂದ ತಮ್ಮನ್ನು ತಾವು ತಮ್ಮ ಗುರಿಯ ಗಮ್ಯದ ಕಡೆಗೆ ತೆರಳು ದಾರಿಯನ್ನು ಯೋಜಿಸಿಕೊಂಡಂತಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾಲೇಜು ಪ್ರಾಂಶುಪಾಲ ಡಾ.ಎಸ್. ಮರೀಗೌಡ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಇಂದಿನ ಶಿಕ್ಷಣದಲ್ಲಿ ಅಗತ್ಯವಿರುವ ಸಮಗ್ರ ಮತ್ತು ಕೌಶಲ್ಯಧಾರಿತ ಶಿಕ್ಷಣವನ್ನು ನೀಡುವಲ್ಲಿ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸವಲತ್ತುಗಳನ್ನು ವಿವರವಾಗಿ ತಿಳಿಸಿಕೊಟ್ಟರು. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಸಂಸ್ಥೆ ಹಾಗೂ ಅಧ್ಯಾಪಕರು ಶ್ರಮಿಸುತ್ತಿದ್ದಾರೆ. ಅದರ ಸಂಪೂರ್ಣ ಸಫಲತೆಯನ್ನು ವಿದ್ಯಾರ್ಥಿಗಳು ತಮ್ಮ ಎರಡು ವರ್ಷಗಳ ಶಿಕ್ಷಣಾವಧಿಯಲ್ಲಿ ಪಡೆಯಬೇಕು ಎಂದು ಕಿವಿ ಮಾತು ಹೇಳಿದರು.


ಸಂಸ್ಥೆಯ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿ, ಪ್ರಸ್ತುತ ಉದ್ಯೋಗ ಮಾರುಕಟ್ಟೆಯಲ್ಲಿ ಇಂದು ಕೌಶಲ್ಯಾಧಾರಿತ ಶಿಕ್ಷಣ ಇಲ್ಲದೇ ಯಾರು ಉದ್ಯೋಗವನ್ನು ಪಡೆಯುವುದು ಸಾಧ್ಯವಾಗುತ್ತಿಲ್ಲ. ಎಲ್ಲರೂ ಶಿಕ್ಷಣದ ಜೊತೆ ಕೌಶಲ್ಯವನ್ನೂ ಮೈಗೂಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ 2020–22ನೇ ಸಾಲಿನ ಪ್ರತಿಭಾವಂತ ವಿದ್ಯಾರ್ಥಿಗಳಾದ ಹೆಚ್.ಎನ್.ಅನಘಾ, ಅರ್ಪಿತಾ ಬಾಯಿ, ಹೆಚ್.ಎ.ಗಯಾನ, ಎಸ್.ನವಿತ, ಹೆಚ್.ಎಲ್. ಪ್ರೀತಿ, ಇನ್ಸಾಅಲಿಯಾ, ಕೆ.ಸಿ.ವೀರೇಂದ್ರ ಕುಮಾರ್ ಅವರನ್ನು ಅಭಿನಂದಿಸಲಾಯಿತು. ಸ್ನಾತಕೋತ್ತರ ವಿಭಾಗ ಮುಖ್ಯಸ್ಥೆ ಡಾ.ಎಸ್.ಪೂರ್ಣಿಮಾ ಸ್ವಾಗತಿಸಿದರು. ಪ್ರೊ.ಎಂ.ಸಿ.ಅನುಷ ನಿರೂಪಿಸಿ, ಪ್ರೊ.ಪ್ರಶಾಂತ್ ಕುಮಾರ್ ವಂದಿಸಿದರು.

ಹಸಿರು ನಮ್ಮ ಉಸಿರು

ಕಲಾವಿದೆ ಆರ್.ಎನ್.ಶ್ರೀಲತಾರಿಗೆ ಸಮರ್ಪಣಾ ಸಂಗೀತ ಶ್ರೀ ಪ್ರಶಸ್ತಿ ಪ್ರದಾನ

ಮೈಸೂರು ಸಂಗೀತ ಕಲಾವಿದರ ತವರು: ಮುಡಾ ಅಧ್ಯಕ್ಷ



ಮೈಸೂರು, ಜ.23(ಎಸ್‌ಪಿಎನ್)– ಹಿರಿಯ ಸಂಗೀತ ಕಲಾವಿದೆ ವಿದುಷಿ ಆರ್.ಎನ್. ಶ್ರೀಲತಾ ಅವರಿಗೆ 'ಸಮರ್ಪಣಾ ಸಂಗೀತಶ್ರೀ' ಪ್ರಶಸ್ತಿಯನ್ನು ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಸೋಮವಾರ ಪ್ರಧಾನ ಮಾಡಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಆಯೋಜಿಸಿದ್ದ ಶ್ರೀಮತಿ ರಾಧಮ್ಮ ಸ್ಮಾರಕ ಟ್ರಸ್ಟ್ ವತಿಯಿಂದ ಸಂಗೀತೋತ್ಸವ ಹಾಗೂ ಸಮರ್ಪಣಾ ಸಂಗೀತಶ್ರೀ ಪ್ರಶಸ್ತಿ ಹಾಗೂ ಬಹುಮಾನ ವಿತರಣೆ ಸಮಾರಂಭದಲ್ಲಿ ಮಾತನಾಡಿದರು

ಮೈಸೂರು ಕಲೆಗಳ ತವರೂರು. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅನೇಕ ಕಲಾವಿದರಿದ್ದಾರೆ. ಆ ಪರಂಪರೆಯಲ್ಲಿ ಸಾಧನೆ ಮಾಡಿರುವ ಹಿರಿಯ ಸಂಗೀತ ಕಲಾವಿದೆ ಆರ್.ಎನ್.ಶ್ರೀಲತಾ ಅವರಿಗೆ 'ಸಮರ್ಪಣಾ ಸಂಗೀತ ಶ್ರೀ' ಪ್ರಶಸ್ತಿಯನ್ನು ನೀಡಿ, ಗೌರವಿಸುತ್ತಿರುವುದು ಉತ್ತಮ ಸಂಗತಿ. ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಸಂಗೀತ ಕಲಿಸಿದರೆ, ದೊಡ್ಡವರಾದ ಮೇಲೆ ಉತ್ತಮ ಬದುಕು ಕಟ್ಟಿಕೊಳ್ಳುತ್ತಾರೆ.

ವಿದುಷಿ ಆರ್.ಎನ್.ಶ್ರೀಲತಾ ಅವರು, ಹಲವು ವರ್ಷಗಳಿಂದ ಕಿರಿಯ ವಿದ್ಯಾರ್ಥಿಗಳಿಗೆ ಸಂಗೀತ ಕಲಿಸುವ ಮೂಲಕ ಮೈಸೂರಿನಲ್ಲಿ ಸಂಗೀತ ಕಲೆ ಉಳಿವಿಗೆ ತಮ್ಮದೇ ಕೊಡುಗೆ ನೀಡುತ್ತಿದ್ದಾರೆ. ಇಂತಹವರಿಗೆ ಸಮರ್ಪಣಾ ಸಂಸ್ಥೆ ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಮೆಚ್ಚುಗೆಯ ಸಂಗತಿ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿದುಷಿ ಆರ್.ಎನ್. ಶ್ರೀಲತಾ, ಚಿಕ್ಕ ವಯಸ್ಸಿನಿಂದಲೇ ಸಂಗೀತ ಸೇರಿದಂತೆ ಇತರೆ ಮಾನವಿಕ ವಿಭಾಗಗಳಲ್ಲಿ ಆಸಕ್ತಿವಹಿಸಿದರೆ, ಅಂತಹ ವಿದ್ಯಾರ್ಥಿಗಳು ಉತ್ತಮ ಜೀವನ ಕಟ್ಟಿಕೊಳ್ಳುತ್ತಾರೆ. ಯಾವ ವಿದ್ಯಾರ್ಥಿಗೆ ಶುದ್ಧ ಕಂಠ, ರಾಗ–ತಾಳಗಳನ್ನು ಗ್ರಹಿಸುವ ಶಕ್ತಿ ಇರುತ್ತದೆಯೋ ಅಂತಹ ವಿದ್ಯಾರ್ಥಿಗಳ ಕಂಠದಿಂದ ಸಂಗೀತ ಕೇಳಲು ಇಂಪಾಗಿರುತ್ತದೆ ಎಂದು ತಿಳಿಸಿದರು.

ಈ ವೇಳೆ ಕರ್ನಾಟಕ ಶಾಸ್ತ್ರೀಯ ಸಂಗೀತ ಪರೀಕ್ಷೆ–2018, 2019 ಹಾಗೂ 2021ರ ಜೂನಿಯರ್, ಸೀನಿಯರ್, ವಿದ್ವತ್ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಗಳಿಸಿದ ವಿದ್ಯಾರ್ಥಿಗಳಾದ ಎಲ್.ಅರ್ಚನಾ(ವಿದ್ವತ್), ಅಮೂಲ್ಯ ಆರ್.ಭಟ್(ಸಿನಿಯರ್), ಲಾಸ್ಯ ನಡುತೋಟ (ಜೂನಿಯರ್), ಆರ್.ನಿತ್ಯಶ್ರೀ (ಪೂರ್ವ ಮತ್ತು ವಿದ್ವತ್), ಎಂ.ಎಸ್.ಕೌಸ್ತುಭ (ಸೀನಿಯರ್), ನಿರಂಜನಿ ರಘುನಂದನ್ ಭಾರ್ಗವ (ಜೂನಿಯರ್), ಹೆಚ್.ವಿ.ಶಮಾ (ಸೀನಿಯರ್), ಸುಜಾತ ಎಸ್.ನಾಯಕ್ (ಜೂನಿಯರ್), ಟಿ.ಪಿ.ಶುಭಾಷಿನಿ (ವಿದ್ವತ್), ಆರ್.ತೇಜಸ್ವಿನಿ (ಸೀನಿಯರ್), ಲಿಖಿತ ಎಸ್.ಗೌಡ (ಜೂನಿಯರ್) ಅವರನ್ನು ಅಭಿನಂದಿಸಲಾಯಿತು.

ವೇದಿಕೆಯಲ್ಲಿ ಸಮರ್ಪಣಾ ಸಂಸ್ಥೆಯ ಅಧ್ಯಕ್ಷ ಎನ್.ವಿ.ಫಣೀಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಮೈಸೂರು ಆಕಾಶವಾಣಿ ಹಿರಿಯ ಕಾರ್ಯಕ್ರಮ ಉದ್ಘೋಷಕ ಪ್ರಭುಸ್ವಾಮಿ ಚ.ಮಳಿಮಠ, ಸಮರ್ಪಣಾ ಸಂಸ್ಥೆಯ ಕಾರ್ಯದರ್ಶಿ ಸುಧಾ ಫಣೀಶ್ ಉಪಸ್ಥಿತರಿದ್ದರು.

ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ ಹಿನ್ನಲೆ

ರಾಷ್ಟ್ರಭಾರತಿ ವತಿಯಿಂದ ಬೃಹತ್ ರಕ್ತದಾನ ಶಿಬಿರ



ಮೈಸೂರು, ಜ.23(ಎಂಕೆ)– ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 126ನೇ ಜಯಂತಿ(ಪರಾಕ್ರಮ್ ದಿವಸ್) ಅಂಗವಾಗಿ ರಾಷ್ಟ್ರೋತ್ಥಾನ ರಕ್ತ ಕೇಂದ್ರದ ಸಹಯೋಗದೊಂದಿಗೆ ರಾಷ್ಟ್ರಭಾರತಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು.

ಸುಭಾಷ್ ಚಂದ್ರ ಬೋಸ್ ಅವರ 126ನೇ ಜಯಂತಿ ಹಿನ್ನಲೆಯಲ್ಲಿ 126 ಮಂದಿ ರಕ್ತದಾನಿಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಅವರಲ್ಲಿ ಬಹುತೇಕರು ಕಾಲೇಜು ವಿದ್ಯಾರ್ಥಿಗಳಾಗಿದ್ದು, ರಕ್ತದಾನದ ಮೂಲಕ ರಕ್ತದಾನದ ಮಹತ್ವವನ್ನು ತೋರಿಸಿಕೊಟ್ಟರು. ರಕ್ತದಾನ ನೀಡಿದವರಿಗೆ ಅಭಿನಂದನಾ ಪತ್ರನೀಡಿ ಪ್ರೋತ್ಸಾಹಿಸಲಾಯಿತು.

ಇದಕ್ಕೂ ಮುನ್ನ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದ ನಿವೃತ್ತ ಬ್ಲಾಕ್ ಕ್ಯಾಟ್ ಕಮಾಂಡೊ ಸಿಎಂಜಿ ಶ್ರೀಧರ್ ಮಾತನಾಡಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಯುವ ಸಮೂಹದ ಸ್ಫೂರ್ತಿ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ 'ನನಗೆ ರಕ್ತ ಕೊಡಿ, ನಿಮಗೆ ನಾನು ಸ್ವಾತಂತ್ರ್ಯ ಕೊಡಿಸುತ್ತೇನೆ' ಘೋಷವಾಕ್ಯದೊಂದಿಗೆ ಬ್ರಿಟಿಷರ ಪಾಲಿಗೆ ಅಕ್ಷರಶಃ ಸಿಂಹಸ್ವಪ್ನವಾಗಿದ್ದರು. ಚಿಕ್ಕ ವಯಸ್ಸಿನಿಂದಲೇ ನಾಯಕತ್ವ ಗುಣ ಹೊಂದಿದ್ದ ಅವರ ಸ್ವಾತಂತ್ರ್ಯ ಹೋರಾಟ ಎಂದೆಂದಿಗೂ ಅವಿಸ್ಮರಣಿಯ ಎಂದು ಸ್ಮರಿಸಿದರು.

ಸುಭಾಷ್ ಚಂದ್ರ ಬೋಸ್ ಅವರ ಸ್ಮರಣಾರ್ಥ ರಕ್ತದಾನ ಶಿಬಿರ ಆಯೋಜಿಸಿರುವುದು ಶ್ಲಾಘನೀಯ. ರಕ್ತದಾನ ಮಹಾದಾನವಾಗಿದೆ. ಒಬ್ಬರ ರಕ್ತ ಮತ್ತೊಬ್ಬರ ಜೀವ ರಕ್ಷಣೆಗೆ ಸಹಕಾರಿಯಾಗಲಿದೆ. ಮುಖ್ಯವಾಗಿ ಯುವಕ–ಯುವತಿಯರೇ ಹೆಚ್ಚಾಗಿ ರಕ್ತದಾನ ಶಿಬಿರದಲ್ಲಿ ಭಾಗಿಯಾಗಿರುವುದು ವಿಶೇಷ ಎಂದರು.

ಆರ್‌ಎಸ್‌ಎಸ್ ದಕ್ಷಿಣ ಪ್ರಾಂತದ ಸಂಘಟಕ ಕೃಷ್ಣ ಪ್ರಸಾದ್ ಮಾತನಾಡಿ, ಮಹಾಪುರುಷರ ಜನ್ಮದಿನಾಚರಣೆಯಂದು ಅವರ ಆದರ್ಶಗಳನ್ನು ಪಾಲನೆ ಮಾಡುವ ಎಲ್ಲರಿಗೂ ಶುಭಾಷಯ ಕೋರಲಾಗುವುದು. ಇವತ್ತು ಯುವಕರಿಗೆ ಸಂಭ್ರಮದ ದಿನ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಶಿಕ್ಷಣ ಪಡೆಯುತ್ತಲೇ ಮಹಾಪುರಷ ಬಗ್ಗೆ ಅಧ್ಯಯನ ಮಾಡುತ್ತಾ ಬ್ರಿಟಿಷರ ಕೈಕೆಳಗೆ ಕೆಲಸ ಮಾಡಬಾರದು. ಸ್ವಾತಂತ್ರ್ಯಕ್ಕಾಗಿ ಸಂಘಟನಾತ್ಮಕ ಹೋರಾಟ ನಡೆಸಬೇಕು ಎಂದು ನಿರ್ಧರಿಸಿದ ಮಹಾನ್ ಪರಾಕ್ರಮಿಯಾಗಿದ್ದಾರೆ. ಅವರ ಧೈರ್ಯ ನಮಗೆ ಶ್ರೀರಕ್ಷೆಯಾಗಿದೆ ಎಂದು ತಿಳಿಸಿದರು. ಆರ್‌ಎಸ್‌ಎಸ್ ಮೈಸೂರು ವಿಭಾಗದ ಜಂಟಿ ಕಾರ್ಯದರ್ಶಿ ತಿಲಕ್, ರಾಷ್ಟ್ರಭಾರತಿ ಚಾರಿಟೆಬಲ್ ಟ್ರಸ್ಟ್ ಖಜಾಂಚಿ ರುದ್ರಮೂರ್ತಿ, ಸದಸ್ಯರಾದ ಸಚ್ಚಿದಾನಂದ, ರಾಕೇಶ್, ದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಮಲೆ ಮಹದೇಶ್ವರ ದೇಗುಲ ಉದ್ಘಾಟನಾ ಕಾರ್ಯಕ್ರಮ: ಫ್ಲೆಕ್ಸ್ ವಿಚಾರಕ್ಕೆ

ಜೆಡಿಎಸ್, ಕಾಂಗ್ರೆಸ್ ಕಾರ್ಯಕರ್ತರ ಮಾರಾಮಾರಿ

ಮಂಡ್ಯ, ಜ.23– ತಾಲೂಕಿನ ಬಿ.ಗೌಡಗೆರೆಯಲ್ಲಿ ಮಲೆ ಮಹದೇಶ್ವರ ದೇಗುಲ ಉದ್ಘಾಟನೆ ವೇಳೆ ಸಂಸದೆ ಸುಮಲತಾ ಹಾಗೂ ಕಾಂಗ್ರೆಸ್ ನಾಯಕರ ಭಾವಚಿತ್ರವುಳ್ಳ ಫ್ಲೆಕ್ಸ್ ಮಾತ್ರ ಹಾಕಲಾಗಿದೆ. ಜೆಡಿಎಸ್ ನಾಯಕರ ಫ್ಲೆಕ್ಸ್ ಅಳವಡಿಸಿಲ್ಲ ಎಂಬ ಕಾರಣಕ್ಕೆ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು, ಪರಿಸ್ಥಿತಿ ವಿಕೋಪಕ್ಕೆ ತೆರಳಿ ಮಾರಾಮಾರಿಯಾಗಿದ್ದು, ಪೊಲೀಸರು ಎರಡೂ ಪಕ್ಷದ ಕಾರ್ಯಕರ್ತರನ್ನು ಸಮಾಧಾನಪಡಿಸಲು ಹರಸಾಹಸಪಟ್ಟರು.





ತಾಲೂಕಿನ ಬಿ.ಗೌಡಗೆರೆಯಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಟ್ರಸ್ಟ್ ಆಯೋಜಿಸಿದ್ದ ಶ್ರೀ ಮಲೆ ಮಹದೇಶ್ವರಸ್ವಾಮಿ ನೂತನ ವಿಗ್ರಹ ಪ್ರತಿಷ್ಠಾಪನೆ ಮತ್ತು ದೇವಾಲಯ ಉದ್ಘಾಟನಾ ಕಾರ್ಯಕ್ರಮವನ್ನು ಸಂಸದೆ ಸುಮಲತಾ ಉದ್ಘಾಟಿಸಬೇಕಿತ್ತು. ಈ ನಿಟ್ಟಿನಲ್ಲಿ ಸಂಸದೆ ಸುಮಲತಾ ಹಾಗೂ ಶಾಸಕ ಎಂ.ಶ್ರೀನಿವಾಸ್ ಸೇರಿದಂತೆ ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರು ಆಗಮಿಸಿದ್ದರು.

ಈ ವೇಳೆ ಸುಮಲತಾ ವೇದಿಕೆ ಮೇಲೆ ಬರುತ್ತಿದ್ದಂತೆಯೇ ಆಕ್ರೋಶಗೊಂಡ ಜೆಡಿಎಸ್ ಕಾರ್ಯಕರ್ತರು, ಉದ್ಘಾಟನಾ ಸಮಾರಂಭದ ಫ್ಲೆಕ್ಸ್‌ನಲ್ಲಿ ಕೇವಲ ಸುಮಲತಾ ಹಾಗೂ ಕಾಂಗ್ರೆಸ್ಸಿಗರೇ ಇದ್ದಾರೆ. ಜೆಡಿಎಸ್ ನಾಯಕರಿಗೆ ಅವಕಾಶಕೊಟ್ಟಿಲ್ಲ. ಕೇವಲ ರಾಜಕೀಯ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜೊತೆಗೆ ವೇದಿಕೆ ಕೇವಲ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮೀಸಲಾಗಿದ್ದು, ಜೆಡಿಎಸ್ ನಾಯಕರನ್ನು ವೇದಿಕೆಗೆ ಹತ್ತಿಸಿಲ್ಲ. ಈಗ ಮಾತ್ರ ಸುಮಲತಾ ವೇದಿಕೆ ಮೇಲಿದ್ದಾರೆ ಎಂದು ಆರೋಪಿಸಿ ಸುಮಲತಾ ಅವರನ್ನು ಕೆಳಗಿಳಿಸುವಂತೆ ಪಟ್ಟು ಹಿಡಿದರು.

ಈ ಸಂದರ್ಭ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಆಗ ಕಾಂಗ್ರೆಸ್ಸಿಗರ ಜೊತೆಗೂಡಿದ ಸುಮಲತಾ ಬೆಂಬಲಿಗರು ಜೆಡಿಎಸ್ ಕಾರ್ಯಕರ್ತರ ಮೇಲೆ ಮುಗಿಬಿದ್ದರು. ನೋಡನೋಡುತ್ತಿದ್ದಂತೆಯೇ ಪರಸ್ಪರ ಚೇರ್ ಎಸೆದುಕೊಂಡು, ತಳ್ಳಾಟ ನೂಕಾಟವಾಡಿ ಹೊಡೆದಾಡಿಕೊಂಡರು. ಎರಡೂ ಪಕ್ಷದ ಮುಖಂಡರು ಮಧ್ಯ ಪ್ರವೇಶಿಸಿ, ಬಿಡಿಸಲು ಯತ್ನಿಸಿದರಾದರೂ ಯಶಸ್ವಿಯಾಗಲಿಲ್ಲ. ಕೊನೆಗೆ ಪೊಲೀಸರು ಎರಡು ಪಕ್ಷದ ಕಾರ್ಯಕರ್ತರನ್ನು ಸಮಾಧಾನಪಡಿಸಿ, ಕಾರ್ಯಕ್ರಮ ನಡೆಯಲು ಅನುವು ಮಾಡಿಕೊಟ್ಟರು. ಸುಮಲತಾರನ್ನು ಭದ್ರತೆಯಲ್ಲಿ ಕಾರಿನಲ್ಲಿ ಕೂರಿಸಿದ್ದ ಪೊಲೀಸರು ಹಾಗೂ ಆಯೋಜಕರು ಪರಿಸ್ಥಿತಿ ತಿಳಿಯಾದ ನಂತರ ಮತ್ತೆ ಸಂಸದರನ್ನು ವೇದಿಕೆಗೆ ಕರೆ ತಂದರು.

ದೇಗುಲ ಉದ್ಘಾಟನೆ, ವಿಶೇಷ ಪೂಜೆ ಸಲ್ಲಿಕೆ

ತಾಲೂಕಿನ ಬಿ.ಗೌಡಗೆರೆಯಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ನೂತನ ವಿಗ್ರಹ ಪ್ರತಿಷ್ಠಾಪನೆ ಮತ್ತು ದೇವಾಲಯವನ್ನು ಸಂಸದೆ ಸುಮಲತಾ ಅಂಬರೀಶ್ ಉದ್ಘಾಟಿಸಿ, ವಿಶೇಷ ಪೂಜೆ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಮಂಡ್ಯ ಜಿಲ್ಲೆ ಜನರ ಆಶೀರ್ವಾದಿಂದ ನಾನು ಸಂಸದೆಯಾಗಿದ್ದೇನೆ. ನಾನು ರಾಜಕಾರಣಕ್ಕಾಗಿ ಅಭಿವೃದ್ಧಿ ಕಾರ್ಯ ಮಾಡಲ್ಲ. ನನಗೆ ಏನು ಮಾಡಬೇಕು ಎಂಬುದು ತಿಳಿದಿದೆ. ನನ್ನನ್ನು ಪಕ್ಷೇತರ ಸಂಸದೆಯಾಗಿ ಆಯ್ಕೆ ಮಾಡಿರುವುದಕ್ಕೆ ನಿಮಗೆ ಋಣಿಯಾಗಿದ್ದೇನೆ. ದೇವಾಲಯ ಲೋಕಾಪರ್ಣೆ ಕಾರ್ಯಕ್ರಮಕ್ಕೆ ಬಂದಿದ್ದೇನೆ. ಪುಣ್ಯದ ಕಾರ್ಯ ನೆರವೇರಿದೆ. ಆ ದೇವರು ಎಲ್ಲರಿಗೂ ಆಶೀರ್ವಾದ ಮಾಡಲಿ ಎಂದರು. ದೇವಾಲಯದ ಜೀರ್ಣೋದ್ಧಾರ ಟ್ರಸ್ಟ್ ಉಪಾಧ್ಯಕ್ಷ ವಾಣೀಶ್ ಬಾಬು ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಸಕ ಎಂ.ಶ್ರೀನಿವಾಸ್, ಜಿಪಂ ಮಾಜಿ ಸದಸ್ಯ ಎಚ್.ಎನ್.ಯೋಗೇಶ್, ಮನ್‌ಮುಲ್ ಅಧ್ಯಕ್ಷ ರಾಮಚಂದ್ರ, ಕಾಂಗ್ರೆಸ್ ಮುಖಂಡರಾದ ಡಾ.ಕೃಷ್ಣ, ಅಮರಾವತಿ ಚಂದ್ರಶೇಖರ್, ಟ್ರಸ್ಟ್ ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ಹೊನ್ನೇಶ್, ಖಜಾಂಚಿ ಟಿ.ನಾಗರಾಜು, ಗ್ರಾಪಂ ಅಧ್ಯಕ್ಷ ಸಿದ್ದೇಗೌಡ ಮತ್ತು ಪದಾಧಿಕಾರಿಗಳು, ಯಜಮಾನರು, ಗ್ರಾಮದ ಯುವ ಮುಖಂಡರು ಹಾಜರಿದ್ದರು.

ಆಲಂಬಾಡಿಕಾವಲು ಗ್ರಾಮ ಪಂಚಾಯಿತಿಗೆ ಚಂದ್ರಕಲಾ ಅಧ್ಯಕ್ಷೆ



ಕೆ.ಆರ್.ಪೇಟೆ, ಜ.23– ತಾಲೂಕಿನ ಆಲಂಬಾಡಿಕಾವಲು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಚಂದ್ರಕಲಾ ಬಸವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಜೆ.ಸುಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚಂದ್ರಕಲಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯಾಗಿ ತಾಪಂ ಇಓ ಸತೀಶ್ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ತಾಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಎಂ.ಶಿವಕುಮಾರ್ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ಚಂದ್ರಕಲಾ ಮಾತನಾಡಿ, ಎಲ್ಲಾ ಸದಸ್ಯರ ಸಹಕಾರದೊಂದಿಗೆ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಅಲ್ಲದೇ ಸಾರ್ವಜನಿಕರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸುತ್ತೇನೆ ಎಂದರು.

ಈ ವೇಳೆ ಜೆಡಿಎಸ್ ಮುಖಂಡರಾದ ಬಿ.ಎಲ್.ಎ.ಆರ್.ರಘು, ಜಿಪಂ ಮಾಜಿ ಸದಸ್ಯ ರಾಮದಾಸ್, ತಾಪಂ ಮಾಜಿ ಸದಸ್ಯ ಎ.ಎಂ.ಸಂಜೀವಪ್ಪ, ಮುಖಂಡರಾದ ಶಶಿಧರ್ ಸಂಗಾಪುರ, ಸರ್ವೆ ದೇವರಾಜು, ಎಂ.ಮೋಹನ್, ಬೋರಲಿಂಗೇಗೌಡ, ಸ್ವಾಮಿಗೌಡ, ತನ್ವೀರ್ ಪಾಷಾ, ಬಸವರಾಜು, ಗ್ರಾಪಂ ಉಪಾಧ್ಯಕ್ಷ ಎ.ಟಿ.ಕರಿಶೆಟ್ಟಿ, ಸದಸ್ಯರಾದ ಜೆ.ಸುಮ, ಮುಜಾಹಿದ್ ಖಾನ್, ಎ.ರಾಜು, ನಾಗೇಶ್, ಬಿ.ಜೆ.ವೆಂಕಟೇಶ್, ವೇದಾಂಬ, ಬೋರಲಿಂಗೇಗೌಡ, ಭಾಗ್ಯಮ್ಮ, ರೂಪ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ನಾಗೇಶ್, ಕಾರ್ಯದರ್ಶಿ ಇಮ್ರಾನ್ ಷರೀಫ್, ಬಿಲ್ ಕಲೆಕ್ಟರ್ ಪಿ.ಅಶೋಕ್ ಇತರರಿದ್ದರು.

ಬೆಳಗೊಳದಲ್ಲಿ ಫಲಾನುಭವಿಗಳಿಗೆ ಇ–ಖಾತಾ ವಿತರಣೆ



ಶ್ರೀರಂಗಪಟ್ಟಣ, ಜ.23– ನನ್ನ ತಾಯಿ ಪಾರ್ವತಮ್ಮ ಶ್ರೀಕಂಠಯ್ಯನವರು ಶಾಸಕಿಯಾಗಿದ್ದ ವೇಳೆ ವಿತರಿಸಿದ್ದ ನಿವೇಶನ ಹಕ್ಕು ಪತ್ರಗಳಿಗೆ 19 ವರ್ಷಗಳ ನಂತರ ಅದೇ ಫಲಾನುಭವಿಗಳಿಗೆ ಶಾಸಕನಾಗಿ ನಾನು ಇ–ಖಾತಾ ದಾಖಲಾತಿ ವಿತರಿಸುತ್ತಿದ್ದೇನೆ ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಹೇಳಿದರು.

ತಾಲೂಕಿನ ಬೆಳಗೊಳದಲ್ಲಿ ಫಲಾನುಭವಿಗಳಿಗೆ ನಿವೇಶನದ ಇ–ಖಾತಾ ದಾಖಲಾತಿ ವಿತರಿಸಿ ಮಾತನಾಡಿದ ಅವರು, 2004ರಲ್ಲಿ ನನ್ನ ತಾಯಿ ಪಾರ್ವತಮ್ಮ ಶ್ರೀಕಂಠಯ್ಯನವರು ಶಾಸಕಿಯಾಗಿದ್ದ ವೇಳೆ ವಿತರಿಸಿದ್ದ ನಿವೇಶನ ಹಕ್ಕು ಪತ್ರಗಳಿಗೆ ಇಂದು 'ಇ' ಖಾತಾ ದಾಖಲಾತಿ ವಿತರಿಸುತ್ತಿದ್ದು, ಇದು ಹಿಂದಿನ ಶಾಸಕರ ಕಾರ್ಯವೈಖರಿಗೆ ಹಿಡಿದ ಕನ್ನಡಿ ಎಂದರು. ಬಡವರಿಗೆ ಆಶ್ರಯ ನೀಡಬೇಕಿದ್ದ ನಿವೇಶನಗಳು ಹಿಂದಿಗೂ ನಿವೇಶನಗಳಾಗಿಯೇ ಉಳಿದಿರುವುದು ದುರಾದೃಷ್ಟ, ಇದು ಮಾಜಿ ಶಾಸಕರ ಕಾರ್ಯವೈಖರಿ ಪ್ರಶ್ನಿಸುವಂತಾಗಿದ್ದು, ಅವರಿಗೆ ಈ ಭಾಗದ ಗ್ರಾಮಗಳ ಅಭಿವೃದ್ಧಿಯ ಬಗ್ಗೆ ಇಚ್ಛಾಶಕ್ತಿ ಕೊರತೆ ಇರುವುದು ಎದ್ದು ಕಾಣುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಕಾನೂನಾತ್ಮಕ ದಾಖಲಾತಿಗಳು ಫಲಾನುಭವಿಗಳಿಗೆ ದೊರೆಯಲಿದ್ದು, ಈ ಸಂಬಂಧ ಈಗಾಗಲೇ ನಾನು ಕಾರ್ಯ ಪ್ರವೃತ್ತನಾಗಿರುವುದಾಗಿ ತಿಳಿಸಿದರು.

ಬೆಳಗೊಳ ಹಾಗೂ ಮಂಟಿ ಗ್ರಾಮಸ್ಥರಿಗೆ ಹಕ್ಕುಪತ್ರ ವಿತರಣೆ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾರ್ಯ ಮಾಡಬೇಕಿರುವುದು ಚುನಾಯಿತ ಜನಪ್ರತಿನಿಧಿಗಳ ಆದ್ಯ ಕರ್ತವ್ಯ. ಹಿಂದಿನ ಶಾಸಕರು ಈ ಬಗ್ಗೆ ಏಕೆ ಮೌನ ವಹಿಸಿದ್ದರು ಎಂಬುದನ್ನು ಗ್ರಾಮಸ್ಥರು ಅರಿಯಬೇಕು. ಬರೀ ಸುಳ್ಳು ಆಶ್ವಾಸನೆ ನೀಡಿ ಶಾಸಕರಾಗಿದ್ದ ಮಾಜಿ ಶಾಸಕರು, ಈ ಭಾಗದ ಗ್ರಾಮಸ್ಥರ ಸಮಸ್ಯೆಗಳನ್ನು ಕಾನೂನಾತ್ಮಕವಾಗಿ ಪರಿಹರಿಸದೆ ಸುಮ್ಮನೆ ಕಾಲಹರಣ ಮಾಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜೆಡಿಎಸ್‌ನಿಂದ ಬಂಡಾಯವೆದ್ದಿರುವ ತಗ್ಗಹಳ್ಳಿ ವೆಂಕಟೇಶ್ ಸ್ಪರ್ಧೆ ಬಗ್ಗೆ ಪ್ರತಿಕ್ರಿಯಿಸಿದ ಶಾಸಕರು, ಈ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ಕೈಗೊಳ್ಳಲಿದ್ದಾರೆ. ಅವರ ನಡೆಯಿಂದ ಜೆಡಿಎಸ್‌ಗೆ ಯಾವುದೇ ಸಮಸ್ಯೆ ಇಲ್ಲ. ಅವರೂ ಜೆಡಿಎಸ್‌ನಲ್ಲಿದ್ದವರೇ ಆಗಿರುವುದರಿಂದ ಪಕ್ಷದ ವರಿಷ್ಠರ ಭಾವಚಿತ್ರ ಗಳನ್ನು ಅವರ ಬಂಡಾಯ ಸಭೆಯಲ್ಲಿ ಬಳಸಿಕೊಂಡಿದ್ದಕ್ಕೆ ನನ್ನ ವಿರೋಧ ಇಲ್ಲ. ಈ ಬಗ್ಗೆ ಏನೇ ತೀರ್ಮಾನ ಕೈಗೊಂಡರೂ ಅದು ಪಕ್ಷದ ವರಿಷ್ಠರಿಗೆ ಬಿಟ್ಟಿದ್ದು ಎಂದರು.

ಇದೇ ವೇಳೆ ಗ್ರಾಮದ ಮುಖಂಡರು, ಚುನಾಯಿತ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಜ.28ರವರೆಗೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜ.23– ವಿಸಿ ಫಾರಂ ವಿದ್ಯುತ್ ವಿತರಣಾ ಕೇಂದ್ರದ ಮಾರ್ಗದಲ್ಲಿ 66 ಕೆವಿ ಹೊಸಮಾರ್ಗ ನಿರ್ಮಿಸುತ್ತಿರುವುದರಿಂದ ಜ.24 ರಿಂದ 28 ರವರೆಗೆ ಮಧ್ಯಾಹ್ನ 12ರಿಂದ ಸಂಜೆ 6ರವರೆಗೆ ವಿಸಿ ಫಾರಂ, ಶಿವಳ್ಳಿ, ದುದ್ದ, ಬಿ.ಹಟ್ನ, ಬೇವಕಲ್ಲು, ಹುಲಿಕೆರೆ, ಚಂದಗಾಲು, ಹುಲ್ಲೇನಹಳ್ಳಿ, ಹೊಳಲು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಭತ್ತ, ರಾಗಿ ಖರೀದಿ ಕೇಂದ್ರಕ್ಕೆ ಶಾಸಕ ಸಿಎಸ್‌ಪಿ ಚಾಲನೆ

ಪಾಂಡವಪುರ, ಜ.23– ಪಟ್ಟಣದ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಸಮಿತಿ(ಎಪಿಎಂಸಿ) ಆವರಣದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಹಾಗೂ ರಾಗಿ ಖರೀದಿ ಕೇಂದ್ರಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸರ್ಕಾರ ರೈತರ ಅನುಕೂಲಕ್ಕಾಗಿ ಭತ್ತ ಹಾಗೂ ರಾಗಿ ಖರೀದಿ ಕೇಂದ್ರ ಆರಂಭಿಸಿದೆ. ರೈತರು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಅಲ್ಲದೇ ದಲ್ಲಾಳಿಗಳಿಂದ ಮೋಸಕ್ಕೆ ಒಳಗಾಗದೆ ತಾವು ಬೆಳೆದ ಬೆಳೆಗಳನ್ನು ಖರೀದಿ ಕೇಂದ್ರದಲ್ಲಿ ನೋಂದಣಿ ಮಾಡಿಸಿ, ಮಾರಾಟ ಮಾಡಬೇಕು ಎಂದು ಮನವಿ ಮಾಡಿದರು.



ಭತ್ತ, ರಾಗಿ ನೋಂದಣಿ ಹಾಗೂ ಮಾರಾಟಕ್ಕೆ ಮಾ.31ರವರೆಗೆ ಕಾಲಾವಕಾಶ ನೀಡಲಾಗಿದ್ದು, ಪ್ರತಿ ಕ್ವಿಂಟಲ್ ಭತ್ತ 2040 ರೂ. ಹಾಗೂ ಪ್ರತಿ ಕ್ವಿಂಟಲ್ ರಾಗಿಗೆ 3578 ರೂ. ದರ ನಿಗದಿಪಡಿಸಲಾಗಿದೆ. ಈಗಾಗಲೇ 1814 ಮಂದಿ ರೈತರು ಭತ್ತ ಮಾರಾಟಕ್ಕೆ ನೋಂದಣಿ ಮಾಡಿಸಿದ್ದು, 53,663 ಕ್ವಿಂಟಲ್ ಖರೀದಿ ಗುರಿ ಹೊಂದಲಾಗಿದೆ. ರಾಗಿ ಮಾರಾಟಕ್ಕೆ 4615 ಮಂದಿ ರೈತರು ನೋಂದಣಿ ಮಾಡಿಸಿದ್ದಾರೆ. 65,939 ಕ್ವಿಂಟಲ್ ರಾಗಿ ಖರೀದಿ ಗುರಿ ಹೊಂದಲಾಗಿದೆ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿರ್ದೇಶಕ ಮೋಹನ್ ಮಾತನಾಡಿ, ಸರ್ಕಾರ ರೈತರಿಗೆ ಅನುಕೂಲ ಮಾಡುವ ಉದ್ದೇಶದಿಂದ ಭತ್ತ, ರಾಗಿ ಖರೀದಿ ಕೇಂದ್ರ ಆರಂಭಿಸಿ ಭತ್ತ 'ಎ' ಗ್ರೇಡ್‌ಗೆ 2040, 'ಬಿ' ಗ್ರೇಡ್ 2060 ರೂ. ಹಾಗೂ ರಾಗಿಗೆ 3578 ರೂ. ನಿಗದಿ ಮಾಡಿದೆ. ಹಳ್ಳಿಯಿಂದ ದಿಲ್ಲಿವರೆಗೆ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. ಹಾಗಾಗಿ ರೈತರು ಜಾಗೃತರಾಗಿ ಖುದ್ದು ನೋಂದಣಿ ಕೇಂದ್ರಕ್ಕೆ ತೆರಳಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದರು.

ಈ ವೇಳೆ ಕೆಎಸ್‌ಎಂಎಫ್ ಸಿಇಓ ರಾಹುಸಾಬ್‌ರಾಮು ಚುಜಾಲವಾಡ, ಶಾಖಾ ವ್ಯವಸ್ಥಾಪಕ ವೆಂಕಟೇಶ್, ತಹಸೀಲ್ದಾರ್ ಕುಮಾರ್, ಪುರಸಭೆ ಸದಸ್ಯ ಕೃಷ್ಣ, ಅಣ್ಣಯ್ಯ, ಖರೀದಿ ಕೇಂದ್ರದ ಅಧಿಕಾರಿ ಲಿಂಗರಾಜು, ಆಹಾರ ನಿರೀಕ್ಷಕ ಮಂಜುನಾಥ್, ಎಪಿಎಂಸಿ ಕಾರ್ಯದರ್ಶಿ ಸಂದೇಶ್, ಮಾಜಿ ನಿರ್ದೇಶಕ ಆನಂದ್, ತೋಟ ಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ಸೌಮ್ಯ, ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಪ್ರಿಯದರ್ಶಿನಿ, ಮುಖಂಡ ರಾದ ಎಚ್.ಎಲ್.ನಂಜುಂಡೇಗೌಡ, ಪುಟ್ಟಣ್ಣ ಇತರರಿದ್ದರು.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ: ಸವಾರ ಸಾವು



ಭಾರತೀನಗರ, ಜ.23– ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ. ಇಲ್ಲಿಗೆ ಸಮೀಪದ ಕರಡಕೆರೆ ಗ್ರಾಮದ ನಿವಾಸಿ ಸತೀಶ್(45) ಸಾವನ್ನಪ್ಪಿದವರು. ಈತ ಕರಡಕೆರೆಯಿಂದ ಕೆ.ಎಂ.ದೊಡ್ಡಿಗೆ ಬರುತ್ತಿದ್ದ ವೇಳೆ ಗೂಡ್ಸ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಸತೀಶ್ ಅವರನ್ನು ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಗೂಡ್ಸ್ ವಾಹನ ಚಾಲಕ ಪರಾರಿಯಾಗಿದ್ದು, ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಒಂದನೇ ಪುಟದಿಂದ

ಲಂಚ... ಲಂಚ... ಪಿಸುಗುಡುತ್ತಿವೆ

ಹೇಳಿದ್ದರು. ಆದರೆ, ಗುತ್ತಿಗೆದಾರರ ಸಂಘದ ಅಧ್ಯಕ್ಷ ಪತ್ರ ಬರೆದು ಒಂದೂವರೆ ವರ್ಷವಾದರೂ ಏಕೆ ಕ್ರಮ ಕೈಗೊಂಡಿಲ್ಲ. ತನಿಖೆ ನಡೆಸಿದರೆ ದಾಖಲೆ ಕೊಡಲು ಸಿದ್ಧವಿದ್ದಾರೆ ಎಂದು ಹೇಳಿದರು. ಸೋಲುವ ಭಯದಿಂದ ಮೋದಿ ಅವರನ್ನು ವಾರಕ್ಕೊಮ್ಮೆ ರಾಜ್ಯಕ್ಕೆ ಕರೆಸುತ್ತಿದ್ದಾರೆ. ಮೋದಿ, ಷಾ ನೂರು ಬಾರಿ ರಾಜ್ಯಕ್ಕೆ ಬಂದರೂ ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಮೋದಿ ಒಬ್ಬರೇ ಬಿಜೆಪಿಗೆ ಬಂಡವಾಳ. ಅಧಿಕಾರ ಕೊಡಿಸುತ್ತಾರೆ ಎಂಬ ಭ್ರಮೆಯಲ್ಲಿದ್ದಾರೆ ಎಂದು ವ್ಯಂಗ್ಯವಾಡಿದರು. ರಾಜ್ಯದಲ್ಲಿ ಜನರ ಉತ್ಸಾಹ ನೋಡಿದರೆ ನಿರೀಕ್ಷೆಗಿಂತ ಹೆಚ್ಚು ಬೆಂಬಲ ಕಾಂಗ್ರೆಸ್‌ಗೆ ಸಿಗುತ್ತಿದೆ. ಜನ ಬಿಜೆಪಿ ಸರ್ಕಾರದಿಂದ ನೊಂದಿದ್ದು ರೋಸಿ ಹೋಗಿದ್ದಾರೆ ಎಂದು ಹೇಳಿದರು.

ಕೋಲಾರದಿಂದ ಸ್ಪರ್ಧಿಸಲ್ಲ: ಡ್ರಾಮ ಮಾಡ್ತಿದ್ದಾರೆ

ತಂತ್ರಗಾರಿಕೆ ಹೆಣೆದು ನೋಡುತ್ತಾರೆ. ನನ್ನ ಪ್ರಕಾರ ಕೊನೆಯಲ್ಲಿ ಮೈಸೂರಿಗೆ ಹೋಗಿ ನಿಲ್ಲುತ್ತಾರೆ ನೋಡುತ್ತಿರಿ ಎಂದರು. 140ಕ್ಕೂ ಹೆಚ್ಚು ಸ್ಥಾನ ಬಿಜೆಪಿ ಗೆಲ್ಲಲಿದೆ. ನೂರಕ್ಕೆ ನೂರು ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ. ನಮ್ಮ ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಎರಡ್ಮೂರು ದಿನಗಳಲ್ಲಿ ಪ್ರವಾಸ ಆರಂಭಿಸುತ್ತೇನೆ ಎಂದು ಹೇಳಿದರು.

ಅಗತ್ಯಬಿದ್ದರೆ ಅಗ್ರೆಸ್ಸಿವ್ ಆಗಿ ಮಾತನಾಡಲಿ: ಮಾಧುಸ್ವಾಮಿಯವರು ಏನು ಹೇಳಿಕೆ ಕೊಟ್ಟಿದ್ದಾರೆ, ಮಾತನಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ನಾನಂತೂ ಮಾತನಾಡುವುದನ್ನು ಬಿಟ್ಟು ಸೈಲೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಅಗತ್ಯಬಿದ್ದರೆ ನಮ್ಮ ಸಚಿವರು ಅಗ್ರೆಸ್ಸಿವ್ ಆಗಿ ಮಾತನಾಡಲಿ ಬಿಡಿ ಎಂದು ಯಡಿಯೂರಪ್ಪ ಹೇಳಿದರು.

35 ಸಾವಿರ ಕೋಟಿ ಅವ್ಯವಹಾರ

ರಾತ್ರೋರಾತ್ರಿ ಲೋಕಾಯುಕ್ತ ಮುಚ್ಚಿ ಎಸಿಬಿ ಸ್ಥಾಪಿಸಿ ಭ್ರಷ್ಟಾಚಾರ ಮುಚ್ಚಿ ಹಾಕುವ ಪ್ರಯತ್ನ ಅದಾಗಿತ್ತು ಎಂದು ಹೇಳಿದರು. ಬಿಜೆಪಿ ಭ್ರಷ್ಟಾಚಾರ ಮಾಡಿ ರುವುದೇ ಆಗಿದ್ದರೆ, ನಾವು ಲೋಕಾಯುಕ್ತ ಸಂಸ್ಥೆ ಪುನರ್ ಸ್ಥಾಪಿಸಲು ಸ್ಟೇ ತರುತ್ತಿದ್ದೆವು. ಆದರೆ, ನಾವು ಬಂದು ಲೋಕಯುಕ್ತವನ್ನು ಪುನರ್ ಸ್ಥಾಪನೆ ಮಾಡಿದ್ದೇವೆ. ಭ್ರಷ್ಟಾಚಾರ ಮಾಡುತ್ತಿದ್ದೇವೆ ಎಂಬುದು ನಿಜವಾಗಿದ್ದರೆ ಇವತ್ತು ನಾವು ಲೋಕಾಯುಕ್ತವನ್ನು ಪುನರ್ ಸ್ಥಾಪನೆ ಮಾಡುತ್ತಿರಲಿಲ್ಲ. ಆದರೆ ನಾವು ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕು ಎಂದು ಪ್ರಧಾನಿಗಳು ಯಾವ ರೀತಿ ಹೇಳಿದ್ದರೋ, ಹಾಗೆಯೇ ನಾವು ಅದಕ್ಕೆ ಕಾಯಕಲ್ಪ ಕೊಟ್ಟಿದ್ದೇವೆ ಎಂದರು.

35 ಸಾವಿರ ಕೋಟಿ ರೂ. ಭ್ರಷ್ಟಾಚಾರ: 2018ರಲ್ಲಿ ಫೈನಾನ್ಸಿಯಲ್ ಅಡಿ ಸಿಎಜಿ ವರದಿ ಪ್ರಕಾರ 2013– 2018ರಲ್ಲಿ 35 ಸಾವಿರ ಕೋಟಿ ರೂ. ಭ್ರಷ್ಟಾಚಾರ ನಡೆದಿದೆ. ಡಿನೋಟಿಫಿಕೇಷನ್‌ಅನ್ನುವುದಕ್ಕೆ ರೀಡೂ ಅನ್ನುವ ಹೊಸ ಪದವನ್ನೇ ಸೃಷ್ಟಿ ಮಾಡಿದ್ದಾರೆ. 10 ಸಾವಿರ ಬೆಂಗಳೂರು ನಿವಾಸಿಗಳಿಗೆ ಅನ್ಯಾಯ ಮಾಡಿದ್ದಾರೆ. 900 ಎಕರೆಗೂ ಹೆಚ್ಚು ಜಾಗವನ್ನು ರೀಡೂ ಹೆಸರಿನಲ್ಲಿ ಡಿನೋಟಿಫಿಕೇಷನ್ ಮಾಡಿದ್ದಾರೆ. ಇದಲ್ಲವನ್ನು ಮುಚ್ಚಿಹಾಕಲು ಲೋಕಾಯುಕ್ತ ಮುಚ್ಚಿ, ಎಸಿಬಿ ತೆರೆದಿದ್ದರು ಎಂದು ಆರೋಪಿಸಿದರು.

ಭ್ರಷ್ಟಾಚಾರಗಳಿಗೆ ಕಾಂಗ್ರೆಸ್‌ನ ನೆರವು: ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿದ್ದ ಕೆ.ಜೆ ಜಾರ್ಜ್ ಕಾಂಗ್ರೆಸ್‌ನ ಭ್ರಷ್ಟಾಚಾರಗಳಿಗೆ ನೆರವಾಗಿದ್ದರು. 292 ಕೋಟಿ ವೈಟ್ ಟಾಪಿಂಗ್ ಅಂದಾಜು ಇತ್ತು. ಅದನ್ನು 374 ಕೋಟಿಗೆ ಹೆಚ್ಚಿಸಿದರು. ಯಾಕೆ ಶೇ.25% ಹೆಚ್ಚಳಕ್ಕೆ ಅನುಮತಿ ನೀಡಿದ್ದರು ಯಾವ ಉದ್ದೇಶಕ್ಕೆ ಹೆಚ್ಚಿಗೆ ಕೊಟ್ಟಿರಿ 9.47 ಕಿ.ಮೀ ಟೆಂಡರ್‌ಶ್ಯೂರ್ ರಸ್ತೆ ನಿರ್ಮಿಸಲು ಖಾಸಗಿ ಸಂಸ್ಥೆಯೊಂದು 75 ಕೋಟಿ ರೂ. ಎಸ್ಟಿಮೇಟ್ ಕೊಟ್ಟಿತ್ತು. ಆದರೆ 115 ಕೋಟಿ ರೂ. ಕೊಟ್ಟಿದ್ದಾರೆ. ಎಷ್ಟಿಮೇಟ್‌ಗಿಂತ 53% ಹೆಚ್ಚು ಕೊಟ್ಟಿದ್ದಾರೆ. ನಮ್ಮ ಸರ್ಕಾರ ಟೆಂಡರ್ ಪ್ರೀಮಿಯಂ ಮೇಲೆ 5% ಹೆಚ್ಚು ಮಾಡಬಾರದು ಎಂದು ಆದೇಶ ಮಾಡಿದ್ದಾರೆ. 50% ಟೆಂಡರ್ ಪ್ರೀಮಿಯಂ ತೆಗೆದುಕೊಂಡ ಕಾಂಗ್ರೆಸ್ ನಮ್ಮ ಸರ್ಕಾರದ ಮೇಲೆ 40% ಆರೋಪ ಮಾಡುತ್ತಿದೆ ಎಂದು ಕಿಡಿಕಾರಿದರು.


ಊಟದ ನೆಪದಲ್ಲಿ ಕಮಿಷನ್: ಇಂದಿರಾ ಕ್ಯಾಂಟೀನ್ ಆರಂಭಿಸಿ ಬಡವರಿಗೆ ಕೊಡುವ ಊಟದಲ್ಲೂ ಕಮಿಷನ್ ಹೊಡೆದ ಖ್ಯಾತಿ ನಿಮ್ಮದು. ಅಲ್ಪಸಂಖ್ಯಾತರಿಗೆ, ದಲಿತರಿಗೆ, ವಿದ್ಯಾರ್ಥಿಗಳಿಗೆ ನ್ಯಾಯ ಕೊಡಲಿಲ್ಲ. ಅಲ್ಪಸಂಖ್ಯಾತರಿಗೆ ನೀವೇ ಉದ್ಧಾರಕರು ಅಂತ ಹೇಳಿಕೊಂಡು ತಿರುಗುವ ನೀವು 2,900 ಎಕರೆ ಜಾಗವನ್ನು ಕಬಳಿಕೆ ಮಾಡಿದವರು ನೀವು. ಜನರ ಮೈಂಡ್‌ಅನ್ನು ತಮ್ಮ ಕಡೆ ತಿರುಗಿಸಲು ಇಂತಹ ಆರೋಪವನ್ನು ಬಿಜೆಪಿ ವಿರುದ್ಧ ಮಾಡಲಾಗುತ್ತಿದೆ. ಸಿದ್ದರಾಮಯ್ಯನವರ ಆಪ್ತನ ಮನೆ ಮೇಲೆ 2017ರಲ್ಲಿ ರೇಡ್ ಆದಾಗ ಸಿಕ್ಕ ಡೈರಿಯಲ್ಲಿ 1,000 ಕೋಟಿ ರೂ. ಹೈಕಮಾಂಡ್‌ಗೆ ಹೋದ ಬಗ್ಗೆ ಉಲ್ಲೇಖವಿದೆ. ಆದರೆ ಇದು ಯಾರ ಹಣ ಬಜೆಟ್ ಮೂಲಕವೇ ಸ್ಪೆಷಲ್ ಅನೌನ್ಸ್‌ಮೆಂಟ್ ಆಗಿತ್ತಾ ಎಂದು ಪ್ರಶ್ನಿಸಿದರು.

ಪಿಎಸ್‌ಐ ಹಗರಣ: ಪಿಎಸ್‌ಐ ಸ್ಕ್ಯಾಮ್ ಆಗಿದೆ ಅಂತ ಹೇಳ್ತೀರಿ. ಇದು ನಿಮ್ಮ ಕಾಲದಲ್ಲೇ ಆಗಿದ್ದು. ಮಾಜಿ ಪೊಲೀಸ್ ಅಧಿಕಾರಿ ನಿಮ್ಮ ಗೃಹ ಇಲಾಖೆಯ ಸಲಹೆಗಾರರು ಕೆಂಪಯ್ಯ ಹೆಸರಿನಲ್ಲೇ ಕೇಸ್‌ಗಳು ದಾಖಲಾಗಿದೆ. ಕಸ ವಿಲೇವಾರಿ ಮಾಡೋದ್ರಲ್ಲೂ 1,066 ಕೋಟಿ ರೂ. ಹಗರಣ ಮಾಡಿದ್ದಾರೆ. ಕಸ ವಿಲೇವಾರಿ ಮಾಡುವುದರಲ್ಲೂ ಭ್ರಷ್ಟಾಚಾರ ಮಾಡಿದ್ದಾರೆ. 2015–16ರಲ್ಲಿ 385 ಕೋಟಿ ಖರ್ಚಾಗಿದೆ. ಕೇವಲ ಒಂದೇ ವರ್ಷದಲ್ಲಿ 681 ಕೋಟಿ ಹೆಚ್ಚಾಗಿದೆ. ಇದು ಯಾವ ಸ್ಕೀಮ್, ಎಷ್ಟು ಪರ್ಸೆಂಟ್ ಆಗಿದೆ ಹೇಳಿ ಬೆಂಗಳೂರಿಗೆ ಹೊರ ಹೋಗುವ ಕಸ ವಾಯು ಆಗಿ ಹೋಯ್ತಾ ನಾನು ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಅಧ್ಯಕ್ಷನಾಗಿದ್ದಾಗ ನೋಡಿದ್ದೇನೆ.

ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ

ಭ್ರಷ್ಟಾಚಾರ ಮುಚ್ಚಿ ಹಾಕಲೆಂದೇ ಲೋಕಾಯುಕ್ತ ಮುಚ್ಚಿಸಿದರು...

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ
- ಸಿದ್ದರಾಮಯ್ಯ ಕಾಲದ ಹಲವು ಪ್ರಕರಣ ಲೋಕಾಯುಕ್ತ ತನಿಖೆ



ಬೆಂಗಳೂರು, ಜ.23 (ಕೆಎಂಶಿ)–ಕಾಂಗ್ರೆಸ್ ಮಾಡಿರುವ ಭ್ರಷ್ಟಾಚಾರದ ಕರ್ಮಕಾಂಡ ಮುಚ್ಚಿಹಾಕಲೆಂದೇ ಲೋಕಾಯುಕ್ತ ಸಂಸ್ಥೆಯನ್ನು ಬಾಗಿಲು ಮುಚ್ಚಿಸಿದರು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ. ಶೇ.60 ರಷ್ಟು ಪ್ರೀಮಿಯಂ ಬೆಂಗಳೂರಿನಲ್ಲಿ ನೀಡಿರುವ ದಾಖಲೆ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಎಂದರು.

ಸುಮಾರು 800 ಕೋಟಿ ರೂ.ಗಳಲ್ಲಿ ಶೇ.60 ರಷ್ಟು ಪ್ರೀಮಿಯಮ್ ಅನ್ನು ದೇಶದಲ್ಲಿ ಎಲ್ಲಿಯಾದರೂ ಕೊಟ್ಟಿದ್ದಾರೆಯೇ? ಇವರು ಅಂತಹ ಶೂರರು. ಇಷ್ಟು ಮುಕ್ತವಾಗಿ 40–60 ಪ್ರೀಮಿಯಮ್ ಕೊಟ್ಟು ಭ್ರಷ್ಟಾಚಾರ ನಡೆಸಿ, ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಅದು ಸೊಗಲಾಡಿತನ. ತಾವು ಮಾಡಿರುವುದನ್ನು ಮುಚ್ಚಿಕೊಳ್ಳುವ ಸಲುವಾಗಿ ಈ ರೀತಿ ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಈಗಾಗಲೇ ಲೋಕಾಯುಕ್ತಕ್ಕೆ ದೂರು ನೀಡಿದೆ. ಆರೋಪ ಮಾಡುತ್ತಿರುವುದರ ಬಗ್ಗೆ ವಿವರಗಳನ್ನು ಲೋಕಾಯುಕ್ತಕ್ಕೆ ನೀಡಲಿ ಎಂದರು.

ಲೋಕಾಯುಕ್ತ ಮುಚ್ಚಿದ ಪುಣ್ಯಾತ್ಮರು ಇವರು. 300 ಕಡೆ ಪ್ರತಿಭಟನೆ ಮಾಡುತ್ತಿರುವವರು ಲೋಕಾಯುಕ್ತ ಎಂಬ ಸ್ವತಂತ್ರ, ಸಂವಿಧಾನಬದ್ಧ ಸಂಸ್ಥೆಯನ್ನು ಮುಚ್ಚಿದ್ದರು. ಇವರು ನಮಗೆ ಪಾಠ ಹೇಳುತ್ತಾರೆ.

ಲೋಕಾಯುಕ್ತ ಯಾಕೆ ಮುಚ್ಚಿದರು, 59 ಪ್ರಕರಣಗಳು ಮುಖ್ಯಮಂತ್ರಿಗಳಾದಿಯಾಗಿ ಎಲ್ಲರ ಮೇಲು ದಾಖಲಾಗಿದ್ದವು. ಎಸಿಬಿ ಸೃಜಿಸಿ, ಪ್ರಕರಣ ಮುಚ್ಚಿಹಾಕಲು ಬಿ ವರದಿ ಹಾಕಿದರು. ಅವೆಲ್ಲವನ್ನೂ ಲೋಕಾಯುಕ್ತಕ್ಕೆ ಶಿಫಾರಸು ಮಾಡುತ್ತಿದ್ದೇವೆ. ಈಗ ನಮ್ಮ ಮೇಲೆ ಆರೋಪ ಮಾಡಲು ಇವರಿಗೆ ಯಾವ ನೈತಿಕ ಹಕ್ಕಿದೆ.

ಲೋಕಾಯುಕ್ತ ಮುಚ್ಚಿ ಭ್ರಷ್ಟಾಚಾರದೊಂದಿಗೆ ಕೈಜೋಡಿಸಿ ಸರ್ಕಾರ ನಡೆಸಿದವರು ಇವರು. ಭ್ರಷ್ಟಾಚಾರ ಇವರ ಸರ್ಕಾರದ ಆಡಳಿತದ ಒಂದು ಭಾಗವಾಗಿತ್ತು. ಅದಕ್ಕಾಗಿ ಅದನ್ನು ಮುಚ್ಚಿ ಹಾಕಿದರು. ದಾಖಲೆ ಸಮೇತ ದೂರು ನೀಡಿದರೆ ವಿಚಾರಣೆಯನ್ನೂ ಮುಚ್ಚಿ ಹಾಕುವ ಕೆಲಸ ಮಾಡಿದ್ದಾರೆ. ತಾವು ಮಾಡಿರುವ ಕೆಲಸವನ್ನು ಮುಚ್ಚಿಕೊಳ್ಳಲು ಈ ಪ್ರತಿಭಟನೆ ಮಾಡುತ್ತಿದ್ದಾರೆ ಎಂದರು. ಜನ ಇದನ್ನು ಒಪ್ಪುವುದಿಲ್ಲ. ಕಾಂಗ್ರೆಸ್ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದು ಎಂದರೆ ನಿಜವಾಗಿಯೂ ಹಾಸ್ಯಾಸ್ಪದ. ಇದು ನ್ಯಾಯವೇ ಎಂದು ಪ್ರಶ್ನಿಸಿದರು. ತಮ್ಮ ಕೈಗೆ ಹತ್ತಿರುವ ಮಸಿಯನ್ನು ಮೊದಲು ನೋಡಿಕೊಳ್ಳಲಿ. ತಮ್ಮ ಎಲೆಯಲ್ಲಿ ಕತ್ತೆ ಬಿದ್ದಿರುವುದನ್ನು ನೋಡಿಕೊಳ್ಳಲಿ ಎಂದರು.

ಪ್ರಧಾನಿಗಳನ್ನು ಹಿಟ್ಲರ್ ಎಂದು ಕರೆದಿರುವ ಬಗ್ಗೆ ಪ್ರತಿಕ್ರಿಯಿಸಿ ಟೀಕೆಗಳನ್ನು ನಾನು ಯಶಸ್ಸಿನ ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳುತ್ತೇನೆ. ಪ್ರಧಾನಿಗಳು ವಿಶ್ವ ವ್ಯಾಪಿ ನಾಯಕರು. ಇಡೀ ಭಾರತ ದೇಶದಲ್ಲಿ ಜನಮನ್ನಣೆ ಗಳಿಸಿದವರು. ಅವರ ಬಗ್ಗೆ ಇರುವ ಸದಭಿಪ್ರಾಯ ಬಹುತೇಕ ಯಾವುದೇ ಪ್ರಧಾನಿಗಳಿಗಿಲ್ಲ. ಅಂಥವರ ಬಗ್ಗೆ ಮಾತನಾಡಿದರೆ ಜನ ನಂಬುವುದಿಲ್ಲ. ಆಕಾಶಕ್ಕೆ ಉಗುಳಿದಂತೆ ಎಂದರು. ಗುಜರಾತ್‌ನಲ್ಲಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಕಾಂಗ್ರೆಸ್ ನಾಯಕಿ ಮೋತ್ ಕಾ ಸೌದಾಗರ್ ಎಂದಿದ್ದರು. ಆಗ ಅವರಿಗೆ ಹೆಚ್ಚು ಮತ ದೊರೆತು ಜಾಸ್ತಿ ಸ್ಥಾನಗಳು ದೊರೆತವು. ಅವರು ಏನು ಹೇಳುತ್ತಾರೋ ಹೇಳಲಿ ಜನಬೆಂಬಲ ನಮ್ಮ ಜೊತೆಗಿದೆ. ಇನ್ನಷ್ಟು ಬೆಂಬಲ ಹೆಚ್ಚಾಗುತ್ತದೆ ಎಂದರು.

ಕಾಂಗ್ರೆಸ್ಸೇ ನಿಜವಾಗಲೂ ಬಿಜೆಪಿಯ 'ಬಿ' ಟೀಂ



- ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ
- ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಸಿದ್ದರಾಮಯ್ಯರೇ ಕಾರಣ
- ವಿಧಾನಸೌಧದ ಮುಂಭಾಗ ಬಹಿರಂಗ ಚರ್ಚೆಗೆ ಆಹ್ವಾನ


ಬೆಂಗಳೂರು, ಜ.23 (ಕೆಎಂಶಿ)– ರಾಜ್ಯ ಕೋಮುದಳ್ಳುರಿಯಲ್ಲಿ ಬೇಯುವಂತೆ ಮಾಡಿದ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣವೇ ಸಿದ್ದರಾಮಯ್ಯ ಎಂದು ಪುನಃ ಗುಡುಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ ಪಕ್ಷವೇ ಬಿಜೆಪಿಯ 'ಬಿ' ಟೀಮ್ ಎಂದು ಆರೋಪಿಸಿದ್ದಾರೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಜೆಡಿಎಸ್ ಪಕ್ಷವನ್ನು ಬಿಜೆಪಿಯ ಬಿ ಟೀಮ್ ಎಂದಿರುವ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾರ ಹೇಳಿಕೆಯನ್ನು ಖಂಡಿಸಿದ್ದಾರೆ.

ಅಧಿಕಾರದಲ್ಲಿದ್ದ ಜೆಡಿಎಸ್–ಕಾಂಗ್ರೆಸ್ ಮೈತ್ರಿಕೂಟ ಸರ್ಕಾರವನ್ನು ಉರುಳಿಸಿದ್ದು ಸಿದ್ದರಾಮಯ್ಯ ಎಂದು ಪರೋಕ್ಷವಾಗಿ ವ್ಯಂಗ್ಯವಾಡಿದ್ದಾರಲ್ಲದೆ,2008 ರಲ್ಲಿ ಯಡಿಯೂರಪ್ಪ ಅವರ ಜತೆ ಕೈ ಜೋಡಿಸಿ,ಕಾಂಗ್ರೆಸ್ ಪಕ್ಷದ ಎಂಟು ಮಂದಿಯ ಸೋಲಿಗೆ ಕಾರಣರಾದ ಅವರನ್ನು ಪಕ್ಕದಲ್ಲಿಟ್ಟುಕೊಂಡು ಜೆಡಿಎಸ್ ಪಕ್ಷವನ್ನು ಬಿಜೆಪಿಯ ಬಿ ಟೀಮ್ ಎಂದು ಹೇಳುವುದು ಅರ್ಥಹೀನ ಎಂದಿದ್ದಾರೆ. ಆ ಸಂದರ್ಭದಲ್ಲಿ ಯಡಿಯೂರಪ್ಪ ಅವರಿಂದ ಕೋಟಿ ಗಟ್ಟಲೆ ಹಣದ ಥೈಲಿಯನ್ನು ಯಾರು ಯಾರಿಂದ ಪಡೆದು,ಯಾರಿಗೆ ತಲುಪಿಸಿದರು ಎನ್ನುವ ಮಾಹಿತಿ ಪಡೆದುಕೊಳ್ಳಿ ಎಂದು ಅವರು ಸುರ್ಜೇವಾಲಾರಿಗೆ ಕಿವಿಮಾತು ಹೇಳಿದ್ದಾರೆ.

ನನ್ನ ನೇತೃತ್ವದ ಮೈತ್ರಿ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಧರ್ಮಸ್ಥಳದ ಸಿದ್ಧವನ, ಕಾವೇರಿ ನಿವಾಸದಲ್ಲಿ ಕುಳಿತು ನನ್ನ ವಿರುದ್ಧ ಪಿತೂರಿ ಮಾಡಿದವರು, ನಿಮ್ಮ ಪಕ್ಷದ ಕೇಂದ್ರ ನಾಯಕರೇ ರಚಿಸಿದ ಮೈತ್ರಿ ಸರ್ಕಾರವನ್ನು ಬೀಳಿಸಿದವರು ಸಿದ್ದರಾಮಯ್ಯ. ಆ ಸಂದರ್ಭದಲ್ಲಿ ಬಾಂಬೆಗೆ ಹೋದ ಶಾಸಕರ ಬೆನ್ನ ಹಿಂದಿದ್ದ ಆ ನಿಗೂಢ ಬೇತಾಳ ಯಾವುದು ಎಂದು ಪ್ರಶ್ನಿಸಿರುವ ಅವರು, ಇಷ್ಟಾದ ಮೇಲೂ ಜೆಡಿಎಸ್ ಪಕ್ಷವನ್ನು ಬಿಜೆಪಿಯ ಬಿ ಟೀಮ್ ಎಂದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಸುರ್ಜೇವಾಲಾರಿಗೆ ಎಚ್ಚರಿಕೆ ನೀಡಿದ್ದಾರೆ.

ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನ ಸ್ಥಾನದಿಂದ ಕೆಳಗಿಳಿಸಲು ಹಾಲಿ ಶಾಸಕಾಂಗ ಪಕ್ಷದ ನಾಯಕರು ಹೆಣೆದ ಸಿದ್ಧವ್ಯೂಹದ ಬಗ್ಗೆ ನಿಮಗೆ ಮಾಹಿತಿ ಇಲ್ಲ. ಹೀಗಾಗಿ ಖರ್ಗೆ ಅವರನ್ನೇ ಒಂದು ಬಾರಿ ಕೇಳಿ ಮಾಹಿತಿ ಪಡೆದುಕೊಳ್ಳಿ ಎಂದು ಸುರ್ಜೇವಾಲಾ ಅವರನ್ನು ಛೇಡಿಸಿದ್ದಾರೆ. ಹೀಗೆ ಬಿಜೆಪಿ ಬಾಲಂಗೋಚಿಯನ್ನು ಪಕ್ಕದಲ್ಲೇ ಕೂರಿಸಿಕೊಂಡು ಜೆಡಿಎಸ್ ಅನ್ನು ಬಿಜೆಪಿಯ ಬಿ ಟೀಮ್ ಎಂದು ದೂರಿದ್ದೀರಿ. ಆದರೆ ನಿಜಕ್ಕೂ ಆ ಬಿ ಟೀಮ್ ಯಾವುದು ಎನ್ನುವುದನ್ನು ನಿಮ್ಮ ಪಕ್ಕದಲ್ಲೇ ಇದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಳಿ ಕೇಳಬಹುದಿತ್ತು. ಆದರೆ ಹಾಗೆ ಮಾಡದೆ ಅರೆಬರೆ ಜ್ಞಾನದಿಂದ ಆಲಾಪದಿಂದ ಅಪಹಾಸ್ಯಕ್ಕೀಡಾಗಿದ್ದೀರಿ ಎಂದು ಟೀಕಿಸಿದ್ದಾರೆ. ನೀವು ಪ್ರಜ್ಞಾವಂತ ರಾಜಕಾರಣಿ ಎಂದು ತಿಳಿದುಕೊಂಡಿದ್ದೆ. ಆದರೆ ಹಾಸನದಲ್ಲಿ ಸಿದ್ಧಭಾಷಣವನ್ನೇ ನಕಲು ಮಾಡಿ ನಗೆ ಪಾಟಲಿಗೆ ಒಳಗಾಗಿದ್ದೀರಿ. ಒಂದು ವೇಳೆ ನೀವು ಸತ್ಯ ಅರಿತು ಮಾತನಾಡಿದ್ದರೆ ನಾನೂ ಖುಷಿಪಡುತ್ತಿದ್ದೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಹೀಗಾಗಿ ಬಿಜೆಪಿಯ ಬಿ ಟೀಮ್ ಯಾವ ಪಕ್ಷ ಎಂಬ ಬಗ್ಗೆ ವಿಧಾನಸೌಧದ ಮುಂದೆಯೇ ಬಹಿರಂಗ ಚರ್ಚೆ ನಡೆಯಲಿ. ಸಿದ್ಧಪುರುಷರ ಜತೆ ನೀವು ಬನ್ನಿ ಎಂದು ಆಹ್ವಾನ ನೀಡಿರುವ ಅವರು,ಚರ್ಚೆಯ ಸಮಯ, ದಿನಾಂಕವನ್ನು ನಾನು ನಿಗದಿ ಮಾಡಲಾ, ನೀವೇ ನಿಗದಿ ಮಾಡುತ್ತೀರಾ ತೀರ್ಮಾನಿಸಿ. ನಿಮ್ಮ ಉತ್ತರಕ್ಕೆ ಕಾಯುತ್ತಿರುತ್ತೇನೆ ಎಂದಿದ್ದಾರೆ.

ಭದ್ರಾವತಿ ಉಕ್ಕಿನ ಕಾರ್ಖಾನೆ ಮುಚ್ಚದಂತೆ ಪ್ರಧಾನಿ ಮೋದಿಗೆ ಹೆಚ್.ಡಿ.ದೇವೇಗೌಡರ ಮನವಿ



ಶಿವಮೊಗ್ಗ: ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ(ವಿಐಎಸ್‌ಎಲ್) ಮುಚ್ಚುವ ಆದೇಶವನ್ನು ಹಿಂಪಡೆಯುವಂತೆ ಮಾಜಿ ಪ್ರಧಾನಮಂತ್ರಿ ಹೆಚ್.ಡಿ. ದೇವೇಗೌಡ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಸಾರ್ವಜನಿಕ ವಲಯದ ಸಂಸ್ಥೆಯಾದ ವಿಐಎಸ್‌ಎಲ್ ಅನ್ನು ಮಹಾನ್ ದೂರದೃಷ್ಟಿಯುಳ್ಳ ಮತ್ತು ಇಂಜಿನಿಯರ್–ರಾಜ್ಯಜ್ಞ ಭಾರತ ರತ್ನ ಎಂ ವಿಶ್ವೇಶ್ವರಯ್ಯ ಸ್ಥಾಪಿಸಿದ್ದರು ಎಂದು ದೇವೇಗೌಡ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. 1918ರಲ್ಲಿ ಆರಂಭವಾದ ವಿಐಎಸ್‌ಎಲ್ ಅನ್ನು ನಾನು ಪ್ರಧಾನಿಯಾಗಿದ್ದ ಅವಧಿಯಲ್ಲಿ 1996ರಲ್ಲಿ ಭಾರತೀಯ ಉಕ್ಕು ಪ್ರಾಧಿಕಾರದ ವ್ಯಾಪ್ತಿಗೆ ತರಲಾಗಿತ್ತು. ಪ್ರಾಧಿಕಾರವು ರೂ.650 ಕೋಟಿ ವೆಚ್ಚದಲ್ಲಿ ಕಾರ್ಖಾನೆಯನ್ನು ಆಧುನೀಕರಣಗೊಳಿಸಲು ಪ್ರಸ್ತಾವ ಸಿದ್ಧಪಡಿಸಿತ್ತು. ಆದರೆ, ಅದು ಸಾಕಾರಗೊಳ್ಳಲಿಲ್ಲ. 2016ರಲ್ಲಿ ನೀತಿ ಆಯೋಗವು ಹೂಡಿಕೆ ಹಿಂತೆಗೆತಕ್ಕೆ ಶಿಫಾರಸು ಮಾಡಿತ್ತು. ಆದರೆ, ಅದು ಕೂಡ ಸಫಲವಾಗಲಿಲ್ಲ. ಇದರಿಂದಾಗಿ ಕಾರ್ಖಾನೆಯು ಸಂಕಷ್ಟಕ್ಕೆ ಸಿಲುಕಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿಐಎಸ್‌ಎಲ್ ಅತ್ಯುತ್ತಮ ಗುಣಮಟ್ಟದ ಉಕ್ಕು ತಯಾರಿಸುವ ಸಾಮರ್ಥ್ಯ ಹೊಂದಿದೆ. ಈ ಹಿಂದೆ ಇದೇ ಕಾರ್ಖಾನೆಯು ಅಣುಶಕ್ತಿ ಕೇಂದ್ರಗಳು, ರೈಲ್ವೆ ಇಲಾಖೆ, ಆಟೊಮೊಬೈಲ್ ಕ್ಷೇತ್ರಕ್ಕೆ ಗುಣಮಟ್ಟದ ಉಕ್ಕಿನ ಉತ್ಪನ್ನಗಳನ್ನು ಒದಗಿಸುತ್ತಿತ್ತು. ಈಗ 20,000 ಕುಟುಂಬಗಳು ಕಾರ್ಖಾನೆಯನ್ನು ಅವಲಂಬಿಸಿವೆ. ಮುಚ್ಚುವ ನಿರ್ಧಾರ ಕೈಗೊಂಡಿರುವುದರಿಂದ ಅವರ ಜೀವನ ಸಂಕಷ್ಟಕ್ಕೆ ಸಿಲುಕಿದೆ. ಆದ್ದರಿಂದ ನಿರ್ಧಾರ ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

2016ರಲ್ಲಿ ನೀತಿ ಆಯೋಗ ವಿಐಎಸ್‌ಎಲ್ ಕಾರ್ಖಾನೆಯನ್ನು ಖಾಸಗೀಕರಣಕ್ಕೆ ಶಿಫಾರಸು ಮಾಡಿತ್ತು. ಖಾಸಗಿ ಹೂಡಿಕೆದಾರರು ಕಾರ್ಖಾನೆ ಕೊಳ್ಳಲು ಒಲವು ತೋರಲಿಲ್ಲ. ಇದೀಗ ಸರಕಾರ 20 ಸಾವಿರ ಜನರ ಜೀವನಾಧಾರವಾಗಿರುವ ಕಾರ್ಖಾನೆಯನ್ನು ಮುಚ್ಚಲು ಹೊರಟಿದೆ ಎಂದು ತಿಳಿದು ಬಂದಿದೆ.

ರಾಜ್ಯ ದೋಚಲು ಮೊಮ್ಮಕ್ಕಳ ಸರದಿ!



ತುಮಕೂರು: ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರು ಮೊದಲು 50 ರೂಪಾಯಿಗೆ ಹೊಳೆನರಸೀಪುರದಲ್ಲಿ ಕಂಟ್ರಾಕ್ಟರ್ ಶುರು ಮಾಡಿದ್ದರು. ಇದೀಗ ಅಪ್ಪ–ಮಕ್ಕಳ ಜೊತೆಗೆ ಮೊಮ್ಮಕ್ಕಳೂ ರಾಜ್ಯ ದೋಚಲು ನಿಂತಿದ್ದಾರೆ ಎಂದು ಸಚಿವ ಮಾಧುಸ್ವಾಮಿ ದೇವೇಗೌಡರ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದರು. ಚಿಕ್ಕನಾಯಕನಹಳ್ಳಿ ತಾಲೂಕಿನ ಮತ್ತಿಘಟ್ಟದಲ್ಲಿ ಮಾತನಾಡಿದ ಸಚಿವ ಮಾಧುಸ್ವಾಮಿ, ಪಂಚರತ್ನ ಯಾತ್ರೆಯಲ್ಲಿ ತಾಲೂಕು ಅಭಿವೃದ್ಧಿಯಾಗಿಲ್ಲ. ನಾನು ಅಭಿವೃದ್ಧಿ ಆಗಿದ್ದೇನೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಆದರೆ ನನಗೇನೂ ಆಸ್ತಿ ಕೊರತೆ ಇರಲಿಲ್ಲ. ನಮ್ಮಪ್ಪ ಚೆನ್ನಾಗಿ ಇಟ್ಟಿದ್ದ. ನಮ್ಮಪ್ಪ, ನಮ್ಮಜ್ಜ ಚೆನ್ನಾಗಿಯೇ ಬಾಳಿದವರು. ಇವರಂತೆ ದೋಚಿದ್ದು, ಬಾಚಿದ್ದ ಪ್ರಕರಣಗಳು ಇಲ್ಲ ಎಂದು ದೂರಿದರು. ಹಿಂದೆ 50 ರೂಪಾಯಿಗೆ ದೇವೇಗೌಡರು ಕಂಟ್ರಾಕ್ಟರ್ ಶುರು ಮಾಡಿದ್ದರು. ಇದೀಗ ಅಪ್ಪ–ಮಕ್ಕಳು ಅಲ್ಲದೇ ಮೊಮ್ಮಕ್ಕಳೂ ಕೂಡ ದೋಚೋದಕ್ಕೆ ಹೊರಟಿದ್ದಾರೆ ಎಂದು ತಿರುಗೇಟು ನೀಡಿದರು.

ದೇವೇಗೌಡರು ತುಮಕೂರಿಗೆ ಹೇಮಾವತಿ ನೀರನ್ನು ಕೊಡದೇ ಮೋಸ ಮಾಡಿದ್ದಾರೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ದೇವೇಗೌಡರ ಹೇಳಿಕೆಯ ಹಳೆಯ ಪೇಪರ್ ಕಟಿಂಗ್ಸ್ ತೋರಿಸಿದೆ. ಹಾಗಾಗಿಯೇ ಜಿಲ್ಲೆಯ ಜನರು ದೇವೇಗೌಡರನ್ನು ಸೋಲಿಸಿದರು. ಇಷ್ಟೆಲ್ಲಾ ಮಾಡಿಯೂ ಕುಮಾರಸ್ವಾಮಿ ಅವರು ಚಿಕ್ಕನಾಯಕನಹಳ್ಳಿಗೆ ಪ್ರವಾಸ ಹಾಕ್ತಾರೆ. ಮಾನ–ಮರ್ಯಾದೆ ಇದ್ದವರು ಯಾರಾದರೂ ಚಿಕ್ಕನಾಯಕನಹಳ್ಳಿಗೆ ಬರುತ್ತಾರಾ ಎಂದು ಪ್ರಶ್ನಿಸಿದರು.

ಮೀಡಿಯಾ ಸೂಪರ್ ಕಿಂಗ್ಸ್‌ಗೆ ಕೊಡಗು ಪ್ರೆಸ್‌ಕ್ಲಬ್ ಕ್ರಿಕೆಟ್ ಟ್ರೋಫಿ



ವೈಯಕ್ತಿಕ ಬಹುಮಾನ

ಮ್ಯಾನ್ ಆಫ್ ದಿ ಸೀರಿಸ್ : ಮಂಜು
ಬೆಸ್ಟ್ ಕ್ಯಾಚ್: ಪ್ರೇಮ್
ಮ್ಯಾನ್ ಆಫ್ ದಿ ಮ್ಯಾಚ್ ಫೈನಲ್: ಮಂಜು
ಬೆಸ್ಟ್ ಎನರ್ಜಿಟಿಕ್ ಪ್ಲೇಯರ್: ಲೋಹಿತ್
ಬೆಸ್ಟ್ ಬೌಲರ್: ಮುಸ್ತಾಫಾ
ಬೆಸ್ಟ್ ಫೀಲ್ಡರ್: ಇಸ್ಮಾಯಿಲ್
ಬೆಸ್ಟ್ ಆಲ್ ರೌಂಡರ್: ಆದರ್ಶ್
ಬೆಸ್ಟ್ ಬ್ಯಾಟ್ಸ್‌ಮನ್: ಜಂಯುಪ್ರಕಾಶ್
ಮೋಸ್ಟ್ ವ್ಯಾಲ್ಯೂಬಲ್ ಪ್ಲೇಯರ್: ಮಂಜು
ಬೆಸ್ಟ್ ಸೀನಿಯರ್ ಪ್ಲೇಯರ್: ಪಾರ್ಥ ಚಿನ್ನಪ್ಪ
ಬೆಸ್ಟ್ ವುಮೆನ್ ಪ್ಲೇಯರ್: ಚೈತನ್ಯ
ಬೆಸ್ಟ್ ವಿಕೇಟ್ ಕೀಪರ್: ಚನ್ನನಾಯಕ್

ಮಡಿಕೇರಿ, ಜ.23– ಕೊಡಗು ಪ್ರೆಸ್ ಕ್ಲಬ್ ಕ್ರಿಕೆಟ್ ಪ್ರೀಮಿಯರ್ ಲೀಗ್–3ರ ಚಾಂಪಿಯನ್ ಆಗಿ ಮೀಡಿಯಾ ಸೂಪರ್ ಕಿಂಗ್ಸ್ ತಂಡ ಹೊರಹೊಮ್ಮಿದೆ. ಅಂತಿಮ ಕ್ಷಣದಲ್ಲಿ ಎಡವಿದ ಇಂಚರ ಕೊಡಗು ತಂಡ ದ್ವಿತೀಯ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿದೆ.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ನಡೆದ ಪಂದ್ಯಾವಳಿಯಲ್ಲಿ ಮಂದ ಬೆಳಕಿನ ಕಾರಣದಿಂದ 2 ಓವರ್‌ಗೆ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದ ಇಂಚರ ಕೊಡಗು ತಂಡ ಬ್ಯಾಟಿಂಗ್ ಆಯ್ದುಕೊಂಡಿತು. ಆದರೆ, ಬ್ಯಾಟಿಂಗ್‌ನಲ್ಲಿ ಆಟಗಾರರು ಎಡವಿದ್ದರಿಂದ 2 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 7 ರನ್ ಗಳಿಸಲಷ್ಟೇ ಶಕ್ತರಾದರು. ಗೆಲ್ಲಲು 8 ರನ್‌ಗಳ ಗುರಿ ಪಡೆದ ಮೀಡಿಯಾ ಸೂಪರ್ ಕಿಂಗ್ಸ್ ತಂಡ ಮೊದಲ ಓವರ್‌ನಲ್ಲಿ ಇನ್ನು ಒಂದು ಎಸೆತ ಬಾಕಿ ಇರುವಾಗಲೇ ವಿಕೆಟ್ ಕಳೆದುಕೊಳ್ಳದೆ 11 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಮೀಡಿಯಾ ಸೂಪರ್ ಕಿಂಗ್ಸ್ ತಂಡದ ಪರ ಮಂಜು 3 ಎಸೆತಗಳಲ್ಲಿ 9 ರನ್ ಗಳಿಸಿದರಲ್ಲದೆ 1 ವಿಕೆಟ್ ಕಬಳಿಸಿ ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಭಾಜನರಾದರು.

ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಟಾಸ್ ಗೆದ್ದ ಇಂಚರ ಕೊಡಗು ತಂಡ ಬೌಲಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಸೆನ್ಸಾ ಕುಶಾಲನಗರ ತಂಡ 4 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 50 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಇಂಚರ ಕೊಡಗು ತಂಡ 3.2 ಓವರ್‌ಗಳಲ್ಲಿಯೇ 51 ರನ್ ಗಳಿಸಿ ಫೈನಲ್ ಪ್ರವೇಶಿಸಿತು.

ಎಲಿಮಿನೇಟರ್ ಪಂದ್ಯದಲ್ಲಿ ಟಾಸ್ ಗೆದ್ದ ಮೀಡಿಯಾ ಸೂಪರ್ ಕಿಂಗ್ಸ್ ತಂಡ ಬೌಲಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟ್ ಮಾಡುವ ಅವಕಾಶ ಪಡೆದ ಕೂರ್ಗ್ ಮೌಂಟ್ಸ್ ಲಯನ್ಸ್ ತಂಡ 4 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 25 ರನ್ ಗಳಿಸಿತು. ಅಲ್ಪ ಮೊತ್ತದ ಗುರಿ ಬೆನ್ನಟ್ಟಿದ ಮೀಡಿಯಾ ಸೂಪರ್ ಕಿಂಗ್ಸ್ ತಂಡ 2 ಓವರ್‌ಗಳಲ್ಲಿಯೇ ವಿಕೆಟ್ ಕಳೆದುಕೊಳ್ಳದೆ 26 ರನ್ ಗಳಿಸಿ 2ನೇ ಕ್ವಾಲಿಫೈಯರ್ ಪಂದ್ಯಕ್ಕೆ ಅವಕಾಶ ಪಡೆಯಿತು.

2ನೇ ಕ್ವಾಲಿಫೈಯರ್ ಪಂದ್ಯದಲ್ಲಿ ಟಾಸ್ ಗೆದ್ದ ಸೆನ್ಸಾ ಕುಶಾಲನಗರ ತಂಡ ಬೌಲಿಂಗ್ ಆಯ್ದುಕೊಂಡು ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಮೊದಲು ಬ್ಯಾಟ್ ಮಾಡುವ ಅವಕಾಶ ಪಡೆದ ಮೀಡಿಯಾ ಸೂಪರ್ ಕಿಂಗ್ಸ್ ತಂಡ 4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 45 ರನ್ ಗಳಿಸಿತು. ಗೆಲ್ಲಲು ಬೇಕಿದ್ದ 46 ರನ್‌ಗಳ ಗುರಿ ಬೆನ್ನಟ್ಟಿದ ಸೆನ್ಸಾ ಕುಶಾಲನಗರ ತಂಡ 4 ಓವರ್‌ಗಳಲ್ಲಿ 41 ರನ್ ಗಳಿಸುವ ಮೂಲಕ ಸೋಲೊಪ್ಪಿಕೊಂಡಿತು.

ಉಳಿದಂತೆ ಮೀಡಿಯಾ ವಾರಿಯರ್ಸ್, ಮೀಡಿಯಾ ಕೂಲ್, ಮೀಡಿಯಾ ಕ್ಯಾಪ್ಟನ್ 12, ಗೋಣಿಕೊಪ್ಪ ಮೀಡಿಯಾ ಕಿಂಗ್ಸ್ ತಂಡಗಳು ಪಾಲ್ಗೊಂಡಿದ್ದವು. ಐಪಿಎಲ್ ಮಾದರಿಯಲ್ಲಿ ನಡೆದ ಪಂದ್ಯಾವಳಿಯಲ್ಲಿ ಜಿಲ್ಲೆಯ ವಿವಿಧೆಡೆಯ 107 ಪತ್ರಕರ್ತರು ಪಾಲ್ಗೊಂಡಿದ್ದರು. ತೀರ್ಪುಗಾರರಾಗಿ ರಮೇಶ್, ಮಂಜು, ಸಚಿನ್ ಕಾರ್ಯನಿರ್ವಹಿಸಿದರು.

ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಕಲಿಕಾ ಹಬ್ಬ ಉತ್ತಮ ವೇದಿಕೆ



ವಿರಾಜಪೇಟೆ, ಜ.23– ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣದೊಂದಿಗೆ ಎಲೆ ಮರೆಯ ಕಾಯಿಯಂತಿರುವ ಪ್ರತಿಭೆಯನ್ನು ಪ್ರದರ್ಶಿಸಲು ಶಾಲೆಯಲ್ಲಿ ನಡೆಯುತ್ತಿರುವ 'ಕಲಿಕಾ ಹಬ್ಬ' ಸರ್ಕಾರದ ಉತ್ತಮ ಕಾರ್ಯ ಕ್ರಮವಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಶಿ ಸುಬ್ರಮಣಿ ಹೇಳಿದರು.

ವಿರಾಜಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷ 2022–23ನೇ ಸಾಲಿನ ವಿರಾಜಪೇಟೆ ಕ್ಲಸ್ಟರ್ 'ಕಲಿಕಾ ಹಬ್ಬ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಲಿಕಾ ಹಬ್ಬದ ಮೂಲಕ ಗ್ರಾಮೀಣ ಭಾಗದ ಮಕ್ಕಳಿಗೆ ತಮ್ಮ ಪ್ರತಿಭೆ ಹೊರಹೊಮ್ಮಲು ಅವಕಾಶ ದೊರಕಿದಂತಾಗಿದೆ ಎಂದರು.

ಪುರಸಭೆ ಸದಸ್ಯೆ ಆಶಾ ಸುಬ್ಬಯ್ಯ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳಿಗೆ ಹೆಚ್ಚು ಕಲಿಯುವ ನಿಟ್ಟಿನಲ್ಲಿ ಚಟುವಟಿಕೆಗಳಲ್ಲಿ ಭಾಗವಹಿಸಲು ಕಲಿಕಾ ಹಬ್ಬ ಸಹಕಾರಿಯಾಗಲಿದೆ. ಇದರಿಂದ ಜ್ಞಾನ ಹೆಚ್ಚಲಿದೆ. ಮಕ್ಕಳು ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ದೇಶದ ಉತ್ತಮ ಪ್ರಜೆಗಳಾಗುವಂತೆ ಹೇಳಿದರು. ಕ್ಷೇತ್ರ ಸಮನ್ವಯಾಧಿಕಾರಿ ವನಜಾಕ್ಷಿ ಮಾತನಾಡಿ, ಕಲಿಕಾ ಹಬ್ಬ 7 ಕ್ಲಸ್ಟರ್‌ಗಳಲ್ಲಿ ಮುಗಿಯುವ ಹಂತದಲ್ಲಿದ್ದು ಯಶಸ್ವಿಯಾಗಿ ನಡೆಯುತ್ತಿದ್ದು, ಶಿಕ್ಷಕರ ಸಹಕಾರದಿಂದ ಮಕ್ಕಳು ಸಂಭ್ರಮಿಸುತ್ತಿದ್ದಾರೆ. ವಿದ್ಯಾಥಿಗಳು ಕಲಿತ್ತಿರುವುದನ್ನು ಅಳವಡಿಸಿಕೊಳ್ಳುವಂತಾಗಬೇಕು ಎಂದರು.

ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಪ್ರತೀಕಾ ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳಲ್ಲಿ ಕಲಿಕೆಯನ್ನು ಕೊಠಡಿಯಲ್ಲಿ ಕಲಿಸದೇ ವಿದ್ಯಾರ್ಥಿಗಳನ್ನು ಗುಂಪು ಗುಂಪಾಗಿ ಕಲಿಕೆಯಲ್ಲಿ ಅಳವಡಿಸಿಕೊಳ್ಳಬೇಕೆಂದು ಕಲಿಕಾ ಹಬ್ಬದ ಮಹತ್ವವನ್ನು ತಿಳಿಸಿದರು. ವೇದಿಕೆ ಯಲ್ಲಿ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಪ್ರವೀಣ್, ಕಾಕೋಟು ಪರಂಬು ಕ್ಲಸ್ಟರ್‌ನ ಶ್ರೀನಿವಾಸ್, ಎಸ್‌ಡಿಎಂಸಿ ಅಧ್ಯಕ್ಷ ಮೋಹನ್, ಸದಸ್ಯೆ ಪುಷ್ಪ, ಬೇಟೋಳಿ ಶಾಲೆ ಮತ್ತು ಕೆದಮು ಳ್ಳೂರು ಶಾಲಾ ಮುಖ್ಯ ಶಿಕ್ಷಕರಾದ ಸೀತಾ ಮತ್ತು ಜ್ಞಾನಮಣಿ, ಬಿಆರ್‌ಪಿ ಕೆ.ಸಿ. ಗೀತಾಂಜಲಿ ಮತ್ತಿತರರು ಉಪಸ್ಥಿತರಿದ್ದರು.

ಖಾಸಗಿ ಬಸ್ ಹರಿದು ಜಿಂಕೆ ಸಾವು



ಮಡಿಕೇರಿ, ಜ.23– ಖಾಸಗಿ ಬಸ್ ಹರಿದು ರಸ್ತೆ ದಾಟುತ್ತಿದ್ದ ಜಿಂಕೆ ಸಾವನ್ನಪ್ಪಿದ್ದ ಘಟನೆ ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದಲ್ಲಿ ನಡೆದಿದೆ. ಕುಟ್ಟದಿಂದ ವಿರಾಜಪೇಟೆ ಕಡೆಗೆ ಬರುತ್ತಿದ್ದ ಕೇರಳ ನೋಂದಣಿ ಸಂಖ್ಯೆ ಹೊಂದಿದ್ದ ಖಾಸಗಿ ಬಸ್ ನಾಲ್ಕೇರಿ–ಕುಟ್ಟ ಮುಖ್ಯರಸ್ತೆಯಲ್ಲಿ ಜಿಂಕೆಗೆ ಡಿಕ್ಕಿಯಾಗಿದೆ.

ಕುಟ್ಟ ಸರ್ಕಾರಿ ಶಾಲೆ ಬಳಿ ಈ ಘಟನೆ ನಡೆದಿದ್ದು, ಕುಟ್ಟ ವಿಭಾಗದ ಅರಣ್ಯಾಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ನಾಪಂಡ ಮುತ್ತಪ್ಪಗೆ ಜೆಡಿಎಸ್ ಜಿಲ್ಲಾಧ್ಯಕ್ಷರಿಂದ ನೋಟೀಸ್

ಮಡಿಕೇರಿ, ಜ.23– ಮಡಿಕೇರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂದು ಗುರುತಿಸಿಕೊಳ್ಳುತ್ತಿರುವ ಜಾತ್ಯತೀತ ಜನತಾದಳದ ಮುಖಂಡ ನಾಪಂಡ ಮುತ್ತಪ್ಪ ಅವರಿಗೆ ಪಕ್ಷದ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್ ಅವರು ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.



ನಾಪಂಡ ಮುತ್ತಪ್ಪ

ಜೆಡಿಎಸ್ ವರಿಷ್ಠರ ಆದೇಶವಿಲ್ಲದೆ ಪಕ್ಷದ ಅಧಿಕೃತ ಅಭ್ಯರ್ಥಿ ಎಂದು ಬಿಂಬಿಸಿಕೊಳ್ಳುವುದು ಮತ್ತು ಪಂಚರತ್ನ ಎಂಬ ವಾಹನದಲ್ಲೂ ಮಡಿಕೇರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂದು ಪ್ರಚಾರ ಮಾಡುತ್ತಿರುವುದು ಸರಿಯಲ್ಲ. ರಾಜ್ಯ ವರಿಷ್ಠರ ಆದೇಶದಂತೆ ನಡೆದುಕೊಳ್ಳದೆ ಸ್ವಯಂಪ್ರೇರಿತವಾಗಿ ಪಕ್ಷದೊಳಗೆ ಬಿಕ್ಕಟ್ಟನ್ನು ಹಾಗೂ ಭಿನ್ನಾಭಿಪ್ರಾಯಗಳನ್ನು ತರುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಮಡಿಕೇರಿ ಕ್ಷೇತ್ರದಲ್ಲಿ ಸ್ಪರ್ಧಿಸಲು ಹಲವು ಆಕಾಂಕ್ಷಿಗಳು ಇದ್ದು ಎಲ್ಲರನ್ನು ಒಗ್ಗೂಡಿಸಿ ಯಾವುದೇ ಭಿನ್ನಾಭಿಪ್ರಾಯಗಳು ಮೂಡದಂತೆ ಕಾರ್ಯಪ್ರವೃತ್ತರಾಗಬೇಕು.

ಆದರೆ ತಾವು ಇದನ್ನೆಲ್ಲ ನಿರ್ಲಕ್ಷಿಸಿ ಕೆಲವರನ್ನಷ್ಟೇ ಬಳಸಿಕೊಂಡು ಮಡಿಕೇರಿ ಕ್ಷೇತ್ರದ ಅಭ್ಯರ್ಥಿ ಎಂದು ಸ್ವಯಂ ಘೋಷಣೆ ಮಾಡುತ್ತಿರುವುದರಿಂದ ಪಕ್ಷಕ್ಕೆ ಕಿರಿಕಿರಿ ಉಂಟು ಮಾಡುತ್ತಿದೆ. ಇದರಿಂದ ಪಕ್ಷದ ಕಾರ್ಯಕರ್ತರಿಗೆ ಹಾಗೂ ಪಕ್ಷ ಸಂಘಟನೆಗೂ ತೊಂದರೆಯಾಗುವ ಸಾಧ್ಯತೆಗಳಿದೆ. ಆದ್ದರಿಂದ ಈ ನೋಟಿಸ್ ಸಿಕ್ಕಿದ 7 ದಿನಗಳೊಳಗೆ ಸೂಕ್ತ ಸಮಜಾಯಿಷಿ ನೀಡುವುದು, ತಪ್ಪಿದಲ್ಲಿ ರಾಜ್ಯ ವರಿಷ್ಠರಿಗೆ ದೂರು ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ನಾಪಂಡ ಮುತ್ತಪ್ಪ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ಕೆ.ಎಂ.ಗಣೇಶ್ ತಿಳಿಸಿದ್ದಾರೆ.

ಉಪಲೋಕಾಯುಕ್ತ ಕೆ.ಎನ್.ಫಣೀಂದ್ರರಿಂದ ಪ್ರಕರಣಗಳ ವಿಚಾರಣೆ



ಮಡಿಕೇರಿ, ಜ.23– ಉಪ ಲೋಕಾಯುಕ್ತ ಕಾರ್ಯ ವ್ಯಾಪ್ತಿಗೆ ಒಳಪಡುವ ಹಲವು ಪ್ರಕರಣಗಳನ್ನು ದೂರುದಾರರು ಮತ್ತು ಎದುರುದಾರರ ಸಮ್ಮುಖದಲ್ಲಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಸೋಮವಾರ ವಿಚಾರಣೆ ನಡೆಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ವಿಚಾರಣೆ ಸಂದರ್ಭದಲ್ಲಿ ಮಾತನಾಡಿದ ಅವರು, 40 ದೂರುಗಳಲ್ಲಿ 22 ದೂರುಗಳು ಉಪ ಲೋಕಾಯುಕ್ತ ವ್ಯಾಪ್ತಿಗೆ ಸಂಬಂಧಿಸಿದ್ದು, ಈ ದೂರುಗಳನ್ನು ವಿಚಾರಣೆ ಮಾಡಲಾಗುವುದು ಎಂದರು. ಉಪ ಲೋಕಾಯುಕ್ತ ವ್ಯಾಪ್ತಿಗೆ ಸಲ್ಲಿಕೆಯಾಗಿರುವ ದೂರುಗಳ ಸಂಬಂಧ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದು ಲೋಕಾಯುಕ್ತದ ಪ್ರಮುಖ ಉದ್ದೇಶವಾಗಿದೆ.

ಸೌಲಭ್ಯಗಳನ್ನು ಕಲ್ಪಿಸದೆ ಬಡಾವಣೆಗಳ ನಿರ್ಮಾಣ, ಕೆರೆಗಳು ಮತ್ತು ದೇವರ ಕಾಡುಗಳ ಸಂರಕ್ಷಣೆ, ಭೂ ಒತ್ತುವರಿ ತೆರವುಗೊಳಿಸುವುದು, ಕಾಲ ಮಿತಿಯಲ್ಲಿ ಸಾರ್ವಜನಿಕರ ಸಮಸ್ಯೆಗೆ ಪರಿಹರಿಸುವುದು ಮತ್ತಿತರ ಹಲವು ದೂರು ವಿಚಾರಣೆ ನಡೆಸಿದ ಉಪ ಲೋಕಾಯುಕ್ತರು, ಕಾಲಮಿತಿಯಲ್ಲಿ ಸಾರ್ವಜನಿಕರ ಸಮಸ್ಯೆಗಳನ್ನು ಇತ್ಯರ್ಥಪಡಿಸಿ ವರದಿ ನೀಡುವಂತೆ ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಿದರು.

ಎಚ್.ಎಸ್.ಅಶೋಕ್ ಎಂಬುವರು ಕುಶಾಲನಗರದಲ್ಲಿ ಎಲ್ಲೆಂದರಲ್ಲಿ ಖಾಸಗಿ ಬಡಾವಣೆಗಳು ನಿರ್ಮಾಣವಾಗುತ್ತಿದ್ದು, ಕೆಲವು ಬಡಾವಣೆಗಳನ್ನು ಅನುಮತಿ ಪಡೆಯದೆ ನಿರ್ಮಿಸಲಾಗಿದೆ. ಬಡಾವಣೆ ನಿರ್ಮಿಸುವಾಗ ರಸ್ತೆ, ಚರಂಡಿ, ಉದ್ಯಾನವನ ಹೀಗೆ ಹಲವು ಮೂಲ ಸೌಲಭ್ಯಗಳು ಒಳಗೊಂಡಿಲ್ಲ ಎಂದು ದೂರಿದರು. ಉಪ ಲೋಕಾಯುಕ್ತರಾದ ಕೆ.ಎನ್.ಫಣೀಂದ್ರ ಅವರು ಜಿಲ್ಲಾಧಿಕಾರಿ ಅವರ ನ್ಯಾಯಾಲಯದಲ್ಲಿ ಈ ಪ್ರಕರಣ ಇರುವುದರಿಂದ ಎರಡು ತಿಂಗಳಲ್ಲಿ ಪ್ರಕರಣ ಇತ್ಯರ್ಥಪಡಿಸಲಿದ್ದಾರೆ ಎಂದು ತಿಳಿಸಿದರು. ಹಾಗೆಯೇ ಗೋಣಿಕೊಪ್ಪದಲ್ಲೂ ಸಹ ನಾಗರಿಕ ಸೌಲಭ್ಯ ಕಲ್ಪಿಸದೆ ಹಾಗೂ ನಕ್ಷೆ ಅನುಮೋದನೆ ಪಡೆಯದೆ ಬಡಾವಣೆ ನಿರ್ಮಿಸಲಾಗಿದೆ ಎಂದು ವಿ.ಎಸ್.ಸೂರ್ಯ ಅವರು ದೂರಿದರು. ಈ ಬಗ್ಗೆ ಉಪ ಲೋಕಾಯುಕ್ತರು ಎಂಜಿನಿಯರ್ ಕಳುಹಿಸಿ ಪರಿಶೀಲಿಸಲಿದ್ದು, ಬಳಿಕ ವರದಿ ತರಿಸಿಕೊಳ್ಳಲಾಗುವುದು ಎಂದು ಆದೇಶಿಸಿದರು.

ಕರ್ನಾಟಕ ಲೋಕಾಯುಕ್ತ ಜಿಲ್ಲಾ ರಿಜಿಸ್ಟ್ರಾರ್ ತನಿಖಾ ವಿಭಾಗದ ಹಿರಿಯ ನ್ಯಾಯಾಧೀಶ ಚೆನ್ನಕೇಶವ ರೆಡ್ಡಿ, ಕರ್ನಾಟಕ ಲೋಕಾಯುಕ್ತದ ಪಬ್ಲಿಕ್ ಪ್ರಾಸಿಕ್ಯೂಟರ್ ಡಿ.ನಾರಾಯಣ, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಬಿ. ಪ್ರಸಾದ್, ಎಸ್ಪಿ ಕ್ಯಾಪ್ಟನ್ ಎಂ.ಎ.ಅಯ್ಯಪ್ಪ, ಲೋಕಾಯುಕ್ತ ಎಸ್.ಪಿ. ಸುರೇಶ್ ಬಾಬು, ಮೈಸೂರು ಜಿಲ್ಲೆಯ ಕರ್ನಾಟಕ ಲೋಕಾಯುಕ್ತ ಡಿವೈಎಸ್ಪಿ ಕೃಷ್ಣಯ್ಯ ಇತರರಿದ್ದರು.

ಇಂದು ಜಿಲ್ಲಾಧಿಕಾರಿಗಳ ನೇರ ಪೋನ್‌ಇನ್ ಕಾರ್ಯಕ್ರಮ

ಮಡಿಕೇರಿ, ಜ.23– ಮಡಿಕೇರಿ ಆಕಾಶವಾಣಿಯಿಂದ ಜನವರಿ, 24 ರಂದು ಬೆಳಗ್ಗೆ 9.05 ರಿಂದ 10 ಗಂಟೆಯವರೆಗೆ ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಹಾಗೂ ಕೊಡಗು ಜಿಪಂ ಸಿಇಓ ಡಾ.ಎಸ್ ಆಕಾಶ್ ಅವರು ನೇರ ಪ್ರಸಾರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಈ ಹಿರಿಯ ಅಧಿಕಾರಿಗಳು ವಿಚಾರಗಳನ್ನು ತಿಳಿಸಲಿದ್ದು ಕುಂದು ಕೊರತೆಗಳ ಬಗ್ಗೆ ಶ್ರೋತೃಗಳು ನೇರ ಪ್ರಸಾರದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಚರ್ಚಿಸಬಹುದು ಎಂದು ಆಕಾಶವಾಣಿ ಕಾರ್ಯನಿರ್ವಾಹಕ ವಿಜಯ್ ಅಂಗಡಿ ತಿಳಿಸಿದ್ದಾರೆ. (ಸಂಪರ್ಕಿಸಲು ಸಂಖ್ಯೆ 08272 200006)

ನಾಳೆ ರಾಷ್ಟ್ರೀಯ ಮತದಾರರ ದಿನ

ಚಾಮರಾಜನಗರ, ಜ.23– ಭಾರತ ಚುನಾವಣಾ ಆಯೋಗ ಮತ್ತು ಜಿಲ್ಲಾಡಳಿತದ ವತಿಯಿಂದ 13ನೇ ರಾಷ್ಟ್ರೀಯ ಮತದಾರರ ದಿನ ಆಚರಣೆ ಕಾರ್ಯಕ್ರಮವನ್ನು ಜನವರಿ 25ರಂದು ಮಧ್ಯಾಹ್ನ 1 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಉದ್ಘಾಟಿಸುವರು. ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅಧ್ಯಕ್ಷತೆ ವಹಿಸುವರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ. ಶ್ರೀಧರ, ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಎಸ್ಪಿ ಟಿ.ಪಿ. ಶಿವಕುಮಾರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ದೇವರಾಜು, ಮತದಾನದ ಮಹತ್ವ ಕುರಿತು ವಿಶೇಷ ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

ಚಾ.ನಗರ ಬಳಿ ಕಾಡಾನೆ ಹಿಂಡಿನಿಂದ ಬೆಳೆ ನಾಶ

● ಸೀಳುನಾಯಿಗಳಿಗೆ 8 ಕುರಿ ಬಲಿ ● ಅರಣ್ಯ ಇಲಾಖೆ ವಿರುದ್ಧ ರೈತರ ಪ್ರತಿಭಟನೆ





ಚಾಮರಾಜನಗರ, ಜ.23– ತಾಲೂಕಿನ ಲಿಂಗನಪುರ, ಅರಕಲವಾಡಿ, ಯಾನಗಹಳ್ಳಿ ಮತ್ತಿತರ ಗ್ರಾಮಗಳ ವ್ಯಾಪ್ತಿಯ ಜಮೀನುಗಳಿಗೆ ಭಾನುವಾರ ರಾತ್ರಿ 15ಕ್ಕೂ ಹೆಚ್ಚು ಆನೆಗಳ ಹಿಂಡು ದಾಳಿ ನಡೆಸಿ, ಬಾಳೆ, ಹುರುಳಿ, ಕೋಸು, ಟೊಮೆಟೊ, ತೆಂಗಿನ ಫಸಲುಗಳನ್ನು ನಾಶ ಮಾಡಿವೆ.

ಇದರಿಂದ ನೂರಾರು ಎಕರೆ ಫಸಲು ನಾಶವಾಗಿದ್ದು ಲಕ್ಷಾಂತರ ರೂ. ನಷ್ಟವಾಗಿದೆ. ವಿಷಯ ತಿಳಿದು ಜಮೀನುಗಳತ್ತ ತೆರಳಿದ ರೈತರು ತಮ್ಮ ಜಮೀನಿನಲ್ಲಿ ಫಸಲು ನಾಶವಾಗಿರುವುದನ್ನು ಕಂಡು ತಾಲೂಕಿನ ಲಿಂಗನಪುರ ಗ್ರಾಮದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ಗ್ರಾಮದ ಮುಖ್ಯ ರಸ್ತೆಯ ಬಳಿ ನೂರಾರು ರೈತರು ಜಮಾಯಿಸಿ ಜಿಲ್ಲಾಡಳಿತ, ಅರಣ್ಯ ಇಲಾಖೆ, ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಶಾಸಕರು, ಜಿಲ್ಲಾಧಿಕಾರಿಗಳು ಆಗಮಿಸುವಂತೆ ಪಟ್ಟುಹಿಡಿದರು. ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳ ಮನವೊಲಿಕೆಗೂ ಜಗ್ಗದ ರೈತರು ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮುಂದುವರಿಸಿ ದರು. ರಾಜ್ಯದ ಗಡಿ ಭಾಗವಾಗಿರುವ ಎತ್ತಗಟ್ಟಿ ಬೆಟ್ಟದ ಕಡೆಯಿಂದ ಆನೆಗಳು ಬಾರದಂತೆ ಆನೆ ಕಂದಕಗಳನ್ನು ನಿರ್ಮಿಸಬೇಕು. ಅಲ್ಲದೇ ಆನೆಗಳಿಂದ ನಾಶವಾಗಿರುವ ಫಸಲಿಗೆ ತುರ್ತಾಗಿ ಪರಿಹಾರ ನೀಡಬೇಕು. ಅರಣ್ಯ ಇಲಾಖೆ ಹೆಚ್ಚು ಸಿಬ್ಬಂದಿಗಳನ್ನು ನಿಯೋಜಿಸಿ ರಾತ್ರಿ ವೇಳೆ ಈ ಕಡೆ ಆನೆಗಳು ಬಾರದಂತೆ ತಡೆಯಬೇಕು ಎಂದು ಆಗ್ರಹಿಸಿದರು.

ಸೀಳುನಾಯಿಗಳ ದಾಳಿಯಿಂದ 8 ಕುರಿಗಳ ಸಾವು: ತಾಲೂಕಿನ ಕಾಳಿಕಾಂಬ ಕಾಲೋನಿಯಲ್ಲಿ ಸೀಳು ನಾಯಿಗಳ ದಾಳಿಯಿಂದ 8 ಕುರಿಗಳು ಸಾವಿಗೀಡಾಗಿರುವ ಘಟನೆ ನಡೆದಿದೆ. ಕಾಳಿಕಾಂಬ ಕಾಲೋನಿಯ ಮುರುಗ ಹಾಗೂ ಗೋವಿಂದೇಗೌಡ ಎಂಬುವರು ಕುರಿಗಳನ್ನು ಮೇಯಿಸಲು ಅರಣ್ಯದ ಬಳಿ ತೆರಳಿದ್ದ ವೇಳೆ ಸೀಳುನಾಯಿಗಳ ಹಿಂಡು ಏಕಾಏಕಿ ಕುರಿಗಳ ಮೇಲೆ ದಾಳಿ ನಡೆಸಿವೆ. ಕೂಡಲೇ ಕುರಿಗಾಹಿಗಳ ಕೂಗಾಟದಿಂದ ಸೀಳುನಾಯಿಗಳು ಸ್ಥಳದಿಂದ ಕಾಲ್ಕಿತ್ತಿವೆ.ಆದರೆ, ಅಷ್ಟರಲ್ಲಾಗಲೇ 8 ಕುರಿಗಳು ಸ್ಥಳದಲ್ಲಿಯೇ ಮೃತಪಟ್ಟಿವೆ. ಕುರಿಗಳನ್ನು ಮೇಯಿಸಿಕೊಂಡು ಜೀವನ ಸಾಗಿಸುತ್ತಿದ್ದ ಮುರುಗ ಹಾಗೂ ಗೋವಿಂದೇಗೌಡ ಅವರು ಕಡುಬಡವರಾಗಿದ್ದು, ಕುರಿಗಳ ಸಾವಿಗೆ ಪರಿಹಾರ ನೀಡಬೇಕೆಂದು ಮನವಿ ಮಾಡಿದ್ದಾರೆ. ಈ ಸಂಬಂಧ ರಾಮಸಮುದ್ರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಶಲಕರ್ಮಿಗಳಿಗೆ ಸಾಲ–ಸಹಾಯಧನಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜ.23– 2022–23ನೇ ಸಾಲಿನಲ್ಲಿ ಕುಶಲಕರ್ಮಿಗಳ ಅಭಿವೃದ್ಧಿಗಾಗಿ 50 ಸಾವಿರ ರೂ.ವರೆಗೆ ನೀಡಲಾಗುವ ಸಾಲ, ಸಹಾಯಧನ ಸೌಲಭ್ಯಕ್ಕಾಗಿ ಕುಶಲಕರ್ಮಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕುಶಲಕರ್ಮಿಗಳ ಅಭಿವೃದ್ಧಿಗಾಗಿ ಸರ್ಕಾರವು 35 ಸಾವಿರ ಸಾಲ ಮತ್ತು 15 ಸಾವಿರ ರೂ. ಸಹಾಯಧನ ಸೇರಿದಂತೆ ಒಟ್ಟು 50 ಸಾವಿರ ರೂ.ವರೆಗೆ ನೀಡಲಿದೆ. 18ವರ್ಷ ಮೇಲ್ಪಟ್ಟ ಕುಶಲಕರ್ಮಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿ ಮತ್ತು ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸುವಂತೆ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಚಾಮರಾಜನಗರ ಜ.23– ತಾಲೂಕಿನ ವಿವಿಧ ಗ್ರಾಮಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಅವರು ಮಾತನಾಡಿ, ದೊಡ್ಡ ಮೋಳೆಯಲ್ಲಿ 50ಲಕ್ಷ, ಚಂದುಕಟ್ಟೆ ಮೋಳೆಗೆ 30ಲಕ್ಷ, ಬ್ಯಾಡಮೂಡ್ಲು ಗ್ರಾಮಕ್ಕೆ 20 ಲಕ್ಷ ಸೇರಿದಂತೆ 1 ಕೋಟಿ ರೂ.ವೆಚ್ಚದಲ್ಲಿ ಗ್ರಾಮಗಳ ಸ್ವಚ್ಛತೆ ದೃಷ್ಟಿಯಿಂದ ತಾಲೂಕಿನ ವಿವಿಧ ಗ್ರಾಮಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ.

ಗ್ರಾಮೀಣ ಪ್ರದೇಶಗಳ ರಸ್ತೆಗಳು ಅಭಿವೃದ್ಧಿಯಾದರೆ ಅದು ಗ್ರಾಮಗಳ ಪ್ರಗತಿಯ ಸಂಕೇತವಾಗಿದೆ. ಮೋಳೆಗಳಿಗೆ ಅಗತ್ಯವಾಗಿ ಬೇಕಾದ ರಸ್ತೆ, ಚರಂಡಿ ಹಾಗೂ ಸಮುದಾಯ ಭವನ ನಿರ್ಮಿಸಿಕೊಡಲಾಗಿದೆ. ಕುಡಿಯುವ ನೀರು, ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆ ನಿವೇಶನ ಸೇರಿದಂತೆ ಸರ್ಕಾರದಿಂದ ನೀಡಲಾಗುವ ಸೌಲಭ್ಯಗಳನ್ನು ಸಮಗ್ರವಾಗಿ ಕಲ್ಪಿಸಲಾಗಿದೆ ಎಂದರು

ಗ್ರಾಪಂ ಅಧ್ಯಕ್ಷೆ ಮಂಜುಳಾಗಣೇಶ್, ತಾಪಂ ಮಾಜಿ ಸದಸ್ಯ ಪುಟ್ಟಸ್ವಾಮಿ, ಗ್ರಾಪಂ ಸದಸ್ಯರಾದ ಶಾಂತರಾಜು, ಲೋಕೇಶ್, ಮಹದೇವಶೆಟ್ಟಿ, ರಾಜೇಶ್, ರತ್ನಮ್ಮ, ಮುಖಂಡರಾದ ಬ್ಯಾಡಮೂಡ್ಲು ನಾಗರಾಜು, ಮರಿಸ್ವಾಮಿ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಕಲಿಕೆ, ಕಲಿಕಾ ಹಬ್ಬ ನಿರಂತರವಾಗಿರಲಿ

ಚಾಮರಾಜನಗರ, ಜ.23– ಪ್ರತಿಯೊಬ್ಬರ ಜೀವನದ ಬುನಾದಿಯಾದ ಕಲಿಕೆ ಮತ್ತು ಕಲಿಕಾ ಹಬ್ಬ ನಿರಂತರವಾಗಿರಬೇಕು ಎಂದು ಡಿವೈಎಸ್ಪಿ ಪ್ರಿಯದರ್ಶಿನಿ ಸಾಣಿಕೊಪ್ಪ ಹೇಳಿದರು.

ಡಿವೈಎಸ್ಪಿ ಪ್ರಿಯದರ್ಶಿನಿ ಸಾಣಿಕೊಪ್ಪ

ತಾಲೂಕಿನ ವೆಂಕಟಯ್ಯನಛತ್ರ ಗ್ರಾಮದ ವೆಂಕಟರಮಣ ಸ್ವಾಮಿ ದೇವಸ್ಥಾನದ ಮುಂಭಾಗ ನಡೆದ ಕಲಿಕಾ ಹಬ್ಬ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಲಿಕೆ ಅನ್ನೋದು ಜೀವನದ ಬುನಾದಿ. ಜೀವನ ನಮಗೆ ಯಾವಾಗಲೂ ಕಲಿಸುತ್ತಲೇ ಇರುತ್ತದೆ. ಜೀವನ ಪ್ರಶ್ನೆ ಪತ್ರಿಕೆ ಕೊಟ್ಟು ನಮ್ಮ ಬಳಿ ಉತ್ತರ ಪಡೆಯುತ್ತದೆ. ಕಲಿಕೆಯನ್ನು ಜೀವನದ ಗುರಿಯಾಗಿ ಇಟ್ಟುಕೊಳ್ಳಬೇಕು. ಅದರಲ್ಲೂ ಹೆಣ್ಣು ಮಕ್ಕಳು ಹೆಚ್ಚಾಗಿ ಕಲಿಕೆಯತ್ತಾ ಆಕರ್ಷಿತರಾಗಬೇಕು ಹೆಚ್ಚು ವಿದ್ಯಾಭ್ಯಾಸ ಮಾಡಿದರೆ ಜೀವನದಲ್ಲಿ ನಾವು ಬಯಸಿದ್ದೆಲ್ಲಾ ಸಿಗುತ್ತದೆ. ಮಕ್ಕಳು ಸರ್ಕಾರಿ ಶಾಲೆಗೆ ಆಯ್ಕೆಯಾಗಿ ಬರುವಂತಹ ಶಿಕ್ಷಕರ ಜಾಣ್ಮೆಯನ್ನು ನೀವು ಕರಗತಮಾಡಿಕೊಳ್ಳಬೇಕು ಎಂದು ತಿಳಿಸಿದರು.

ವಿವಿಧ ಬಗೆಯ ಕಲಾತಂಡಗಳೊಂದಿಗೆ, ಎತ್ತಿನಗಾಡಿಯಲ್ಲಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಶಾಲಾ ಮಕ್ಕಳು ವಿಶೇಷ ರೀತಿಯ ಉಡುಗೆ ತೊಟ್ಟು ಕಲಿಕಾ ಹಬ್ಬದಲ್ಲಿ ಸಂಭ್ರಮಿಸಿದರು. ಪ್ರಾಂಶುಪಾಲರಾದ ನಾಗೇಶ್, ಮುಖ್ಯ ಶಿಕ್ಷಕಿ ನಾಗರತ್ನ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಶಮಿತ್ ಕುಮಾರ್, ಎಸ್‌ಡಿಎಂಸಿ ನಂಜುಂಡಸ್ವಾಮಿ, ಶಿಕ್ಷಕರಾದ ಲೋಕೇಶ್, ಮಲ್ಲೇಶ್, ಕಿರಣ್ ರಾಜ್, ನಟರಾಜ್, ವೆಂಕಟಚಲ, ಮಂಜುಳ, ಸುಜಾತ, ಸಿ.ಆರ್.ಪಿ.ಮಾಲಿಂಗನಾಯಕ, ನಂದೀಶ್, ಶಿವಕುಮಾರ್, ಶಿವರಾಮಯ್ಯ ಸೇರಿದಂತೆ ಶಾಲೆ ಸಿಬ್ಬಂದಿ ಹಾಗೂ ಮಕ್ಕಳು ಹಾಜರಿದ್ದರು.



ರಂಗಕಲೆ ಮಾನವೀಯ ಮೌಲ್ಯಗಳನ್ನು ತುಂಬುತ್ತದೆ

ಮಾಜಿ ಶಾಸಕ ಎಸ್.ಬಾಲರಾಜ್ ಅಭಿಮತ



ಚಾಮರಾಜನಗರ, ಜ.23– ರಂಗಕಲೆ ನಮ್ಮಲ್ಲಿ ಸಮಯಪ್ರಜ್ಞೆ, ಶಿಸ್ತನ್ನು ಕಲಿಸುವ ಜೊತೆಗೆ ಮಾನವೀಯ ಮೌಲ್ಯಗಳನ್ನು ತುಂಬುತ್ತದೆ ಎಂದು ಮಾಜಿ ಶಾಸಕ ಎಸ್. ಬಾಲರಾಜ್ ಹೇಳಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ವತಿಯಿಂದ ನಡೆದ ಆತ್ಮೀಯ ರಂಗ ಉತ್ಸವ ಹಾಗೂ ಆತ್ಮೀಯ ಸಂಸ್ಕೃತಿ ಪ್ರಜ್ಞಾ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ರಂಗಕಲೆಯಲ್ಲಿ ಜಾತಿ, ಧರ್ಮ, ಮತ, ಪಂಥ ಯಾವುದು ಇಲ್ಲ. ನಾವೆಲ್ಲಾ ಒಂದು ಅನ್ನುವುದನ್ನು ತೋರಿಸುತ್ತದೆ. ಆ ನಿಟ್ಟಿನಲ್ಲಿ ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ಒಂದು ಉತ್ತಮ ಹೆಜ್ಜೆ ಹಾಕಿದ್ದು, ಮಕ್ಕಳಲ್ಲಿ ರಂಗಕಲೆಯ ಅಭಿರುಚಿಯನ್ನು ಬಿತ್ತುವ ಮೂಲಕ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಮಾಡುತ್ತಿದೆ ಎಂದರು.

ಆತ್ಮೀಯ ಸಂಸ್ಕೃತಿ ಪ್ರಜ್ಞಾ ಪ್ರಶಸ್ತಿ ಸ್ವೀಕರಿಸಿದ ರಂಗಭೂಮಿ ಹಾಗೂ ಚಲನ ಚಿತ್ರ ಕ್ಷೇತ್ರದ ಹಿರಿಯ ಸಾಧಕ ಸಿ.ಆರ್. ಕೃಷ್ಣಮೂರ್ತಿ (ಬೆನಕ ಕಿಟ್ಟಿ) ಮಾತನಾಡಿ, ಮಕ್ಕಳ ರಂಗಭೂಮಿ ಅದ್ಭುತವಾ ದದ್ದು, ಮಕ್ಕಳನ್ನು ಪಾತ್ರಗಳಿಗೆ ಒಪ್ಪಿಸುವುದು ಕಷ್ಟ. ಒಪ್ಪಿಸಿದ ಮೇಲೆ ಅಲ್ಲಿಂದ ವಾಪಸ್ ತರುವುದು ಇನ್ನೂ ಕಷ್ಟ. ಒಂದು ಸಲ ರಂಗ ಭೂಮಿ ಗೀಳು ಬಂದ ಮೇಲೆ ಅಳಿಸುವುದು ತುಂಬಾನೆ ಕಷ್ಟ. ಇಂದೊಂದು ಅಂಟು ಇದ್ದಂಗೆ. ರಂಗಭೂಮಿ ಒಬ್ಬ ಮನುಷ್ಯನ ವಿಕಸನಕ್ಕೆ ಬಹಳಷ್ಟು ಕಾಣಿಕೆ ನೀಡುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸಿ. ಮಂಜುನಾಥ್ ಪ್ರಸನ್ನ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ರಂಗಕಲೆ ಬಹಳಷ್ಟು ಹೆಸರು ಪಡೆದಿತ್ತು. ಇವತ್ತು ಬೆರಳೆಣಿಕೆಯಷ್ಟೆ ಮಾತ್ರ ರಂಗಕಲೆ ಮಾತ್ರ ಇದ್ದು, ಸಿನಿಮಾ ಗಳ ಹೊಡೆತದಿಂದ ರಂಗಕಲೆ ಕಣ್ಮರೆಯಾಗುತ್ತಿರುವುದು ವಿಷಾದಕರ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ರಂಗನಿರ್ದೇಶಕ ಡಾ. ಶ್ರೀಪಾದ ಭಟ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ನಿವೃತ್ತ ಪ್ರಾಂಶುಪಾಲ ಎ.ಎಂ. ನಾಗಮಲ್ಲಪ್ಪ, ಜವಳಿ ವರ್ತಕರ ಸಂಘದ ಅಧ್ಯಕ್ಷ ಬಿ.ವಿ.ವೆಂಕಟನಾಗಪ್ಪ ಶೆಟ್ಟಿ, ರೋಟರಿ ಸಿಲ್ಕ್ ಸಿಟಿ ಮಾಜಿ ಅಧ್ಯಕ್ಷ ಅಜಯ್ ಹೆಗ್ಗವಾಡಿಪುರ, ಜಗದೀಶ್ ಮಾಲ್ನಾಡು ಟ್ರಸ್ಟ್ ಅಧ್ಯಕ್ಷ ಎಸ್.ಕೆ.ಕಿರಣ್ ಕುಮಾರ್ ಗಿರ್ಗಿ, ಕಲೆ ನಟರಾಜು, ಮಹಾಲಿಂಗಗಿರ್ಗಿ ಹಾಗೂ ಕಲಾವಿದರು, ಪೋಷಕರು ಹಾಜರಿದ್ದರು.

ಮೀನಾಕ್ಷಮ್ಮ ನಿಧನ



ಕೊಳ್ಳೇಗಾಲ, ಜ.23– ಕೊಳ್ಳೇಗಾಲದ ಬಸವೇಶ್ವರ ನಗರದ ವಾಸಿ ಮೀನಾಕ್ಷಮ್ಮ (70) ಭಾನುವಾರ ರಾತ್ರಿ ನಿಧನರಾದರು.

ಮೈಸೂರಿನಲ್ಲಿ ಸಮಾರಂಭವೊಂದರಲ್ಲಿ ಪಾಲ್ಗೊಂಡು ವಾಪಸ್ಸಾಗುತ್ತಿದ್ದ ವೇಳೆ ಇವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡಿತು. ಈವೇಳೆ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಮೃತರು ಪುತ್ರಿಯರಾದ ಮಾಯಾವತಿ, ರೇಖಾ, ಅಳಿಯ ನಿವೃತ್ತ ಶಿಕ್ಷಕ ಕುಮಾರಸ್ವಾಮಿ, ಮೊಮ್ಮಕ್ಕಳಾದ ಗೌತಮ್, ಮನೋಜ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ ಹಂಪಾಪುರ ಗ್ರಾಮದ ಬಳಿ ಇರುವ ರುದ್ರಭೂಮಿಯಲ್ಲಿ ವೀರಶೈವ ವಿಧಿ ವಿಧಾನದಂತೆ ಅಂತ್ಯಕ್ರಿಯೆ ಜರುಗಿತು.

ವಿಶಾಲಾಕ್ಷಮ್ಮ



ಕೊಳ್ಳೇಗಾಲ, ಜ.23– ಬಿ.ವೈ. ವಿಜಯೇಂದ್ರ ಅಭಿಮಾನಿ ಸಂಘದ ಜಿಲ್ಲಾಧ್ಯಕ್ಷ ಬ್ಯಂಗೇಶ್ ಕಟ್ಟೆ ಅವರ ತಾಯಿ ವಿಶಾಲಾಕ್ಷಮ್ಮ (68) ಅವರು ಸೋಮವಾರ ನಿಧನರಾದರು. ಮೃತರು ಪುತ್ರ ಬ್ಯಂಗೇಶ್ ಕಟ್ಟೆ, ಆರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಶಾಸಕ ಎನ್. ಮಹೇಶ್, ಮಾಜಿ ಶಾಸಕರಾದ ಎಸ್. ಜಯಣ್ಣ, ಎ.ಆರ್.ಕೃಷ್ಣಮೂರ್ತಿ ಅಂತಿಮ ದರ್ಶನ ಪಡೆದರು. ಸ್ವಗ್ರಾಮ ಕುಂತೂರಿನಲ್ಲಿ ಅಂತ್ಯಕ್ರಿಯೆ ಸೋಮವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಸಾರಿಗೆ ಸಿಬ್ಬಂದಿ ಧರಣಿ ಸತ್ಯಾಗ್ರಹ

ನೌಕರರಿಗೂ ಬಾಟ, ಭತ್ಯೆಗಳನ್ನು 5 ಪಟ್ಟು ಹೆಚ್ಚಿಸುವುದು, ಹೊಲಿಗೆ ಭತ್ಯೆ, ಶೂ, ಜರ್ಸಿ, ರೈನ್ ಕೋಟ್ ಇತ್ಯಾದಿ ಭತ್ಯೆಯನ್ನು 3 ಪಟ್ಟು ಹೆಚ್ಚಿಸುವುದು, ಸೂಕ್ತ ಕ್ರಾಸ್ ಅಲೋಯನ್ಸ್ ನೀಡುವುದು, ಇಎಸ್ಐ ಮಾದರಿಯಲ್ಲಿ ವಂತಿಗೆ ಸಂಗ್ರಹಿಸಿ ಟ್ರಸ್ಟ್ ಮೂಲಕ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಯೋಜನೆ ರೂಪಿಸುವುದು, ಬೆಂಗಳೂರು, ಮಂಗಳೂರು, ಮೈಸೂರು, ಕಲಬುರಗಿಯಲ್ಲಿ ಸಂಸ್ಥೆಯ ಆಸ್ಪತ್ರೆ ನಿರ್ಮಿಸುವುದು, ಹೊರರೋಗಿ ಚಿಕಿತ್ಸಾ ವೆಚ್ಚಕ್ಕೆ ಮಾಸಿಕ 2 ಸಾವಿರ ರೂ. ಹಾಗೂ ಉಚಿತ ಔಷಧ ಕಲ್ಪಿಸುವುದು, ಮುಷ್ಕರ ಸಂದರ್ಭದಲ್ಲಿ ಸೇವೆಯಿಂದ ವಜಾಗೊಂಡ ನೌಕರರನ್ನು ಯಾವುದೇ ಷರತ್ತಿಲ್ಲದೆ ಮರುನೇಮಕ ಮಾಡುವುದು, ಆ ವೇಳೆ ವರ್ಗಾವಣೆ ಮಾಡಿರುವವರನ್ನು ಮೂಲ ಘಟಕಕ್ಕೆ ವಾಪಸ್ ನಿಯೋಜಿಸುವುದು, ಫಾರ್ಮ್-4ನ್ನು ಮೋಟಾರ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಆಕ್ಟ್ ಹಾಗೂ ಸಪ್ಲಿಮೆಂಟರಿ ಒಪ್ಪಂದದ ಪ್ರಕಾರ ರಚಿಸುವುದು, ಹೆಚ್ಚುವರಿ ಓಟಿ ಭತ್ಯೆ, ಎಲ್ಲಾ ನೌಕರರಿಗೂ ಪಾಳಿ ವ್ಯವಸ್ಥೆ ಜಾರಿ, ರಿಯಾಯ್ತಿ ದರದಲ್ಲಿ ಕ್ಯಾಂಟೀನ್, ಮಹಿಳಾ ಸಿಬ್ಬಂದಿಗೆ ವಿಶ್ರಾಂತಿ ಕೊಠಡಿ, ಶಿಶುಪಾಲನಾ ಕೇಂದ್ರ, 8 ಗಂಟೆ ಕರ್ತವ್ಯ ಅವಧಿ ನಿಗದಿಪಡಿಸುವುದು ಸೇರಿದಂತೆ ಅನೇಕ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕೆಂದು ಆಗ್ರಹಿಸಿ ಸಾಂಕೇತಿಕವಾಗಿ ಧರಣಿ ನಡೆಸಲಾಗುವುದು ಎಂದು ತಿಳಿಸಿದರು.

KSRTC ಅಧ್ಯಕ್ಷರ ಮನವಿ

ಕಳೆದ ಎರಡು ವರ್ಷದಿಂದ ಕೊರೊನಾ ಸಮಸ್ಯೆಯಿಂದ ಸಂಸ್ಥೆಯ ಆದಾಯ ಗಳಿಕೆಯಲ್ಲಿ ಹಿನ್ನಡೆಯಾಗಿದೆ. ಆದರೂ, ನೌಕರರಿಗೆ ವೇತನ ನೀಡಿದ್ದೇವೆ. ಸಂಸ್ಥೆಯ ಪರಿಸ್ಥಿತಿ ಇನ್ನು ಸುಧಾರಣೆ ಕಂಡಿಲ್ಲ. ಹಾಗಾಗಿ ಸಾರಿಗೆ ನೌಕರರು ನಾಳೆ (ಜನವರಿ24) ನಡೆಸಲು ಉದ್ದೇಶಿಸಿರುವ ಮುಷ್ಕರದಿಂದ ಹಿಂದೆ ಸರಿಯಬೇಕು ಎಂದು ಕೋರಿದರು.

ಕಳೆದ ನಾಲ್ಕು ವರ್ಷಗಳಿಂದ ಬಸ್ ಪ್ರಯಾಣ ದರವನ್ನು ಏರಿಕೆ ಮಾಡಿಲ್ಲ. ಡೀಸೆಲ್‌ಗೆ ಲೀಟರ್‌ಗೆ 63 ರೂ.ಇದ್ದ ವೇಳೆ ಬಸ್ ಪ್ರಯಾಣ ದರ ನಿಗದಿ ಮಾಡಲಾಗಿತ್ತು. ಆದರೆ ಇಂದು ಡೀಸೆಲ್ ಬೆಲೆ ಲೀಟರ್‌ಗೆ 100 ರೂ. ಆಗಿದೆ. ಆದರೂ ಹಳೆ ದರವನ್ನೇ ಮುಂದುವರಿಸ ಲಾಗಿದೆ. ಹಾಗಾಗಿ ಸಂಸ್ಥೆ ನಷ್ಟ ಎದುರಿಸುತ್ತಿದೆ. ಸಂಸ್ಥೆಯ ನೌಕರರಿಗೆ 1 ಕೋಟಿ ರೂ. ವಿಮೆ ಮಾಡಿಸಲಾಗಿದೆ. ಕರ್ತವ್ಯದ ವೇಳೆ ಅಪಘಾತದಲ್ಲಿ ಪ್ರಾಣ ಹಾನಿ ಸಂಭವಿಸಿದರೆ 1 ಕೋಟಿ ರೂ. ಸಂತ್ರಸ್ತ ಸಿಬ್ಬಂದಿಯ ಕುಟುಂಬಕ್ಕೆ ನೀಡುವ ವ್ಯವಸ್ಥೆ ಈ ವಿಮಾ ಯೋಜನೆಯದ್ದಾಗಿದೆ. ಈ ಯೋಜನೆಯನ್ನೇ ನಮಗೂ ಮಾಡಿಸಿ ಎಂದು ಸರ್ಕಾರಿ ನೌಕರರು ಒತ್ತಾಯ ಸುತ್ತಿದ್ದಾರೆ ಎಂದು ಹೇಳಿದರು.

ಮುಷ್ಕರದಿಂದ ಪ್ರಯಾಣಿಕರಿಗೆ ತೊಂದರೆಯಾಗಲ್ಲ

ಸಂಘದ ಮುಖಂಡರೊಂದಿಗೆ ಮಾತನಾಡಿದ್ದೇನೆ. ಮುಖಂಡರು ಬಸ್ ಸಂಚಾರಕ್ಕೆ ಅಡಚಣೆಯುಂಟು ಮಾಡದೇ ಪ್ರತಿಭಟನೆ ಮಾಡುವುದಾಗಿ ತಿಳಿಸಿದ್ದಾರೆ. ಮೈಸೂರು ವಿಭಾಗದಲ್ಲಿ 1072 ಬಸ್‌ಗಳಿದ್ದು, 968 ಮಾರ್ಗಗಳಲ್ಲಿ 7834 ಟ್ರಿಪ್‌ಗಳಲ್ಲಿ ಸಂಚರಿಸುತ್ತಿವೆ. 4700 ಸಿಬ್ಬಂದಿಗಳಿದ್ದು, ಅವರಲ್ಲಿ 120 ಮಂದಿ ವಾರದ ರಜೆ ಇರುವವರಿದ್ದಾರೆ. ಇವರಲ್ಲಿ ಕೆಲವರು ವಿಭಾಗೀಯ ಕಚೇರಿ ಮುಂದೆ ಪ್ರತಿಭಟನೆ ನಡೆಸುವುದಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ ಸಾರಿಗೆ ನೌಕರರ ಮುಷ್ಕರದಿಂದ ಪ್ರಯಾಣಿಕರಿಗೆ ಯಾವುದೇ ತೊಂದರೆ ಯುಂಟಾಗುವುದಿಲ್ಲ. ಎಂದಿನಂತೆ ಬಸ್‌ಗಳು ಸಂಚರಿಸಲಿವೆ ಎಂದು ಹೇಳಿದರು.

ಮುಂಜಾನೆ ಕ್ಷಿಪ್ರ ಕಾರ್ಯಾಚರಣೆ

ಒಟ್ಟು 12 ಮಂದಿಯನ್ನು ವಶಕ್ಕೆ ಪಡೆದ ಕಾರ್ಯಾಚರಣೆ ತಂಡದವರು, ಮೇಟಗಳ್ಳಿ ಠಾಣೆಗೆ ಕರೆ ತಂದು ಖಡಕ್ ಎಚ್ಚರಿಕೆ ನೀಡಿದರು. ಇಂದು ಪತ್ತೆಯಾದ ಗಾಂಜಾ ಎಲ್ಲಿಂದ ಬಂತು, ಯಾರಿಗೆ ಎಲ್ಲಿ ಮಾರಾಟ ಮಾಡಲು ತರಲಾಗಿದೆ ಎಂಬಿತ್ಯಾದಿ ಮಾಹಿತಿ ಕಲೆ ಹಾಕಿದರು. ಗಾಂಜಾ, ಡ್ರಗ್ಸ್, ಮಾದಕ ವಸ್ತುಗಳನ್ನು ಹೊಂದಿದ್ದರೆ, ಮಾರಾಟ ಮಾಡಿದರೆ ಅಥವಾ ದಂಧೆ ನಡೆಸುವವರೊಂದಿಗೆ ಸಂಪರ್ಕ ಹೊಂದಿದ್ದರೆ, ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಎಂದು ಡಿಸಿಪಿ ಎಂ.ಮುತ್ತುರಾಜ್ ಪೆಡ್ಲರ್‌ಗಳಿಗೆ ಎಚ್ಚರಿಕೆ ನೀಡಿದರು. ಕಾರ್ಯಾಚರಣೆಯಲ್ಲಿ ಎಸಿಪಿಗಳಾದ ಎಂ.ಎನ್. ಶಶಿಧರ್, ಎಂ. ಶಿವಶಂಕರ್, ಎಸ್.ಇ. ಗಂಗಾಧರಸ್ವಾಮಿ, ಸಿಸಿಬಿ ಎಸಿಪಿ ಸಿ.ಕೆ. ಅಶ್ವಥನಾರಾಯಣ, ಎಲ್ಲಾ ಠಾಣೆಗಳ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ಗಳು ಪಾಲ್ಗೊಂಡಿದ್ದರು. ಇತ್ತೀಚೆಗಷ್ಟೇ ಮನೆಗಳಿಗೆ ದಾಳಿ ಮಾಡಿ ರೌಡಿಗಳನ್ನು ಕರೆಂದು ಡ್ರಿಲ್ ಮಾಡಿ ಬಾಲ ಬಿಚ್ಚದಂತೆ ಎಚ್ಚರಿಕೆ ನೀಡಿದ್ದ ಪೊಲೀಸ್ ಆಯುಕ್ತ ಬಿ. ರಮೇಶ್ ಇದೀಗ ಗಾಂಜಾ ಪೆಡ್ಲರ್‌ಗಳಿಗೂ ಶಾಕ್ ನೀಡಿ, ದಂಧೆಗೆ ಕಡಿವಾಣ ಹಾಕಲು ಮುಂದಾಗಿದ್ದಾರೆ. ಈ ಹಿಂದೆ ಗಾಂಜಾ ಪ್ರಕರಣಗಳಲ್ಲಿ ಭಾಗಿಯಾಗಿದ್ದವರ ಚಲನ-ವಲನದ ಬಗ್ಗೆ ನಿಗಾ ವಹಿಸುತ್ತಿರುವ ಖಾಕಿ ಪಡೆ, ಅವರ ಸಹಚರರಿಗೂ ಎಚ್ಚರಿಕೆ ನೀಡುತ್ತಿದೆ. ಕಾಲೇಜುಗಳು, ಲಿಕ್ಕರ್ ಶಾಪ್‌ಗಳು, ಹಾಸ್ಟೆಲ್‌ಗಳು, ಪೇಯಿಂಗ್ ಗೆಸ್ಟ್‌ಗಳ ಸುತ್ತಮುತ್ತಲ ಅಂಗಡಿ-ಮುಂಗಟ್ಟುಗಳಲ್ಲಿ ಗಾಂಜಾ, ಅಫೀಮು ಮತ್ತು ಬರುವ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಸಂಶಯದ ಹಿನ್ನೆಲೆಯಲ್ಲಿ ಆಯಾಯ ಠಾಣೆಗಳ ಮಫ್ತಿ ಪೊಲೀಸರು ಸೂಕ್ಷ್ಮವಾಗಿ ನಿಗಾ ವಹಿಸಿದ್ದಾರೆ.

ಖಾಸಗಿ ಸಂಸ್ಥೆಗೆ ಒಪ್ಪಿಸಲು ಚಿಂತನೆ

ಕುಡಿಯುವ ನೀರು ಸರಬರಾಜಿನಲ್ಲಿ ಉಂಟಾಗುವ ಎಲ್ಲಾ ಬಗೆಯ ಸಮಸ್ಯೆಗಳನ್ನು ಖಾಸಗಿ ಸಂಸ್ಥೆ ಪರಿಹರಿಸಿಕೊಂಡು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ಕಾರ್ಯನಿರ್ವಹಿಸಲಿದೆ. ಜಲಶುದ್ಧೀಕರಣ ಘಟಕಗಳಲ್ಲಿ ಕ್ಲೋರಿನೇಷನ್ ನಿರ್ವಹಣೆ, ಯಂತ್ರೋಪಕರಣಗಳ ಅಳವಡಿಕೆ ಹಾಗೂ ಸರಬರಾಜು ಸಂಬಂಧ ಖಾಸಗಿ ಸಂಸ್ಥೆ ಕೆಲಸ ಮಾಡಲಿದೆ. ಮಂಗಳೂರಿನಲ್ಲಿ ನೀರು ಸರಬರಾಜು ಖಾಸಗಿ ಕಂಪನಿಯೊಂದು ನೀರು ಸರಬರಾಜು ಕಾರ್ಯ ನಿರ್ವಹಿಸುತ್ತಿದ್ದು, ಅದೇ ಮಾದರಿಯಲ್ಲಿ ಮೈಸೂರಿನಲ್ಲಿಯೂ ಖಾಸಗಿ ಸಂಸ್ಥೆ 3 ವರ್ಷಗಳ ಅವಧಿಗೆ ನಿರ್ವಹಣೆ ಜವಾಬ್ದಾರಿ ನೀಡುವ ಯೋಜನೆ ಇದೆ. ಗುಜರಾತ್‌ನಲ್ಲಿಯೂ ಖಾಸಗಿ ಸಂಸ್ಥೆಗಳೇ ನೀರು ಸರಬರಾಜು ನಿರ್ವಹಣೆ ವಹಿಸಿದ್ದು, ವ್ಯತ್ಯಯ ಉಂಟಾಗದಂತೆ ನಿಭಾಯಿಸುತ್ತಿವೆ. ಈ ಸಂಬಂಧ ಪಾಲಿಕೆ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಸೂಕ್ತ ನಿರ್ಧಾರಕ್ಕೆ ಬರಲಾಗುವುದು ಎಂದು ಮೇಯರ್ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆಯೇನು: ಮೈಸೂರಿನಲ್ಲಿ ನೀರು ಸರಬರಾಜು ಸಂಬಂಧ ಒಂದೆರಡು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ನೀರು ಪೂರೈಕೆ ಹಾಗೂ ಕುಡಿಯುವ ನೀರಿನ ಕೊರತೆಯಿಲ್ಲ. ಬೆಳಗೊಳ ನೀರು ಸರಬರಾಜು ಘಟಕದಿಂದ 40 ಎಂಎಲ್‌ಡಿ(ಮಿಲಿಯನ್ ಲೀಟರ್ ಪರ್ ಡೇ), ಹೊಂಗಳ್ಳಿ ಘಟಕದಿಂದ 115 ಎಂಎಲ್‌ಡಿ, ಮೇಳಾಪುರದಿಂದ 85 ಎಂಎಲ್‌ಡಿ ಹಾಗೂ ಕಬಿನಿಯಿಂದ 60 ಎಂಎಲ್‌ಡಿ ಸೇರಿ ಪ್ರತಿನಿತ್ಯ ಮೈಸೂರು ನಗರಕ್ಕೆ 300 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದೆ ಎಂದು ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಖರ್ಚು ಜಾಸ್ತಿ: ನೀರು ಸರಬರಾಜು ನಿರ್ವಹಣೆಯನ್ನು ಖಾಸಗಿ ಸಂಸ್ಥೆಗೆ ನೀಡುವುದರಿಂದ ಖರ್ಚು ಜಾಸ್ತಿಯಾಗುವ ಸಾಧ್ಯತೆ ಇದೆ. ಸದ್ಯಕ್ಕೆ ಪ್ರತಿ ತಿಂಗಳು ಸುಮಾರು 4-5 ಕೋಟಿ ರೂ.ಖರ್ಚಾಗುತ್ತಿದ್ದು, ಖಾಸಗಿ ಸಂಸ್ಥೆಗೆ ನೀಡಿದರೆ ಇನ್ನಷ್ಟು ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ಈಗಾಗಲೇ ಒಂದೆರಡು ಖಾಸಗಿ ಸಂಸ್ಥೆಗಳು ಮನವಿ ಮಾಡಿದ್ದು, ಖರ್ಚು-ವೆಚ್ಚದ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿದೆ. ಪ್ರಸ್ತಾವನೆ ಪರಿಶೀಲಿಸಿ ನಂತರ ಖಾಸಗಿ ಸಂಸ್ಥೆಗೆ ನೀಡಬೇಕೇ ಇಲ್ಲವೇ ಎಂಬುದನ್ನು ಚರ್ಚಿಸಿ ನಿರ್ಧರಿಸಲಾಗುವುದು ಎಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ ಮಾಹಿತಿ ನೀಡಿದರು.

ಚಿರತೆ ಸೆರೆಗೆ ಅರಣ್ಯ ಇಲಾಖೆ ಹರಸಾಹಸ

ಚಿರತೆ ಈ ಮೂರು ಪ್ರಕರಣದಲ್ಲಿ ಬಲಿ ಪಡೆದಿದೆ ಎಂದು ಅಂದಾಜಿಸಲಾಗಿದೆ. ಹಾಗಾಗಿ ಅರಣ್ಯ ಇಲಾಖೆಯ ಸಿಬ್ಬಂದಿಗಳು ಚಿರತೆ ಸೆರೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಚಹರೆ ಪತ್ತೆಹಚ್ಚಲು ಸೂಚನೆ: ಮೂರು ತಿಂಗಳಲ್ಲೇ ನಾಲ್ಕು ಮಂದಿ ಬಲಿಯಾದ ಹಿನ್ನೆಲೆಯಲ್ಲಿ ಜನರ ಮೇಲೆರಗುತ್ತಿರುವ ಚಿರತೆ ಚಹರೆ ಪತ್ತೆಗೆ ಸೂಚನೆ ನೀಡಲಾಗಿದೆ. ಇದರಿಂದ ಸಿದ್ದಮ್ಮ ಬಲಿಯಾದ ಸ್ಥಳದ ಸುತ್ತಮುತ್ತ 12 ಕ್ಯಾಮರಾ ಟ್ರ್ಯಾಪ್, ಜಯಂತ್ ಮೃತದೇಹ ಸಿಕ್ಕಿದ ಸ್ಥಳದ ಅಜುಬಾಜುಲ್ಲಿ 4 ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ. ಅಲ್ಲದೆ, 5-6 ಬೋನ್ ಇಡಲಾಗಿದೆ. ಮಲ್ಲಿಕಾರ್ಜುನ ಬೆಟ್ಟದ ಚಿರತೆ ಸೆರೆ ಹಿಡಿಯಲು ಅನುಸರಿಸಿದಂತೆ ತುಮಕೂರಿನಿಂದ ದೊಡ್ಡ ಬೋನ್ ತಂದು, ಅದನ್ನು ಕೊಟ್ಟಿಗೆ ಮಾದರಿಯಲ್ಲಿ ಹುಲ್ಲು, ಸೊಪ್ಪಿನಿಂದ ಮುಚ್ಚಿ ಚಿರತೆ ಸೆರೆಯಲು ತಂತ್ರ ಹೂಡಲಾಗಿದೆ.

ಪಾಳು ಭೂಮಿಯಲ್ಲಿನ ಪೊದೆ ತೆರವಿಗೆ ಮನವಿ

ಚಿರತೆ ಹಾವಳಿ ಇರುವ ತಿ.ನರಸೀಪುರ ತಾಲೂಕಿನ ಹೊರಳಹಳ್ಳಿ ಗ್ರಾಮವೂ ಸೇರಿದಂತೆ ವಿವಿಧೆಡೆ ಕೆಲವರು ಹತ್ತಾರು ಎಕರೆ ಭೂಮಿ ಖರೀದಿಸಿ ಪಾಳು ಬಿಟ್ಟಿದ್ದಾರೆ. ಈ ಭೂಮಿಯಲ್ಲಿ ಲಂಟಾನ ಸೇರಿದಂತೆ ದಟ್ಟ ಪೊದೆ ಬೆಳೆದುನಿಂತಿದ್ದು, ಕಿರು ಅರಣ್ಯದಂತೆ ಕಂಡುಬರುತ್ತಿದೆ. ಈ ಪ್ರದೇಶ ಚಿರತೆ ಆವಾಸ ಸ್ಥಾನವಾಗಿ ಮಾರ್ಪಟ್ಟಿದ್ದು, ಜನರ ಮೇಲೆ ದಾಳಿ ಮಾಡಿ ಪೊದೆಯಲ್ಲಿ ಅಡಗಿಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಪಾಳುಬಿಟ್ಟಿರುವ ಭೂಮಿಯಲ್ಲಿ ಬೆಳೆದಿರುವ ಪೊದೆಗಳ ತೆರವಿಗೆ ನೋಟೀಸ್ ನೀಡುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಈ ಸುಧಾಕರ್‌ನ ಸೋಲಿಸಿ!

ಚಿಕ್ಕಬಳ್ಳಾಪುರ ಜನ ಯಾರಿಗೆ ಹೇಳುತ್ತೀರಿ ಅವರಿಗೆ ಟಿಕೆಟ್ ಕೊಡುತ್ತೇನೆ. ಆದರೆ ಈ ಸುಧಾಕರ್ ಮಾತ್ರ ಗೆಲ್ಲಬಾರದು ಎಂದು ಹೇಳಿದರು. ನಾನು ಕೋಲಾರದಲ್ಲಿ ನಿಲ್ಲುತ್ತೀನೋ ಇಲ್ಲೋ.. ಅವರಿಗ್ಯಾಕೆ. ನನ್ನ ಸ್ಪರ್ಧೆಗೂ ಯಡಿಯೂರಪ್ಪಗೆ ಏನು ಸಂಬಂಧ ಎಂದು ಯಡಿಯೂರಪ್ಪ ವಿರುದ್ಧ ಸಿದ್ದರಾಮಯ್ಯ ಟಾಂಗ್ ನೀಡಿದ್ದಾರೆ.

ಆಪರೇಷನ್ ಕಮಲಕ್ಕೆ ಬಲಿಯಾಗಿ ಬಾಂಬೆಗೆ ಓಡಿ ಹೋಗಿದ್ದ ಸುಧಾಕರ್ ಇಂದು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾನೆ ಎಂದು ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಕಿಡಿಕಾರಿದ್ದಾರೆ. ಅಂದು ಭ್ರಷ್ಟಾಚಾರ ನಡೆಯುತ್ತಿದ್ದಾಗಲೇ ನಮ್ಮ ಜೊತೆಯಲ್ಲೇ ಇದ್ದ ಸುಧಾಕರ್ ಈಗ ಮಾತನಾಡುತ್ತಿದ್ದಾನೆ. ಅಂದು ಸುಮ್ಮನಿದ್ದ ಆಸಾಮಿ ಈಗ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾನೆ ಎಂದು ಟಾಂಗ್ ನೀಡಿದ್ದಾರೆ.

ಕಾಯಕ ಸಮಾಜಗಳ ಒಕ್ಕೂಟದ ಸಭೆಯಲ್ಲಿ ಕೆರಳಿಸಿದ ಮೋದಿ ಗುಲಾಮರಾ... ಮಹೇಶ್‌ಚಂದ್ರಗುರು ಪದ ಬಳಕೆ

● ವೇದಿಕೆ ಮುಂದೆ ನುಗ್ಗಿ ಆಕ್ರೋಶ ವ್ಯಕ್ತಪಡಿಸಿದ ಮುಖಂಡರು ● ಸಮಾಜದ ಅಭಿವೃದ್ಧಿ ಬಗ್ಗೆ ಮಾತು ಬಿಟ್ಟು ಮೋದಿ ಬಗ್ಗೆ ಟೀಕೆ ಏಕೆ?



ಮೈಸೂರು, ಜ.23(ಆರ್‌ಕೆಬಿ)– ಮೈಸೂರಿನಲ್ಲಿ ಸೋಮವಾರ ನಡೆದ ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯ ಪ್ರತಿನಿಧಿಗಳ ಮಹಾ ಅಧಿವೇಶನದಲ್ಲಿ ಪ್ರೊ.ಮಹೇಶ್ ಚಂದ್ರಗುರು ಅವರು ಆಡಿದ ಮಾತಿನಿಂದ ಸಭೆಯಲ್ಲಿ ಕೆಲ ಕಾಲ ಗದ್ದಲ, ಗೊಂದಲದ ವಾತಾವರಣ ಉಂಟಾಯಿತು.

ಒಕ್ಕೂಟದ ಮಾಜಿ ಅಧ್ಯಕ್ಷರು ಆದ ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಅವರು ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಸಮಾವೇಶ ಆಯೋಜಿಸಿದ್ದರು. ಈ ವೇಳೆ ಪ್ರೊ.ಮಹೇಶ್ ಚಂದ್ರ ಗುರು ತಮ್ಮ ಭಾಷಣದ ಮಧ್ಯೆ, ಪ್ರಧಾನಿ ಮೋದಿ ವಿರುದ್ಧ ಟೀಕಾ ಪ್ರಹಾರ ನಡೆಸಿದರು. ಅದಕ್ಕೆ ಚಾಮರಾಜ ನಗರದ ಗಾಣಿಗ ಸಮಾಜದ ಮುಖಂಡರಾದ ಜಯರಾಮಶೆಟ್ಟಿ, ಜಿ.ಅಂಕಶೆಟ್ಟಿ ಇನ್ನಿತರರು ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸಿದರು. ಕಾಯಕ ಸಮಾಜಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸುವ ಸಭೆಯಲ್ಲಿ ರಾಜಕೀಯ ಪಕ್ಷಗಳನ್ನು ಎಳೆದು ತರುವುದು ಸರಿಯಲ್ಲ. ಪ್ರಧಾನಿ ಮೋದಿ ಬಗ್ಗೆ ಟೀಕೆ ಸರಿಯಲ್ಲ. ಕೂಡಲೇ ಭಾಷಣ ನಿಲ್ಲಿಸುವಂತೆ ಆಗ್ರಹಿಸಿ, ಆಕ್ರೋಶ ವ್ಯಕ್ತಪಡಿಸಿದರು. ಮಹೇಶ್ ಚಂದ್ರಗುರು ಅವರು ಅದಕ್ಕೆ ಸಮಜಾಯಿಷಿ ನೀಡಲು ಮುಂದಾದರೂ ಗದ್ದಲ ಮುಂದುವರಿಯಿತು.

ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಸಮಾಜದ ಅಭಿವೃದ್ಧಿ ಆಗಿದೆಯೇ, ಈಗ ನೆಹರು ಆಡಳಿತ ಬೇಕು ಎಂಬುದು ಸರಿಯೇ? ಎಂದು ಮುಖಂಡರು ಪ್ರಶ್ನಿಸಿದರು.

ಸಭೆಯಲ್ಲಿ ಮಹೇಶ್ ಚಂದ್ರಗುರು ಹೇಳಿದ್ದಿಷ್ಟು, ಜಾಗತೀಕರಣ ಉಳ್ಳವರಿಗೆ ಮಾತ್ರ ಅನುಕೂಲ ಮಾಡಿ ಕೊಟ್ಟಿದೆ. ಬ್ಯಾಂಕ್‌ಗಳು ಸಾಲ ನೀಡುತ್ತಿಲ್ಲ. ಸರ್ಕಾರಕ್ಕೆ ಮತಗಳು ಬೇಕಿದೆಯೇ ಹೊರತು ಅಭಿವೃದ್ಧಿ ಬೇಕಾಗಿಲ್ಲ. ಸರ್ಕಾರ ಪುರೋಹಿತಶಾಹಿ, ಬಂಡವಾಳಶಾಹಿಗಳ ನಿಯಂತ್ರಣದಲ್ಲಿದೆ. ಹೀಗಾಗಿಯೇ ಶೂದ್ರರು, ದಲಿತರು ಯಥಾಸ್ಥಿತಿಯಲ್ಲಿಯೇ ಉಳಿದಿದ್ದಾರೆ. ಇನ್ನೂ ಜಾತಿ ವಿನಾಶವಾಗಿಲ್ಲ. 'ಕರ್ಮಯೋಗವನ್ನೇ ನಂಬಿ ಕರ್ನಾಟಕದ ಆರ್ಥಿಕತೆಯ ಬೆನ್ನೆಲುಬಾಗಿರುವ ಕಾಯಕ ಸಮಾಜದ ಕೊಡುಗೆಯನ್ನು ಗುರುತಿಸಿ ಅವರನ್ನು ಮೇಲೆತ್ತಲು ಆಳುವವರಿಗೆ ಕಣ್ಣೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಸಮಾನತೆಯನ್ನು ಬಿತ್ತುವ ಜಾತಿ ಮೂಲದಿಂದ ಬಂದ ವೃತ್ತಿಗಳನ್ನು ಏಕೆ ಕಾಯಕ ಸಮಾಜಗಳು ಮಾಡಬೇಕು. ಸಾಮಾಜಿಕ ಪರಿವರ್ತನೆಯಾಗಬೇಕೆಂದರೆ ಕೂಡಲೇ ಆ ವೃತ್ತಿಗಳನ್ನು ತೊರೆಯಿರಿ ಎಂದರು. ನರೇಂದ್ರ ಮೋದಿ ಅವರು ಖಾಸಗೀಕರಣದಿಂದ ದಲಿತರು, ಶ್ರಮಿಕರು ಹಾಗೂ ಅಸಹಾಯಕರನ್ನು ಕೊಲ್ಲುತ್ತಿದ್ದಾರೆ. ನಮಗೆ ಬೇಕಿರುವುದು ನೆಹರೂ ಅಂಥ ನಾಯಕತ್ವ. ಅವರು ಎಲ್ಲ ವಲಯಗಳನ್ನೂ ರಾಷ್ಟ್ರೀಕರಣ ಮಾಡಿ ಸಮಾಜಗಳಿಗೆ ನೆರವಾದರು. ಉದ್ಯೋಗ ಸೃಷ್ಟಿಸಿದರು. ಆದರೆ, ಮೋದಿ ಅವರು ಬಂಡವಾಳಶಾಹಿಗಳಿಗೆ ಮಾರಾಟ ಮಾಡಿ ವ್ಯವಸ್ಥೆಯನ್ನು ರಾಕ್ಷಸೀಕರಣ ಮಾಡುತ್ತಿದ್ದಾರೆ ಎಂದು ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಮಹೇಶ್ ಚಂದ್ರಗುರು ಅವರ ಈ ಮಾತಿನಿಂದ ಅಸಮಾಧಾನಗೊಂಡ ಚಾಮರಾಜನಗರ ಜಿಲ್ಲೆಯ ಗಾಣಿಗ ಮುಖಂಡರಾದ ಜಯರಾಮಶೆಟ್ಟಿ, ಎಸ್. ಅಂಕಶೆಟ್ಟಿ ಇನ್ನಿತರರು ಮಹೇಶ್‌ಚಂದ್ರ ಗುರು ಅವರ ವಿರುದ್ಧ ಹರಿಹಾಯ್ದರು. ಇಲ್ಲಿ ರಾಜಕೀಯ ಬೆರೆಸಬೇಡಿ ಎಂದು ಆಗ್ರಹಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಮಹೇಶ್‌ಚಂದ್ರ ಗುರು, 'ತಾತ್ವಿಕ ವಿರೋಧವಷ್ಟೇ ಮಾಡಿ, ಗಲಾಟೆ ಏಕೆ, ನೀವು ಮೋದಿ ಅವರ ಗುಲಾಮರಾ...' ಎನ್ನುತ್ತಿದ್ದಂತೆಯೇ ವೇದಿಕೆ ಮುಂದೆ ಧಾವಿಸಿ, ಮಹೇಶ್‌ಚಂದ್ರ ಗುರು ವಿರುದ್ಧ ಹರಿಹಾಯ್ದರು. ತಕ್ಷಣ ಕ್ಷಮೆ ಕೇಳುವಂತೆ ಆಗ್ರಹಿಸಿದರು.

ಇದರಿಂದ ಸಭೆಯಲ್ಲಿ ಕೆಲಹೊತ್ತು ಕೋಲಾಹಲ ಉಂಟಾಯಿತು. ಪರಿಸ್ಥಿತಿಯನ್ನು ಅರಿತ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಮಾಜಿ ಎಂಎಲ್‌ಸಿ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮಧ್ಯ ಪ್ರವೇಶಿಸಿ, ಮುಖಂಡರನ್ನು ಸಮಾಧಾನಪಡಿಸಿದರು. ಅವರ ಪರವಾಗಿ ಒಕ್ಕೂಟ ಕ್ಷಮೆ ಕೇಳುವುದಾಗಿ ತಿಳಿಸಿದ ಬಳಿಕ ಸಭೆಯಲ್ಲಿ ವಾತಾವರಣ ತಿಳಿಯಾಯಿತು.

ಕಾಯಕ ಸಮಾಜಗಳ ಒಕ್ಕೂಟದ ರಾಜ್ಯ ಪ್ರತಿನಿಧಿಗಳ ಪರಿಷತ್ ಮಹಾಧಿವೇಶನ

ರಾಜ್ಯದಲ್ಲಿ ಶೇ.60ರಷ್ಟಿರುವ ಕಾಯಕ ಸಮಾಜಗಳು, ಪರಿಶಿಷ್ಟರು ಒಗ್ಗಟ್ಟು ಪ್ರದರ್ಶಿಸಿದರೆ ಲೋಕಸಭೆ, ವಿಧಾನಸಭೆ ನಮ್ಮದಾಗುತ್ತದೆ

ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಅಭಿಮತ



ಮೈಸೂರು, ಜ.23(ಆರ್‌ಕೆಬಿ)– ರಾಜ್ಯದಲ್ಲಿ ಕಾಯಕ ಸಮಾಜದ 2.30 ಕೋಟಿ, ಎಸ್‌ಸಿ, ಎಸ್‌ಟಿಯ 2 ಕೋಟಿ ಸೇರಿ ಒಟ್ಟು 4 ಕೋಟಿ ಜನರು ಒಗ್ಗಟ್ಟು ಪ್ರದರ್ಶಿಸಿದರೆ ಲೋಕಸಭೆ, ವಿಧಾನಸಭೆ ನಮ್ಮದಾಗುತ್ತದೆ. ಇದನ್ನು ಎಲ್ಲರೂ ಮನಗಾಣಬೇಕು ಎಂದು ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಕರೆ ನೀಡಿದರು.


ಮೈಸೂರಿನ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಸೋಮವಾರ ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯ ಪ್ರತಿನಿಧಿಗಳ ಪರಿಷತ್ ವಾರ್ಷಿಕ ಮಹಾ ಅಧಿವೇಶನದಲ್ಲಿ ಮಾತನಾಡಿದ ಅವರು, ಬಸವಣ್ಣನವರು ಹೇಳಿದಂತೆ ಕಾಯಕ ಸಮಾಜಗಳು ಸ್ವಾಭಿಮಾನದ ಸೂಜಿಗಳಾಗಬೇಕು ಎಂದು ಹೇಳುವ ಮೂಲಕ ಕಾಯಕ ಸಮಾಜಗಳಲ್ಲಿ ಒಗ್ಗಟ್ಟು ಮೂಡಿಸಿ, ಕಲ್ಯಾಣ ಸಮಾಜ ನಿರ್ಮಿಸಿದರು. ಅವರ ಆಶಯದಂತೆ ಕಾಯಕ ಸಮಾಜಗಳು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ತಿಳಿಸಿದರು.

ಪ್ರೊ.ಮಹೇಶ್‌ಚಂದ್ರಗುರು ಮಾತನಾಡಿ, ನಾಡಿನ ಆರ್ಥಿಕತೆಗೆ ನಿರ್ಣಾಯಕ ಕೊಡುಗೆ ನೀಡಿರುವ ಕಾಯಕ ಸಮಾಜಗಳಿಗೆ ಇಂದು ಉದ್ಯೋಗ ಸಿಗುತ್ತಿಲ್ಲ. ಆರ್ಥಿಕ ಭದ್ರತೆಯೂ ಇಲ್ಲದೆ ನಿರ್ಲಕ್ಷ್ಯಕ್ಕೊಳಗಾಗಿವೆ. ಈ ಸಮಾಜಗಳ ಸಬಲೀಕರಣ ಮಾಡುವ ಜವಾಬ್ದಾರಿಯನ್ನು ಮರೆತಿರುವ ಸರ್ಕಾರಗಳು ಬಂಡವಾಳಶಾಹಿಗಳ ನಿಯಂತ್ರಣದಲ್ಲಿವೆ. ಹೀಗಾಗಿ ಕಾಯಕ ಸಮಾಜಗಳು ಬಲಿಪಶುಗಳಾಗಿವೆ. ಇದನ್ನು ಮನಗಂಡು ಈ ಸಮಾಜಗಳು ಶಿಕ್ಷಣ ಮತ್ತು ಉದ್ಯೋಗಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಪ್ರೊ.ಪಿ.ವಿ.ನಂಜರಾಜ ಅರಸು ಮಾತನಾಡಿ, ಅಧಿಕಾರದಲ್ಲಿರುವವರು ನಮ್ಮ ಶೋಷಣೆ ಮಾಡುತ್ತಾರೆ. ಅಧಿಕಾರದಲ್ಲಿದ್ದಾಗ ಕೇವಲ ಘೋಷಣೆ ಮಾಡುತ್ತಾರೆ. ನಮಗೆ ಘೋಷಣೆ ಬೇಡ, ಕೆಲಸ ಆಗಬೇಕು. ರಾಜಕೀಯ ಪಕ್ಷಗಳು ಕಾಯಕ ಸಮಾಜದ ಎಷ್ಟು ಜನರಿಗೆ ಟಿಕೆಟ್ ಕೊಟ್ಟಿದ್ದಾರೆ ಎಂಬುದನ್ನು ಅರಿತುಕೊಳ್ಳಬೇಕು. ಎಲ್ಲರೂ ಒಗ್ಗಟ್ಟಾಗಿ, ಸ್ವಾಭಿಮಾನ ಉಳಿಸಿಕೊಳ್ಳಬೇಕು ಎಂದರು.

ಸಭೆಯಲ್ಲಿ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೆ.ಸಿ.ಪುಟ್ಟಸಿದ್ದಶೆಟ್ಟಿ ಅವರ 'ಹೊಂಗಿರಣ' ಕೃತಿಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಗಾಣಿಗ ಮಹಾಸಭಾದ ರಾಜ್ಯಾಧ್ಯಕ್ಷ ಡಾ.ವಿಜಯಕುಮಾರ್, ಒಕ್ಕೂಟದ ಕಾರ್ಯಾಧ್ಯಕ್ಷ ಶಿವಪುತ್ರಪ್ಪ ಇಟಗಿ, ಪ್ರಧಾನ ಕಾರ್ಯದರ್ಶಿ ಸಿ.ಎನ್.ಲಕ್ಷ್ಮೀಕಾಂತ್, ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್. ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್ ಇನ್ನಿತರರು ಉಪಸ್ಥಿತರಿದ್ದರು.

ಸೊಸೈಟಿಯಾಗಿ 'ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆ' ಪರಿವರ್ತಿಸುವ ಪ್ರಸ್ತಾಪಕ್ಕೆ ಆಕ್ಷೇಪ



ಮೈಸೂರು,ಜ.23(ಪಿಎಂ)– ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯನ್ನು ಸೊಸೈಟಿಯಾಗಿ ಪರಿವರ್ತಿಸಲು ಮುಂದಾಗಿರುವ ಸರ್ಕಾರದ ನಡೆ ಖಂಡಿಸಿರುವ ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ (ಐಎನ್‌ಟಿಯುಸಿ) ಕರ್ನಾಟಕ ರಾಜ್ಯ ಶಾಖೆ, ಸೊಸೈಟಿಯಾದಲ್ಲಿ ವಿಮಾದಾರರು, ಮತ್ತವರ ಕುಟುಂಬದವರು ಸಮರ್ಪಕ ವೈದ್ಯಕೀಯ ಸೇವೆಗಳಿಂದ ವಂಚಿತರಾಗಲಿದ್ದಾರೆ ಎಂದು ಪ್ರತಿಪಾದಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಐಎನ್‌ಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ವೆಂಕಟೇಶ್, ಕಾರ್ಮಿಕ ರಾಜ್ಯ ವಿಮಾ ಯೋಜನೆಯ ವೈದ್ಯಕೀಯ ಸೇವೆಗಳ ಇಲಾಖೆಯು, ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ. ಇದನ್ನು ಸೊಸೈಟಿಯಾಗಿ ಪರಿವರ್ತಿಸಲು ಸರ್ಕಾರ ಮುಂದಾಗಿದೆ. ಇದರಿಂದ ವಿಮಾದಾರರಿಗೆ ಭಾರೀ ಅನಾನುಕೂಲ ಎದುರಾಗಲಿದೆ ಎಂದು ತಿಳಿಸಿದರು.

ಜೊತೆಗೆ ಅಲ್ಲಿನ ಸಿಬ್ಬಂದಿ–ಅಧಿಕಾರಿ ವರ್ಗದ ಹಿತದೃಷ್ಟಿಯಿಂದಲೂ ಇದು ಸೂಕ್ತವಲ್ಲ. ರಾಜ್ಯದ 45.76 ಲಕ್ಷ ಕಾರ್ಮಿಕರ ಮಾಸಿಕ ವೇತನದಲ್ಲಿ ವಂತಿಗೆ ಕಡಿತದಿಂದ ನಡೆಯುತ್ತಿರುವ ಇಲಾಖೆ ಇದಾಗಿದೆ. ಸೊಸೈಟಿಯಾದಲ್ಲಿ ಅನ್ಯ ರಾಜ್ಯದವರಿಗೆ ಹುದ್ದೆಗಳನ್ನು ನೀಡುವ ಸಾಧ್ಯತೆ ಹೆಚ್ಚಿದೆ. ವಿಮಾದಾರರು ಮತ್ತು ಅಲ್ಲಿನ ನೌಕರರು ಇಬ್ಬರ ದೃಷ್ಟಿಯಲ್ಲೂ ಸೊಸೈಟಿಯಾಗಿ ಪರಿವರ್ತಿಸುವುದು ಸೂಕ್ತವಲ್ಲ. ಹಾಗಾಗಿ ಸರ್ಕಾರ ಈ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಒತ್ತಾಯಿಸಿದರು.

ಸ್ವಚ್ಛತಾ ಕಾರ್ಮಿಕರಿಗೆ ಶೋಷಣೆ: ಐಎನ್‌ಟಿಯುಸಿ ಜಿಲ್ಲಾಧ್ಯಕ್ಷ ಎಂ.ಅನಿಲ್ ಮಾತನಾಡಿ, ಮೈಸೂರಿನ ರೈಲ್ವೆ ಡಿಆರ್‌ಎಂ ಕಚೇರಿ ಮತ್ತು ಮೈಸೂರು ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್‌ಗಳಲ್ಲಿ ಹೊರಗುತ್ತಿಗೆಯಡಿ ಸುಮಾರು 80 ಮಂದಿ ಸ್ವಚ್ಛತಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಿಗೆ ಕನಿಷ್ಠ ವೇತನ ನಿಗದಿ ಆಗಿದ್ದರೂ ಗುತ್ತಿಗೆದಾರರು ಪಾವತಿ ಮಾಡದೇ ವಂಚಿಸುತ್ತಿದ್ದಾರೆ ಎಂದು ಆರೋಪಿಸಿದರು. ಕರ್ನಾಟಕ ಸ್ಟೇಟ್ ರೈಲ್ವೆ ಕಾಂಟ್ರ್ಯಾಕ್ಟ್ ಮಜ್ದೂರ್ ಸಂಘದ ಅಧ್ಯಕ್ಷ ಎನ್.ವೆಂಕಟಾಚಲಪತಿ, ಮುಖಂಡ ಮಹದೇವ್ ಗಾಣಿಗ ಗೋಷ್ಠಿಯಲ್ಲಿದ್ದರು.

ಶೀಘ್ರ ಡಾ.ವಿಷ್ಣುವರ್ಧನ್ ಪುಣ್ಯಭೂಮಿ ವಿವಾದ ಇತ್ಯರ್ಥಕ್ಕೆ ಒತ್ತಾಯ



ಮೈಸೂರು,ಜ.23(ಪಿಎಂ)– ಮೈಸೂರು ತಾಲೂಕಿನ ಉದ್ಬೂರು ಗೇಟ್ ಬಳಿ ಹಲಾಳು ಗ್ರಾಮದಲ್ಲಿ ಜ.29ರಂದು ಡಾ.ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ ಮಾಡುತ್ತಿರುವ ರಾಜ್ಯ ಸರ್ಕಾರಕ್ಕೆ ವಿಎಸ್‌ಎಸ್ ವಿಷ್ಣು ಸೇನಾ ಸಂಘಟನೆ ಧನ್ಯವಾದ ಅರ್ಪಿಸಿದೆ.

ಜೊತೆಗೆ ಬೆಂಗಳೂರಿನ ಅಭಿಮಾನ್ ಸ್ಟುಡಿಯೋ ಆವರಣದಲ್ಲಿನ ಡಾ.ವಿಷ್ಣುವರ್ಧನ್ ಸಮಾಧಿ ಸ್ಥಳವನ್ನು ಅವರ ಪುಣ್ಯಭೂಮಿಯಾಗಿ ರೂಪಿಸುವ ಸಂಬಂಧ ಏರ್ಪಟ್ಟಿರುವ ವಿವಾದವನ್ನು ಶೀಘ್ರ ಬಗೆಹರಿಸಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ರಾಜ್ಯಾಧ್ಯಕ್ಷ ರಾಜುಗೌಡ, ವಿಷ್ಣುವರ್ಧನ್ ಪುಣ್ಯಭೂಮಿಗೆ ಅಭಿಮಾನ್ ಸ್ಟುಡಿಯೋ ಆವರಣದಲ್ಲಿನ 10 ಗುಂಟೆ ಭೂಮಿ ಒದಗಿಸಲು ಎದ್ದಿರುವ ವಿವಾದವನ್ನು ಸರ್ಕಾರ ಶೀಘ್ರ ಬಗೆಹರಿಸಬೇಕು ಎಂದು ಒತ್ತಾಯಿಸಿದರು.


ಸದರಿ ಭೂಮಿ ಸಂಬಂಧ ಹೈಕೋರ್ಟ್‌ನಲ್ಲಿರುವ ವ್ಯಾಜ್ಯ ಇತ್ಯರ್ಥಪಡಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ನಮ್ಮ ಸಂಘಟನೆ ಹಾಗೂ ಡಾ.ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್ ಜೊತೆಗೂಡಿ ಸುಪ್ರೀಂಕೋರ್ಟ್ ಮೊರೆ ಹೋಗಬೇಕಾಗುತ್ತದೆ ಎಂದು ಎಚ್ಚರಿಸಿದರು. ಡಾ.ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ ಪ್ರಯುಕ್ತ ಜ.24ರಂದು ಸಂಜೆ 5ಕ್ಕೆ ಹುಣಸೂರು ತಾಲೂಕು ಜಾಬಗೆರೆಯಲ್ಲಿ ಡಾ.ವಿಷ್ಣುವರ್ಧನ್ ಅವರ ನೆನೆಪಿನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಸಂಘಟನೆಯ ಜಿಲ್ಲಾ ಕಾರ್ಯಾಧ್ಯಕ್ಷ ಸುಪ್ರೀತ್ ಎಸ್.ಗೌಡ, ಜಿಲ್ಲಾ ಉಪಾಧ್ಯಕ್ಷ ಸಿದ್ದರಾಜು, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ವಿಮಾನ ಪ್ರಯಾಣದ ಅನುಭವ ನೀಡುವ

'ಅಂಬಾರಿ ಉತ್ಸವ್' ಐಷರಾಮಿ ಬಸ್ ಸೇವೆ ಶೀಘ್ರ ಆರಂಭ

● ಕೆಎಸ್‌ಆರ್‌ಟಿಸಿ ಅಧ್ಯಕ್ಷ ಚಂದ್ರಪ್ಪ ಮಾಹಿತಿ ● ಅಂಬಾರಿ ಉತ್ಸವ್, ಎಲೆಕ್ಟ್ರಿಕಲ್ ಬಸ್ ಸೇರಿದಂತೆ ಶೀಘ್ರ ಸಾವಿರ ಹೊಸ ಬಸ್‌ಗಳ ಸೇವೆ ● ಮೈಸೂರು ನಗರ–ಗ್ರಾಮಾಂತರ ವಿಭಾಗ ವಿಲೀನದ ನಂತರ ನಷ್ಟ ಕಡಿತ

ಮೈಸೂರು,ಜ.23(ಎಂಟಿವೈ)– ಪ್ರಯಾಣಿಕರಿಗೆ ವಿಮಾನದ ಪ್ರಯಾಣದ ಅನುಭವ ನೀಡುವ, 20 ಅಂಬಾರಿ ಉತ್ಸವ್ ಹಾಗೂ 50 ಎಲೆಕ್ಟ್ರಿಕಲ್ ಬಸ್ ಸೇರಿದಂತೆ ಒಂದು ಸಾವಿರ ಬಸ್ ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ ತಿಳಿಸಿದ್ದಾರೆ.



ಮೈಸೂರಿನ ಬನ್ನಿಮಂಟಪದ ಸಾರಿಗೆ ಸಂಸ್ಥೆಯ ವಿಭಾಗೀಯ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸಾರಿಗೆ ಸಂಸ್ಥೆಯಲ್ಲಿ ಐರಾವತ, ಅಂಬಾರಿ ಬಸ್ ಸೇರಿದಂತೆ ವಿವಿಧ ಬಸ್ಸುಗಳು ಪ್ರಯಾಣಿಕರ ಮನಗೆದ್ದಿವೆ. ಇದೀಗ ಸಾರಿಗೆ ಸಂಸ್ಥೆ ಮತ್ತೊಂದು ಹೆಜ್ಜೆ ಮುಂದೆ ಹೋಗಿ ಪ್ರಯಾಣಿಕರಿಗೆ ನೀಡುತ್ತಿರುವ ಸೇವೆಯ ಗುಣಮಟ್ಟವನ್ನು ಹೆಚ್ಚಿಸಿ, ವಿಮಾನದಲ್ಲಿ ಪ್ರಯಾಣಿಸುವ ಅನುಭವ ನೀಡಲು 'ಅಂಬಾರಿ ಉತ್ಸವ್' ಹೊಸ ಐಷಾರಾಮಿ ಬಸ್‌ಗಳ ಖರೀದಿಸಲಾಗುತ್ತಿದೆ. ಮೊದಲ ಹಂತದಲ್ಲಿ 20 'ಅಂಬಾರಿ ಉತ್ಸವ್' ಶೀಘ್ರದಲ್ಲೇ ಸೇವೆ ಆರಂಭಿಸುತ್ತವೆ ಎಂದರು.

ಇಂಧನ ಬಳಕೆ ಕಡಿಮೆ ಮಾಡುವ ನಿಟ್ಟಿನಲ್ಲಿ ಎಲೆಕ್ಟ್ರಿಕಲ್ ಬಸ್ ಸಂಚಾರ ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಪ್ರಾಯೋಗಿಕ ಸಂಚಾರದಲ್ಲಿ ಎಲೆಕ್ಟ್ರಿಕಲ್ ಬಸ್ ಪ್ರಯಾಣಿಕರ ಮನಗೆದ್ದಿದೆ. ಮೈಸೂರು –ಬೆಂಗಳೂರು ನಡುವೆ ಸಂಚರಿಸುತ್ತಿರುವ ಎಲೆಕ್ಟ್ರಿಕಲ್ ಬಸ್‌ನಲ್ಲಿ ಪ್ರಯಾಣಿಸಲು ಜನ ಉತ್ಸುಕರಾಗಿದ್ದಾರೆ. ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ನಿಟ್ಟಿನಲ್ಲಿ ಶೀಘ್ರದಲ್ಲೇ ಇನ್ನು 50 ಎಲೆಕ್ಟ್ರಿಕಲ್ ಬಸ್ ಸಾರಿಗೆ ಸಂಸ್ಥೆಗೆ ಸೇರಲಿವೆ. ಅಲ್ಲದೆ, ಮುಂಬರುವ ದಿನಗಳಲ್ಲಿ 350 ಎಲೆಕ್ಟ್ರಿಕಲ್ ಬಸ್ ಖರೀದಿಸಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಶೀಘ್ರದಲ್ಲಿ ಹೊಸದಾಗಿ ಸಾವಿರ ಬಸ್: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 20 ಅಂಬಾರಿ ಉತ್ಸವ, 350 ಎಲೆಕ್ಟ್ರಿಕ್ ವಾಹನ, 40 ನಾನ್ ಎಸಿ ಸ್ಲೀಪರ್ (222ವೀಲ್ ಬೇಸ್), 13.5 ಮೀಟರ್ ಉದ್ದದ 4 ಎಸಿ ಸ್ಲೀಪರ್ ಬಸ್, 13.4 ಮೀಟರ್ ಉದ್ದದ 4 ನಾನ್ ಎಸಿ ಸ್ಲೀಪರ್, 50 ಸಿಟಿ ವೆಹಿಕಲ್(ಡಲ್ಟ್), 550 ಕರ್ನಾಟಕ ಸಾರಿಗೆ ವಾಹನಗಳನ್ನು ಖರೀದಿಸಲಾಗುತ್ತದೆ. ಮುಂದಿನ ತಿಂಗಳೊಳಗೆ ಹೊಸ ಬಸ್‌ಗಳು ಸಂಚಾರ ಆರಂಭಿಸಲಿವೆ ಎಂದರು.

3 ಸಾವಿರ ಬಸ್ ಗುಜರಿಗೆ: ರಾಜ್ಯದಲ್ಲಿ ಸಂಚರಿಸುತ್ತಿರುವ 3 ಸಾವಿರ ಬಸ್‌ಗಳನ್ನು ಗುಜರಿಗೆ ಹಾಕಲು ನಿರ್ಧರಿಸಲಾಗಿದೆ. ನಿಯಮಾನುಸಾರ 9 ಲಕ್ಷ ಕಿ.ಮಿ ಸಂಚರಿಸಿದ ಬಸ್‌ಗಳನ್ನು ಸ್ಕ್ರಾಪ್ ಮಾಡಲಾಗುತ್ತದೆ. ಆದರೆ ಕೊರೊನಾ ಹಿನ್ನೆಲೆಯಲ್ಲಿ ಆದಾಯವಿಲ್ಲದ ಕಾರಣ ಕಳೆದ ಎರಡು ವರ್ಷದಿಂದ ಬೇಡಿಕೆಗೆ ಅನುಗುಣವಾಗಿ ಹೊಸ ಬಸ್ ಖರಿದಿಸಲು ಸಾಧ್ಯವಾಗಿರಲಿಲ್ಲ. ಆ ಕಾರಣದಿಂದ 9 ಲಕ್ಷ ಕಿ.ಮಿ ಸಂಚರಿಸಿರುವ 3 ಸಾವಿರ ಬಸ್‌ಗಳನ್ನು ಇಂದಿಗೂ ಬಳಸಿಕೊಳ್ಳಲಾಗುತ್ತಿದೆ. ಶೀಘ್ರದಲ್ಲೇ ಅವುಗಳನ್ನು ಗುಜರಿಗೆ ಹಾಕಿ ಹಂತ ಹಂತವಾಗಿ ಹೊಸ ಬಸ್ ಖರೀದಿಸಲಾಗುತ್ತದೆ ಎಂದು ತಿಳಿಸಿದರು.

ಮೈಸೂರಿಗೆ ಹೊಸ ಬಸ್‌ಗಳು: 50 ಎಲೆಕ್ಟ್ರಿಕ್ ಬಸ್‌ಗಳಲ್ಲಿ ಮೈಸೂರು–ಬೆಂಗಳೂರು, ಬೆಂಗಳೂರು–ಮಡಿಕೇರಿ, ಬೆಂಗಳೂರು–ವಿರಾಜಪೇಟೆ ನಡುವೆ ಸಂಚರಿಸಲಿವೆ. ಇನ್ನಷ್ಟು ಬಸ್‌ಗಳು ಬೆಂಗಳೂರು–ಚಿಕ್ಕಮಗಳೂರು, ದಾವಣ ಗೆರೆ, ಬೆಂಗಳೂರು–ಶಿವಮೊಗ್ಗ ವಲಯಗಳಲ್ಲಿ ಕಾರ್ಯಾಚರಣೆ ಮಾಡಲು ಯೋಜನೆ ರೂಪಿಸಲಾಗಿದೆ. ಎಸಿ ಡ್ರೀಮ್ ಕ್ಲಾಸ್ ಅಂಬಾರಿ ವಾಹನಗಳನ್ನು ಮೈಸೂರು–ತಿರುಪತಿ, ಮೈಸೂರು –ಚೆನ್ನೈ, ಹೈದರಾಬಾದ್, ಮಂತ್ರಾಲಯ, ಎರ್ನಾಕುಲಂ ಮಾರ್ಗದಲ್ಲಿ ಸಂಚರಿಸಲು ಕ್ರಮಕೈಗೊಳ್ಳಲಾಗಿದೆ. ಮೈಸೂರು ವಿಭಾಗದಲ್ಲಿ ನಾನ್‌ಎಸಿ ಸ್ಲೀಪರ್ ವಾಹನಗಳನ್ನು ಮೈಸೂರು–ಬೆಂಗಳೂರು–ಕ್ಯಾಲಿಕಟ್, ಮೈಸೂರು–ಕುಂದಾಪುರ, ಮೈಸೂರು–ಗೋಕರ್ಣ, ಉಡುಪಿ, ಬೆಳಗಾವಿಯಲ್ಲಿ ಹತ್ತು ವಾಹನಗಳು ಸಂಚರಿಸಲಿವೆ ಎಂದರು.

ವಿಲೀನಗೊಳಿಸಿದ್ದರಿಂದ ನಷ್ಟ ಕಡಿತ: ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗವನ್ನು ವಿಲೀನಗೊಳಿಸಿ ಒಂದೇ ವಿಭಾಗ ಮಾಡಿದ ಮೇಲೆ ನಷ್ಟದ ಪ್ರಮಾಣ ಕಡಿಮೆಯಾಗಿದೆ. 2020–21ರಲ್ಲಿ 161 ಕೋಟಿ, 2021–22ರಲ್ಲಿ 156 ಕೋಟಿ ನಷ್ಟವಾಗಿದ್ದರೆ, ವಿಲೀನಗೊಳಿಸಿದ ಮೇಲೆ 2022–23ರ ಅವಧಿಯಲ್ಲಿ 101 ಕೋಟಿಗೆ ಕುಸಿದಿದೆ. ಅಂದಾಜು 60 ಕೋಟಿ ನಷ್ಟ ಕಡಿಮೆಯಾಗಿದೆ. ಇದೇ ರೀತಿ ಹೆಚ್ಚುವರಿ ಸಿಬ್ಬಂದಿ, ಖರ್ಚಿನ ಪ್ರಮಾಣವನ್ನು ತಗ್ಗಿಸಿದಷ್ಟು ಉಳಿತಾಯವಾಗಲಿದೆ ಎಂದರು.

ಮೈಸೂರು ವಿಭಾಗದಲ್ಲಿ 1072 ವಾಹನಗಳು ಕಾರ್ಯಾಚರಣೆ ಮಾಡುತ್ತಿದ್ದು, ಪ್ರತಿದಿನ 7854 ಟ್ರಿಪ್‌ಗಳು ಇದ್ದು, ನಾಲ್ಕು ಲಕ್ಷಕ್ಕೂ ಹೆಚ್ಚು ಪ್ರಯಾಣಿಕರು ಮತ್ತು ಲಕ್ಷಾಂತರ ವಿದ್ಯಾರ್ಥಿಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪ್ರತಿದಿನ ಸರಾಸರಿ 1.21 ಕೋಟಿ ಸಂಸ್ಥೆ ಆದಾಯ ಗಳಿಸುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ಅಶೋಕ್ ಕುಮಾರ್ ಇದ್ದರು.

ನಾನು ಅಧಿಕಾರಕ್ಕಾಗಿ ರಾಜಕೀಯ ಮಾಡಲ್ಲ

ಶಾಸಕ, ಸಚಿವನಾಗುವ ಕನಸು ಕಾಣದೇ ತಿ.ನರಸೀಪುರ ಅಭಿವೃದ್ಧಿಪಡಿಸಿದ್ದೇನೆ: ಹೆಚ್‌ಸಿಎಂ



ತಿ.ನರಸೀಪುರ, ಜ.23– ಅಧಿಕಾರಕೋಸ್ಕರ ನಾನು ರಾಜಕೀಯ ಮಾಡಲ್ಲ. ಶಾಸಕ, ಸಚಿವನಾಗಬೇಕೆಂಬ ಕನಸು ಕಾಣದೆ ತಿ.ನರಸೀಪುರ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದೇನೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಮಲಿಯೂರು ಗ್ರಾಮದಲ್ಲಿ ಗ್ರಾಪಂ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಹಲವರು ಎಂಎಲ್‌ಎ ಆಗಬೇಕೆಂದು ಕನಸು ಕಾಣುತ್ತಿದ್ದಾರೆ. ಕ್ಷೇತ್ರದ ಜನರು ಎಂಎಲ್‌ಎ, ಮಂತ್ರಿ ಮಾಡಿದ್ದರಿಂದ ಮನೆ ಇಲ್ಲದವರಿಗೆ, ಗುಡಿಸಿಲಿನಲ್ಲಿ ಮತ್ತು ಸೋರುವ ಮನೆಯಲ್ಲಿ ವಾಸಿಸುತ್ತಿದ್ದವರಿಗೆ ಸ್ವಂತ ಸೂರು ಕಲ್ಪಿಸಿ ಕೊಡುವುದು ನನ್ನ ಕನಸಾಗಿತ್ತು. ಅಧಿ ಕಾರ ಇರುವುದು ಅಭಿವೃದ್ಧಿಗೆ, ಜನರ ಸೇವೆ ಮಾಡಲು ಎಂಬುದು ಅರಿವಿತ್ತು ಎಂದು.

ಒಂದೆಡೆ ಎಸ್.ಶಂಕರ್, ಮತ್ತೊಂದೆಡೆ ಎನ್.ಮಹೇಶ್ ದಲಿತ ಯುವಕರ ದಿಕ್ಕು ತಪ್ಪಿಸಿದರು. ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂಬ ಅತೀವ ವಿಶ್ವಾಸದಿಂದ ಮೈಮರೆತಿದ್ದರಿಂದ ನನಗೆ ಕಳೆದ ಚುನಾವಣೆಯಲ್ಲಿ ಸೋಲಾಯಿತು. ಈಗಿನ ಸರ್ಕಾರಕ್ಕೆ, ಗೆದ್ದಿರುವ ಶಾಸಕನಿಗೆ ಅವರವರ ಲಾಭ ಮುಖ್ಯವೇ ಹೊರತು ಜನರ ಕಷ್ಟವಲ್ಲ. ಶೇ.40 ಕಮಿಷನ್ ಬಗ್ಗೆ ಗುತ್ತಿಗೆದಾರರ ಸಂಘವೇ ಗಂಭೀರವಾಗಿ ದೂರಿದೆ. ಬಿಜೆಪಿ ಸರ್ಕಾರ ಬಡವರ ಭಾಗ್ಯಜ್ಯೋತಿ ವಿದ್ಯುತ್ ಅನ್ನು ಕಿತ್ತುಕೊಳ್ಳುತ್ತಿದೆ ಎಂದು ಆರೋಪಿಸಿದರು.

ಅಭಿವೃದ್ಧಿ ಬಯಸಿರುವ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಚುನಾವಣೆಯಲ್ಲಿ ಮತ್ತೆ ಒಂದಾಗಲಿವೆ. ನಮ್ಮ ಸರ್ಕಾರವಿದ್ದಾಗ ಈ ಭಾಗದ 40 ಸಾವಿರ ಎಕರೆ ಭೂ ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಯಿತು. ಬನ್ನೂರು ಆಸ್ಪತ್ರೆ ಮೇಲ್ದರ್ಜೆಗೇರಿಸಿ, ಮಲಿಯೂರು ಗ್ರಾಮದ ಬಳಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಿಸಲಾಯಿತು. ಬಡವರ ಮತ್ತು ರೈತ ಪರ ವಾದ ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ತಲಾ 10 ಕೆಜಿ ಪಡಿತರ, 200 ಯುನಿಟ್ ಉಚಿತ ವಿದ್ಯುತ್, ಕುಟುಂಬ ವೊಂದರ ಮಹಿಳೆಗೆ 2 ಸಾವಿರ ರೂ. ಸಹಾಯಧನವನ್ನು ನೀಡಲಾಗುವುದು ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಮಾತನಾಡಿದರು. ಗ್ರಾಪಂ ಅಧ್ಯಕ್ಷ ಡಿ.ಜಯರಾಮು, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾದ ಲಕ್ಷ್ಮಣ್, ಹುಣಸೂರು ಬಸವಣ್ಣ, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚೆನ್ನಕೇಶವ, ಮಹಿಳಾಧ್ಯಕ್ಷೆ ವೀಣಾ, ಮೈಮುಲ್ ಮಾಜಿ ನಿರ್ದೇಶಕ ಕೇತುಪುರ ಪ್ರಭಾಕರ್, ಗ್ರಾಪಂ ಮಾಜಿ ಅಧ್ಯಕ್ಷೆ ತಿಮ್ಮಮ್ಮ, ಸದಸ್ಯರಾದ ದೊಳ್ಳಯ್ಯ, ಮಹದೇವಮ್ಮ, ಭಾಗ್ಯ, ಮಾಜಿ ಉಪಾಧ್ಯಕ್ಷ ನಂಜಾಪುರ ಶಿವಣ್ಣ, ಗುತ್ತಿಗೆದಾರ ಸಿದ್ದೇಗೌಡ, ಮುಖಂಡರಾದ ರಂಗಸ್ವಾಮಿ, ಚಿಕ್ಕಂಡಯ್ಯ, ಶಿವಣ್ಣ, ಅಕ್ಕಿ ರಮೇಶ, ಜಯರಾಮು, ಚಿಕ್ಕಣ್ಣ, ನಾಗೇಂದ್ರ, ಕುಮಾರ್, ಮಹದೇವು ಇನ್ನಿತರರಿದ್ದರು.

ರಂಗನಾಥಸ್ವಾಮಿ ರಾಜಗೋಪುರಕ್ಕೆ ಹೆಚ್‌ಡಿಕೆ 5 ಕೋಟಿ ಕೊಟ್ರಾ?

ಸಿಎಂ ಆದ ಕೂಡಲೇ ವಡ್ಗಲ್ ಶ್ರೀರಂಗನಾಥಸ್ವಾಮಿ ಬೆಟ್ಟದ ದೇವಾಲಯದ ರಾಜಗೋಪುರ ನಿರ್ಮಾಣಕ್ಕೆ 5 ಕೋಟಿ ಅನುದಾನ ನೀಡುವುದಾಗಿ ಭರವಸೆ ನೀಡಿದ್ದ ಹೆಚ್.ಡಿ.ಕುಮಾರಸ್ವಾಮಿ ಹಣ ಕೊಟ್ರಾ ಎಂದು ಪ್ರಶ್ನಿಸಿದ ಡಾ.ಹೆಚ್.ಸಿ.ಮಹದೇವಪ್ಪ, ಅವರ್‍ಯಾರು ನುಡಿದಂತೆ ನಡೆಯುವವರಲ್ಲ. ಅಧಿಕಾರಕ್ಕಾಗಿ ಜನರ ದಿಕ್ಕು ತಪ್ಪಿಸುತ್ತಾರೆ ಎಂದರು. ಇದಕ್ಕೆ ದನಿಗೂಡಿಸಿದ ಗ್ರಾಪಂ ಅಧ್ಯಕ್ಷ ಡಿ.ಜಯರಾಮು ದೇವಾಲಯ ಗೋಪುರ ನಿರ್ಮಾಣಕ್ಕೆ ಅನುದಾನ ಕೊಡದಿದ್ದಕ್ಕೆ ಶಾಸಕರು ಕೂಡ ತಪ್ಪಿಸಿಕೊಂಡು ಓಡಾಡುತ್ತಿದ್ದಾರೆ ಎಂದು ಆಪಾದಿಸಿದರು.

ಹಾರೋಹಳ್ಳಿ ಪಿಎಸಿಎಸ್ ಅನ್ನು ತಾಲೂಕಿಗೆ ಮಾದರಿ ಮಾಡುವೆ

ಸಂಘದ ಅಧ್ಯಕ್ಷ ಲಕ್ಷ್ಮೀನಾರಾಯಣ ವಿಶ್ವಾಸ



ತಿ.ನರಸೀಪುರ, ಜ.23– ರೈತರಿಗೆ ವಿವಿಧ ಯೋಜನೆಯಡಿ ಸಾಲ ನೀಡುವ ಮೂಲಕ ತಾಲೂಕಿನಲ್ಲೇ ಮಾದರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿರ್ಮಿಸುವ ಗುರಿ ಹೊಂದಿರುವುದಾಗಿ ಹಾರೋಹಳ್ಳಿ ಪಿಎಸಿಎಸ್ ಅಧ್ಯಕ್ಷ ಲಕ್ಷ್ಮೀನಾರಾಯಣ ವಿಶ್ವಾಸ ವ್ಯಕ್ತಪಡಿಸಿದರು.

ವರುಣಾ ವಿಧಾನಸಭಾ ಕ್ಷೇತ್ರದ ಹಾರೋಹಳ್ಳಿ ಪಿಎಸಿಎಸ್ ಆವರಣದಲ್ಲಿ ನೂತನ ದಿನದರ್ಶಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಮಲ್ಟಿ ಪರ್ಪಸ್ ಯೋಜನೆ ಹಾಗೂ ಮಧ್ಯಮಾವಧಿ ಟ್ರಾಕ್ಟರ್ ಸಾಲ ಯೋಜನೆಗಳ ಮೂಲಕ ರೈತರಿಗೆ ಹಾಗೂ ಮಹಿಳಾ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ನೀಡುವ ಮೂಲಕ ನಷ್ಟ ಹಾಗೂ ಸುಸ್ತಿಯಲ್ಲಿದ್ದ ಸಂಘವನ್ನು ಲಾಭದತ್ತ ಕೊಂಡೊಯ್ಯಲಾಗಿದೆ ಎಂದರು.

ಈ ವೇಳೆ ಉಪಾಧ್ಯಕ್ಷ ನಿಂಗಾಚಾರಿ, ನಿರ್ದೇಶಕರಾದ ಜೆ.ಮಂಜುನಾಥ್, ಮಹದೇವಸ್ವಾಮಿ, ಸಿ.ತಿಮ್ಮೇಗೌಡ, ಎಂ.ಬಿ.ಮಂಜುನಾಥ್, ಶಿವಣ್ಣ, ಲಕ್ಷ್ಮೀಶ, ಮಹದೇವಮ್ಮ, ಇಂದ್ರಮ್ಮ, ಚೆಲುವಚಾರಿ, ಕಾರ್ಯ ನಿರ್ವಾಹಕ ಅಧಿಕಾರಿ ರಮೇಶ್, ಜಿಪಂ ಮಾಜಿ ಸದಸ್ಯ ಎಂ.ಬಿ. ಸಿದ್ದೇಗೌಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಚೆಲುವರಾಜ್, ಕಾಂಗ್ರೆಸ್ ಮುಖಂಡರಾದ ಸಾಕಣ್ಣ, ಮಹದೇವ, ಎಂ.ಸಿ.ಹರೀಶ್, ರವಿ ಎನ್.ಗೌಡ, ಮಾಜಿ ನಿರ್ದೇಶಕರಾದ ಭೈರೇಗೌಡ, ತಿಮ್ಮೇಗೌಡ, ವೈದ್ಯರಾದ ನಾರಾಯಣಗೌಡ, ಬೋರೇಗೌಡ, ಚಿಕ್ಕಣ್ಣಗೌಡ, ಪಟೇಲ್ ಸ್ವಾಮಿ, ಕೆ.ಸಿದ್ದೇಗೌಡ, ಶ್ರೀಧರ್, ವೆಂಕಟೇಶ್, ಹುಚ್ಚೇಗೌಡ, ಕುಮಾರ್, ನಾರಾಯಣ ಹಾಜರಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ

ಹುಣಸೂರು, ಜ.23– ಸಾಲಬಾಧೆ ತಾಳಲಾರದೇ ರೈತನೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಬನ್ನಿಕುಪ್ಪೆ ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದೆ.

ಗ್ರಾಮದ ನಿವಾಸಿ ಶಿವಣ್ಣ ನಾಯಕ(56) ಆತ್ಮಹತ್ಯೆ ಮಾಡಿಕೊಂಡವರು. ಮೃತರ ಹೆಸರಿನಲ್ಲಿ ಬನ್ನಿಕುಪ್ಪೆ ಮತ್ತು ಸೋಮನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.9ರಲ್ಲಿ 2.20 ಗುಂಟೆ ಜಮೀನಿದ್ದು, ವ್ಯವಸಾಯ, ಕುಟುಂಬ ನಿರ್ವಹಣೆ ಹಾಗೂ ಮಗಳ ಮದುವೆಗೆಂದು ಬನ್ನಿಕುಪ್ಪೆಯ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 7.5 ಲಕ್ಷ ಸೇರಿದಂತೆ ಮಹಿಳಾ ಸಂಘಗಳಿಂದ ಸಾಲ ಪಡೆದು ಹೊಗೆಸೊಪ್ಪು ಬೆಳೆದಿದ್ದರು. ಆದರೆ ಕಳೆದ 6 ತಿಂಗಳ ಹಿಂದೆ ಸುರಿದ ಧಾರಾಕಾರ ಮಳೆಗೆ ಬೆಳೆ ನಾಶವಾಗಿದ್ದರಿಂದ ಸಾಲ ತೀರಿಸಲು ಸಾಧ್ಯವಾಗಿರಲಿಲ್ಲ. ಇದರಿಂದ ಮನನೊಂದಿದ್ದ ಶಿವಣ್ಣ ನಾಯಕ ಭಾನುವಾರ ಸಂಜೆ ಜಮೀನಿನಲ್ಲಿದ್ದ ಮಾವಿನ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಪುತ್ರ ಬಿ.ಎಸ್.ಸತೀಶ್ ಬಿಳಿಕೆರೆ ಠಾಣೆಗೆ ದೂರು ನೀಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ರೈತನ ಮನೆಗೆ ಶಾಸಕ ಹೆಚ್.ಪಿ.ಮಂಜುನಾಥ್ ಮೃತ ರೈತನ ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅಪಾರ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಭಿಮತ



ಮಲ್ಲುಂಡಿ, ಜ.23– ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅಪಾರ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವ ನಾರಾಯಣ್ ಅಭಿಪ್ರಾಯಪಟ್ಟರು.

ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರು ವಿದ್ಯಾರ್ಥಿಗಳ ಗ್ರಹಿಕೆ, ಕಲಿಕೆಯನ್ನು ಗುರುತಿಸಬೇಕು. ಅವರಿಗೆ ಯಾವ ವಿಷಯ ಕಷ್ಟವಾಗಿದೆ ಎಂಬುದನ್ನು ಅರಿತು ಹೆಚ್ಚು ಒತ್ತು ನೀಡಿದರೆ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ತಿಳಿಸಿರುವಂತೆ ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ ಉತ್ತಮ ಪ್ರಜೆಯಾಗಲು ಸಹಕರಿಸಬೇಕು ಎಂದ ಅವರು, ಗ್ರಾಮೀಣ ಭಾಗದಲ್ಲಿ ಒಂದು ಶಿಕ್ಷಣ ಸಂಸ್ಥೆ ಸ್ಥಾಪಿಸಿ ನಡೆಸುವುದು ಕಷ್ಟದ ಕೆಲಸ. ಅದರೆ ಕಾಡಂಚಿನ ಪ್ರದೇಶದಲ್ಲಿ ಸಂಸ್ಥೆ ಸ್ಥಾಪಿಸಿರುವುದು ಸಂತೋಷದ ವಿಷಯ. ಪ್ರತಿ ಗ್ರಾಪಂನಲ್ಲಿ ಗ್ರಂಥಾಲಯ ಇರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯು ಗ್ರಂಥಾಲಯಕ್ಕೆ ತೆರಳಿ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಗ್ರಾಪಂ ಸದಸ್ಯರಾದ ಗೋವಿಂದರಾಜು, ಅಶ್ರಫ್ ಅಲಿ, ಗೌರಮ್ಮ, ಮಹದೇವಪ್ಪ, ನಾಗರಾಜೇಗೌಡ, ಸುಬ್ರಹ್ಮಣ್ಯ, ಸಂಸ್ಥೆ ಸಂಸ್ಥಾಪಕ ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಪ್ರಸ್ತುತ ಕ್ರಿಕೆಟ್‌ಗೆ ಸಮನಾಗಿ ಕಬಡ್ಡಿ ಜನಪ್ರಿಯತೆ ಗಳಿಸಿದೆ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ



ಹನಗೋಡು, ಜ.23– ಒಂದು ಕಾಲದಲ್ಲಿ ಗ್ರಾಮೀಣ ಕ್ರೀಡೆಯಾಗಿದ್ದ ಕಬಡ್ಡಿ ಇಂದು ಕ್ರಿಕೆಟ್‌ಗೆ ಸಮನಾಗಿ ಜನಪ್ರಿಯತೆ ಗಳಿಸಿದೆ. ಆದ್ದರಿಂದ ಗ್ರಾಮೀಣ ಭಾಗದಲ್ಲಿ ಹೆಚ್ಚು ಕಬಡ್ಡಿ ಪಂದ್ಯಾವಳಿ ನಡೆಯಬೇಕು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ತಿಳಿಸಿದರು.

ಕಚುವಿನಹಳ್ಳಿ ಕಬಡ್ಡಿ ಆಟಗಾರ ಗಣೇಶ್ ಸ್ಮರಣಾರ್ಥ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹಳ್ಳಿ ಸೊಗಡು ಸೂಚಿಸುವ ಕಬಡ್ಡಿ ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಿರಲು ಸಹಾಯ ಮಾಡುತ್ತದೆ. ವಿಶೇಷವಾಗಿ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಯಲ್ಲಿ ಯಾವುದಾದರೊಂದು ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಅದರಿಂದ ಭವಿಷ್ಯದಲ್ಲಿ ಉತ್ತಮ ಹುದ್ದೆ ಅರಸಿ ಬರುತ್ತವೆ ಎಂದರು.

ಕ್ರೀಡಾಪಟುಗಳು ಯುದ್ಧ ಕಾಲದ ಅಭ್ಯಾಸ ಬಿಟ್ಟು ನಿಯಮಿತವಾಗಿ ನಿತ್ಯ ಎರಡ್ಮೂರು ಗಂಟೆ ತಮ್ಮ ಇಷ್ಟದ ಕ್ರೀಡೆ ತಾಲೀಮು ನಡೆಸಬೇಕು. ಕಾಲೇಜು ಮಟ್ಟದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಹೊರಹಾಕಲು ಇಂತಹ ಪಂದ್ಯಾವಳಿ ವೇದಿಕೆಯಾಗಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಗ್ರಾಮೀಣ ಆಟವಾಗಿದ್ದ ಕಬಡ್ಡಿ ಪ್ರೊಕಬಡ್ಡಿ ಲೀಗ್‌ನಿಂದಾಗಿ ಇಂದು ವೃತ್ತಿಪರ ಕ್ರೀಡೆಯಾಗಿ ಬದಲಾಗಿದೆ. ಹೀಗಾಗಿ ಕ್ರೀಡಾಪಟುಗಳಿಗೆ ಸ್ಫೂರ್ತಿ ತುಂಬಬೇಕಾಗಿದೆ ಎಂದರು.

ತಾಪಂ ಮಾಜಿ ಸದಸ್ಯ ಕೆ.ಗಣಪತಿ ಮಾತನಾಡಿ, ಪ್ರಸ್ತುತ ದುಡ್ಡು ಮಾಡುವವರೇ ಹೆಚ್ಚಾಗಿದ್ದಾರೆ. ಅಂತಹವರ ನಡುವೆ ಗ್ರಾಮೀಣ ವಿದ್ಯಾರ್ಥಿಗಳು ಇಂತಹ ಪಂದ್ಯಾವಳಿ ಆಯೋಜಿಸುವ ಮೂಲಕ ಗ್ರಾಮೀಣ ಕ್ರೀಡೆಗಳ ಉಳಿವಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ. ಕಬಡ್ಡಿಯಂತಹ ಗ್ರಾಮೀಣ ಪಂದ್ಯಾವಳಿ ನಡೆಸಿದಾಗ ಹಳ್ಳಿ ಮಕ್ಕಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಪ್ರೊ.ಕಬಡ್ಡಿ ಲೀಗ್ ಆರಂಭವಾದ ನಂತರ ಕಬಡ್ಡಿ ಹಿಂದೆಂದಿಗಿಂತಲೂ ಹೆಚ್ಚು ಜನಪ್ರಿಯತೆ ಗಳಿಸಿದೆ ಎಂದರು.

ಈ ವೇಳೆ ಕಬಡ್ಡಿ ಆಟಗಾರ ರಂಜನ್‌ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ವಿಎಸ್‌ಎಸ್‌ಎನ್ ನಿರ್ದೇಶಕ ಉಜ್ಜನಿಗೌಡ, ರಾಜು, ಪ್ರಸನ್ನ, ಜಿಪಂ ಮಾಜಿ ಸದಸ್ಯ ಸುರೇಂದ್ರ, ಸತೀಶ್, ಪಾಪಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಸುಭಾಷ್, ನಗರಸಭಾ ಸದಸ್ಯ ಸತೀಶ್, ವಿಎಸ್‌ಎಸ್‌ಎನ್ ಅಧ್ಯಕ್ಷ ರವಿಕುಮಾರ್, ಹನುಮ, ರಾಜೇಗೌಡ, ಪ್ರಭಾಕರ್ ಇದ್ದರು.

ಅಕ್ಷರ ದಾಸೋಹ ಹೆಸರು ಬದಲಾವಣೆಗೆ ವಿಶ್ವನಾಥ್ ಖಂಡನೆ



ನಂಜನಗೂಡು, ಜ.23– ಸರ್ಕಾರಿ ಶಾಲೆಗಳಲ್ಲಿ ನೀಡುತ್ತಿರುವ ಮಧ್ಯಾಹ್ನದ ಬಿಸಿಯೂಟಕ್ಕಿದ್ದ 'ಅಕ್ಷರ ದಾಸೋಹ' ಎಂಬ ಹೆಸರನ್ನು ಕೇಂದ್ರ ಸರ್ಕಾರ 'ಪ್ರಧಾನ ಮಂತ್ರಿ ಪೋಷಣ್ ನಿರ್ಮಾಣ್' ಎಂದು ಬದಲಿಸಿರುವುದನ್ನು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಖಂಡಿಸಿದರು.

ತಾಲೂಕಿನ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳ ಮತ್ತು ವಸ್ತು ಪ್ರದರ್ಶನ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಅಕ್ಷರ ದಾಸೋಹ ಎನ್ನುವ ಪದವೇ ಮಂತ್ರಮುಗ್ಧವಾಗಿದೆ. ನಾನು ಶಿಕ್ಷಣ ಸಚಿವನಾಗಿದ್ದಾಗ ಮಠಾಧೀಶರು ಈ ಹೆಸರನ್ನು ಶಿಫಾರಸ್ಸು ಮಾಡಿದರು. ಆದರೆ ಕೇಂದ್ರ ಸರ್ಕಾರ ಈ ಹೆಸರನ್ನು ಪ್ರಧಾನ ಮಂತ್ರಿ ಪೋಷಣ್ ನಿರ್ಮಾಣ್ ಎಂದು ಬದಲಾಯಿಸಿದೆ. ಅಕ್ಷರ ದಾಸೋಹ ಪದವನ್ನು ಬದಲಾಯಿಸಿದರೆ ದಾಸೋಹ ಪರಂಪರೆ ಹುಟ್ಟು ಹಾಕಿದ ಬಸವೇಶ್ವರರ ಹೆಸರಿಗೆ ಅಪಚಾರ ಮಾಡಿದಂತಾಗುತ್ತದೆ. ಹೀಗಾಗಿ ರಾಜ್ಯ ಸರ್ಕಾರ ಕೇಂದ್ರದ ಈ ನಿಲುವನ್ನು ತಿರಸ್ಕರಿಸಬೇಕು ಎಂದು ಆಗ್ರಹಿಸಿದರು.

ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, ಜಗತ್ತಿಗೆ ಮಾನವ ಸಂಪನ್ಮೂಲ ಕೊಡುವ ರಾಷ್ಟ್ರವಾಗಿ ಭಾರತ ಮುಂಚೂಣಿಗೆ ಬರಲಿದೆ. ಘೋಷಣೆ, ಭಾಷಣದಿಂದ ದೇಶದ ಪರಿವರ್ತನೆ ಸಾಧ್ಯವಿಲ್ಲ. ಅನುಷ್ಠಾನಗೊಳಿಸುವ ಪರಿವರ್ತನೆ ಕಾಣಬಹುದು ಎಂಬುದು ಪ್ರಧಾನಿ ಮೋದಿ ನಿಲುವಾಗಿದೆ. ಗ್ರಾಮೀಣ ಜನರ ಭಾವನೆ ಅರ್ಥ ಮಾಡಿಕೊಂಡು ಅವರ ಬದುಕಿಗೆ ವೇಗ ಕೊಟ್ಟಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದರು.

ತೋಟಗಾರಿಕೆ ಸಚಿವ ಎನ್.ಮುನಿರತ್ನ ಮಾತನಾಡಿ, ಕೋವಿಡ್ ನಂತರ ಶಿಕ್ಷಣ ಕ್ಷೇತ್ರದ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರಿತು. 500 ಮಕ್ಕಳು ವ್ಯಾಸಂಗ ಮಾಡುವ ಸರ್ಕಾರಿ ಶಾಲೆಗೆ 1,500 ಮಕ್ಕಳಿಂದ ಪ್ರವೇಶಾತಿಗೆ ಬೇಡಿಕೆ ಹೆಚ್ಚಾಗಿ ನಿಭಾಯಿಸುವುದು ಸವಾಲಾಯಿತು. ಇದನ್ನು ಮನಗಂಡು ನಾನು ಪ್ರತಿನಿಧಿಸುವ ಕ್ಷೇತ್ರದಲ್ಲಿ 25 ಸಾವಿರ ಮಕ್ಕಳ ಶಿಕ್ಷಣಕ್ಕೆ ನೆರವಾಗಿದ್ದೇವೆ. ಜತೆಗೆ 11 ಶಾಲೆಗಳನ್ನು ಹೊಸದಾಗಿ ತೆರೆಯಲಾಗಿದೆ. ಹಾಗಾಗಿ ಯಾರಿಗಾದರೂ ಸಹಾಯ ಮಾಡುವ ಮನಸ್ಸಿದ್ದರೆ ಬಡ ಮಕ್ಕಳ ಶಿಕ್ಷಣಕ್ಕೆ ನೆರವಾಗಿ ಎಂದರು.

ಇದೇ ವೇಳೆ ಕೃಷಿಮೇಳ, ವಸ್ತು ಪ್ರದರ್ಶನದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕೊಪ್ಪಳದ ಶ್ರೀಗವಿ ಸಿದ್ಧೇಶ್ವರ ಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಮಾತನಾಡಿದರು. ಗದಗದ ಬಳಗನೂರು ಶ್ರೀಶಾಂತವೀರ ಮಠದ ಶಿವಶಾಂತವೀರ ಶರಣರು, ಕವಿ ಕೆ.ಸಿ.ಶಿವಪ್ಪ ಊಟಿ ಉದ್ಯಮಿ ಬಿ.ರಾಜೇಶ್ ಚಂದರ್, ಚೇತನ್‌ರಾಮ್, ಡಾಟಿ ಸದಾನಂದಗೌಡ ಉಪಸ್ಥಿತರಿದ್ದರು.

ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮರಥೋತ್ಸವ ಯಶಸ್ವಿಗೊಳಿಸಿ



ಬೆಟ್ಟದಪುರ, ಜ.23– ಫೆ.7ರಂದು ಬೆಟ್ಟದಪುರದಲ್ಲಿ ನಡೆಯುವ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವವನ್ನು ಗ್ರಾಮಸ್ಥರೆಲ್ಲರೂ ಒಟ್ಟಾಗಿ ಸೇರಿ ಯಶಸ್ವಿಗೊಳಿಸಬೇಕು ಎಂದು ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂಡಾಲ್ ಮನವಿ ಮಾಡಿದರು.

ಗ್ರಾಮದ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಥೋತ್ಸವವನ್ನು ಸಂಪ್ರದಾಯದಂತೆ ಈ ಬಾರಿಯೂ ಅದ್ದೂರಿಯಾಗಿ ಆಚರಿಸಬೇಕು. ಇದಕ್ಕೆ ಗ್ರಾಮಸ್ಥರ ಸಹಕಾರ ಅವಶ್ಯಕ. ಎಲ್ಲಾ ಕೋಮಿನ ಜನರು ಒಟ್ಟಾಗಿ ಸೇರಿ ರಥೋತ್ಸವದಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದರು.

ತಹಸೀಲ್ದಾರ್ ಯದುಗಿರೀಶ್ ಮಾತನಾಡಿ, ಜಾತ್ರಾ ಮಹೋತ್ಸವದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಅಲ್ಲದೇ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟ ಏರುವ ಭಕ್ತರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಗ್ರಾಪಂ ಅಧಿಕಾರಿಗಳು ನಿಗಾ ವಹಿಸಬೇಕೆಂದು ಸೂಚಿಸಿದರು.

ಉಪ್ಪಾರ ಸಮುದಾಯ ಹಿಂದಿನಿಂದಲೂ ದೇವರ ಕಾರ್ಯ ಮಾಡಿಕೊಂಡು ಬಂದಿದ್ದಾರೆ. ಇದುವರೆಗೂ ಅವರ ಬೇಡಿಕೆ ಈಡೇರಿಸಿಲ್ಲ. ಸೇವೆ ಮಾಡುವ ಜನಾಂಗದವರಿಗೆ ಕನಿಷ್ಠ ಸೌಲಭ್ಯ ಒದಗಿಸಿಕೊಡಬೇಕೆಂದು ಗ್ರಾಮದ ಮುಖಂಡ ಹರೀಶ್ ಮನವಿ ಮಾಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷ ಸೌಮ್ಯ, ಕಂದಾಯ ನಿರೀಕ್ಷಕ ಆನಂದ್, ಪ್ರಧಾನ ಅರ್ಚಕ ಸತೀಶ್ ಕಶ್ಯಪ, ಕೃಷ್ಣಮೂರ್ತಿ, ಅಧಿಕಾರಿ ಸೋಮಯ್ಯ, ವೈದ್ಯಾಧಿಕಾರಿ ಪೂಜಾ, ಪಿಡಿಓ ದಿವಾಕರ್, ತಾಪಂ ಸಹಾಯಕ ನಿರ್ದೇಶಕ ಸತೀಶ್ ಇದ್ದರು.

ಜೆಡಿಎಸ್ ಅಧಿಕಾರಕ್ಕೆ ಬಂದು ಹೆಚ್‌ಡಿಕೆ ಮತ್ತೊಮ್ಮೆ ಸಿಎಂ ಆಗಲೆಂದು

ಜ.29, ಶಕ್ತಿದೇವತೆ ಚಿಕ್ಕದೇವಮ್ಮನಿಗೆ ವಿಶೇಷ ಪೂಜೆ ಸಲ್ಲಿಕೆ

ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ



ಹೆಚ್.ಡಿ.ಕೋಟೆ, ಜ.23– ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿ ಎಂದು ಜ.29 ರಂದು ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮನ ಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ತಾಲೂಕಿನ ಮಾದಾಪುರ ಗ್ರಾಮದ ಸಮೀಪವಿರುವ ತಮ್ಮ ಫಾರಂಹೌಸ್‌ನಲ್ಲಿ ಆಯೋಜಿಸಿದ್ದ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಅಂದು ಚಿಕ್ಕದೇವಮ್ಮನ ಬೆಟ್ಟದಲ್ಲಿ ತಾಲೂಕಿನ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರ ಸಮ್ಮುಖದಲ್ಲಿ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಪಂಚರತ್ನ ರಥಯಾತ್ರೆ ಯಶಸ್ವಿಯಾಗಬೇಕು ಹಾಗೂ ಮುಂಬರುವ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕು ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ ವಿಶೇಷ ಪೂಜೆ ಸಲ್ಲಿಸಲಾಗುವುದು. ಮಧ್ಯಾಹ್ನ ಮದಾಪುರ ಸಮೀಪದ ಫಾರಂ ಹೌಸ್‌ನಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಜನತೆ, ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಾಯಿ ಚಿಕ್ಕದೇವಮ್ಮನವರ ಪ್ರಸಾದ ಸ್ವೀಕರಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಮಾರ್ಗದರ್ಶನದ ಮೇರೆಗೆ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನಲ್ಲಿ ಜೆಡಿಎಸ್ ಪಕ್ಷ ಸಂಘಟಿಸುತ್ತಿದ್ದು, ಗ್ರಾಪಂಗಳಿಗೆ ಭೇಟಿ ನೀಡಿದ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿಯ ನೂರಾರು ಮುಖಂಡರು ಜೆಡಿಎಸ್ ಸೇರ್ಪಡೆಗೊಳ್ಳುತ್ತಿದ್ದಾರೆ. ಇದರಿಂದ ಪಕ್ಷಕ್ಕೆ ಆನೆಬಲ ಬಂದಂತಾಗಿದೆ ಎಂದರು.

> ಮುಂಬರುವ ಚುನಾವಣೆಯಲ್ಲಿ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ನೀಡುವುದಾಗಿ ಮಾಜಿ ಸಿಎಂ ಕುಮಾರಸ್ವಾಮಿ ಭರವಸೆ ನೀಡಿದ್ದು, ನನ್ನ ಸ್ಪರ್ಧೆ ಖಚಿತ. ಹೀಗಾಗಿ ತಾಲೂಕಿನಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದೇನೆ. ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಿ. –ಕೆ.ಎಂ.ಕೃಷ್ಣನಾಯಕ, ಜೆಡಿಎಸ್ ಮುಖಂಡ.

ಸಭೆಯಲ್ಲಿ ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜು, ತಾಪಂ ಮಾಜಿ ಅಧ್ಯಕ್ಷ ಶಂಬೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಸವರಾಜು, ನಿರ್ದೇಶಕ ಮಹದೇವ್, ಕಾಡ ಮಾಜಿ ನಿರ್ದೇಶಕ ಯತೀಶ್ ಕುಮಾರ್, ಮುಖಂಡರಾದ ಹರೀಶ್, ಪ್ರಕಾಶ್, ಶಿವರಾಮೇಗೌಡ, ಗೋವಿಂದೇಗೌಡ, ಶಿವಮಲ್ಲಪ್ಪ, ಶಿವಯ್ಯ, ಮಹೇಂದ್ರ, ಕಾಳೇಗೌಡ, ಕೃಷ್ಣೇಗೌಡ, ಕೆಂಪೇಗೌಡ, ವೈಕುಂಠ ನಾಯಕ, ಶಂಕರ, ಶಿವಮಲ್ಲಪ್ಪ, ಜವರೇಗೌಡ, ನಾಗರಾಜು, ಕಾಳಪ್ಪಾಜಿ, ಸಿರಿ, ಬಿ.ಪಿ.ಸ್ವಾಮಿ, ದಿನೇಶ, ಪ್ರಶಾಂತ, ಪ್ರಸನ್ನ, ಜಿತೇಂದ್ರ ಗಣೇಶ್, ಎ.ಆರ್.ಹರೀಶ್, ಬಿ.ಆರ್.ನಾಗರಾಜ್, ವೆಂಕಟೇಶ್, ಶಂಕರ, ಬಸವಣ್ಣ, ಮಹದೇವಸ್ವಾಮಿ, ರವಿ, ತಮ್ಮಣ್ಣ, ನಿಂಗರಾಜು, ಪ್ರಕಾಶ ಸೇರಿದಂತೆ ನೂರಾರು ಕಾರ್ಯಕರ್ತರು, ಮುಖಂಡರಿದ್ದರು.

ಮೈಸೂರು ಚಳಿಗಾಲದ ರೇಸುಗಳು

11ನೇ ದಿನ, ಮಂಗಳವಾರ 24-01-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಟ್ಯುಟಿಕೋರಿನ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಲಕ್ಕಿ ಪಾಯಿಂಟ್ 2. ಗೇಮ್ ಬಾಯ್ 3. ಡಿಪೈರ್

II. ಕಾಮನ್ ಗ್ರೌಂಡ್ಸ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಮಿಸ್ ಚೈನಾ 2. ಮೈ ಲೈಫ್ ಮೈ ರೂಲ್ 3. ಕೂರ್ಗ್ ಜನರಲ್

III. ಬ್ರೇವ್ ಡ್ಯಾನ್ಸರ್ ಪ್ಲೇಟ್ ಡಿ2– 1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಬ್ಯೂಟಿಫುಲ್ ಒಬಿಲಿವಿಯನ್ 2 ಬ್ರೇಕ್‌ಅವೇ 3. ಥಿಯಾಸ್ ಗಿಫ್ಟ್

IV. ಬ್ರೇವ್ ಡ್ಯಾನ್ಸರ್ ಪ್ಲೇಟ್ ಡಿ1– 1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಸರ್ವೋತ್ತಮ್ 2. ಮೆಡೌವ್ ಫ್ಲವರ್ 3. ಇಂಪರಿಸ್

V. ರಾಜಕುಮಾರಿ ಲೀಲಾವತಿದೇವಿ ಮೆಮೋರಿಯಲ್ ಟ್ರೋಫಿ –1600 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಮ.4.00ಕ್ಕೆ
1. ಪ್ರಿನ್ಸ್ ಕಾರ್ಪೊರೇಟ್ 2. ಸೆಗೇರಾ 3. ಸಾಧಿಕ್

VI. ಶಿಲಾಂಗ್ ಪ್ಲೇಟ್– 1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಓಕರೆ 2. ರಿಯಲ್ ಶೋ 3. ಐ ದ ಮೈಂಡ್

VII. ಸೂಪರ್ ಸ್ಪೀಡ್ ಪ್ಲೇಟ್– 1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಪವರ್ ಆಫ್ ಕಾಂತರ 2. ಸಾಕ್ರೇಟ್ಸ್ 3. ವಿವಾ ಲಾ ವಿಡಾ

ದಿನದ ಅತ್ಯುತ್ತಮ	ಬ್ಯೂಟಿಫುಲ್ ಒಬಿಲಿವಿಯನ್
ಡಬ್ಬಲ್	ಮಿಸ್ ಚೈನಾ, ಓಕರೆ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ನೇಮಕ



ನಂಜನಗೂಡು, ಜ.23– ಮೈಸೂರು ಗ್ರಾಮಾಂತರ ಜಿಲ್ಲಾ ಅಲ್ಪಸಂಖ್ಯಾತ ವಿಭಾಗದ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ನಂಜನಗೂಡಿನ ಜಿ.ಅಜ್ಗರ್ ಅವರನ್ನು ನೇಮಗೊಳಿಸಿ ಮೈಸೂರು ಜಿಲ್ಲಾಧ್ಯಕ್ಷ ಅಬ್ದುಲ್ ಜಬ್ಬಾರ್ ಆದೇಶ ಹೊರಡಿಸಿದ್ದಾರೆ.

ಖದೀಮರ ಭೀತಿ ಹುಟ್ಟಿಸಿ ಮಹಿಳೆಯರಿಂದ ಚಿನ್ನಾಭರಣ ದೋಚಿದ 'ನಿಜ ಖದೀಮರು'

ಮೈಸೂರು,ಜ.23–ಪೊಲೀಸರ ಹೆಸರಿನಲ್ಲಿ ಮಹಿಳೆಯರನ್ನು ನಂಬಿಸಿ ಚಿನ್ನಾಭರಣ ದೋಚಿದ ಎರಡು ಪ್ರಕರಣಗಳು ಮೈಸೂರಿನಲ್ಲಿ ಒಂದೇ ದಿನ ನಡೆದಿದೆ. ಎರಡು ಪ್ರಕರಣಗಳಲ್ಲೂ ಒಂದೇ ರೀತಿಯಲ್ಲಿ ಚಿನ್ನಾಭರಣ ದೋಚಿದ್ದು, ಕೇವಲ ಒಂದೂವರೆ ಗಂಟೆ ಅಂತರದಲ್ಲಿ ನಡೆದಿರುವ ಈ ಕೃತ್ಯವನ್ನು ಒಂದೇ ತಂಡ ಎಸಗಿದೆ ಎಂದು ಹೇಳಲಾಗಿದೆ.

ಮೊದಲಿಗೆ ಜನವರಿ 21ರಂದು ಬೆಳಗ್ಗೆ 8.30ರ ವೇಳೆಯಲ್ಲಿ ಮೈಸೂರಿನ ಸಾತಗಳ್ಳಿ ಹೆಚ್‌ಪಿ ಅಂಡ್ ಆರ್‌ಎಂಎಸ್ ಲೇಔಟ್ ನಿವಾಸಿ ದೇವಮ್ಮ(78) ಅವರು ಮನೆಯ ಎದುರಿಗಿರುವ ಬಲಮುರಿ ದೇವಸ್ಥಾನಕ್ಕೆ ಹೋಗಿ ದರ್ಶನ ಮಾಡಿದ ನಂತರ ಹೊರಗೆ ಪ್ರದಕ್ಷಿಣೆ ಮಾಡುತ್ತಿರುವಾಗ ಮಾಸ್ಕ್ ಧರಿಸಿದ್ದ ವ್ಯಕ್ತಿಯೋರ್ವ ಅವರ ಬಳಿಗೆ ಬಂದು ಪೊಲೀಸರು ಕರೆಯುತ್ತಿದ್ದಾರೆ ಎಂದು ಮತ್ತೊಬ್ಬನ ಬಳಿಗೆ ಕರೆದೊಯ್ದಿದ್ದಾನೆ. ಆ ವ್ಯಕ್ತಿ ತನ್ನನ್ನು ಪೊಲೀಸ್ ಇನ್ವೆಸ್ಟಿಗೇಷನ್ ಆಫೀಸರ್ ಎಂದು ಹೇಳಿಕೊಂಡಿದ್ದು, ಇಲ್ಲಿ ಸರಗಳವು ನಡೆಯುತ್ತಿದೆ. ಹೀಗಾಗಿ ನಿಮ್ಮ ಒಡವೆಗಳನ್ನು ಬಿಚ್ಚಿಟ್ಟುಕೊಳ್ಳಿ ಎಂದು ಸಲಹೆ ನೀಡಿದ್ದಾರೆ. ಅದೇ ವೇಳೆಗೆ ಮತ್ತೋರ್ವ ವ್ಯಕ್ತಿ ಬೈಕ್‌ನಲ್ಲಿ ಬಂದಿದ್ದು, ಆತನನ್ನು ನಿಲ್ಲಿಸಿದ ಪೊಲೀಸ್ ಅಧಿಕಾರಿ ಎಂದು ಹೇಳಿಕೊಂಡಿದ್ದ ಖದೀಮ, ಬೈಕ್‌ನಲ್ಲಿ ಬಂದವನ ಕಪಾಳಕ್ಕೆ ಹೊಡೆದು ಕತ್ತಿನಲ್ಲಿರುವ ಸರವನ್ನು ಬಿಚ್ಚಿಟ್ಟುಕೊಳ್ಳುವಂತೆ ಹೇಳಿದ್ದಾನೆ. ಆಗ ಅತ ಸರ ಬಿಚ್ಚಿ ಜೇಬಿನಲ್ಲಿ ಹಾಕಿಕೊಂಡು ಹೊರಟು ಹೋದ.

ನಂತರ ದೇವಮ್ಮನವರ ಚಿನ್ನದ ಬಳೆಗಳನ್ನು ಬಿಚ್ಚಿಸಿ, ಅದನ್ನು ಅವರ ಸೆರಗಿನಲ್ಲಿ ಕಟ್ಟಿ ಕಳುಹಿಸಿದ್ದಾನೆ. ಮನೆಗೆ ಹೋದ ನಂತರ ನೋಡಿದಾಗ ಬಳೆಗಳು ನಕಲಿ ಎಂದು ಗೊತ್ತಾಗಿದೆ. ಅದೇ ದಿನ ಬೆಳಗ್ಗೆ 11 ಗಂಟೆ ಸುಮಾರಿನಲ್ಲಿ ದಟ್ಟಗಳ್ಳಿ ಸೋಮನಾಥನಗರದ ನಿವಾಸಿ ಎಂ.ಪ್ರೇಮಲತಾ (49) ರಿಂಗ್ ರಸ್ತೆಯ ಆದಿತ್ಯ ಸರ್ಕಲ್ ಕಡೆಯಿಂದ ಮಹಾ ಮನೆ ಸರ್ಕಲ್ ಕಡೆಗೆ ಹೋಗುತ್ತಿದ್ದಾಗ ಮಾಸ್ಕ್ ಹಾಕಿಕೊಂಡು ಬಂದ ವ್ಯಕ್ತಿ, ಸಾತಗಳ್ಳಿಯ ದೇವಮ್ಮನವರಿಗೆ ಹೇಳಿದಂತೆಯೇ ಹೇಳಿದ್ದಾನೆ. ಅಲ್ಲದೇ, ಅದೇ ರೀತಿ ಎಲ್ಲಾ ಪ್ರಕ್ರಿಯೆಗಳನ್ನು ನಡೆಸಿ, ಅವರ ಕತ್ತಿನಲ್ಲಿದ್ದ ಒಟ್ಟು 45 ಗ್ರಾಂ ತೂಕದ 2 ಚಿನ್ನದ ಸರಗಳನ್ನು ಬಿಚ್ಚಿಸಿ, ಪೇಪರ್‌ನಲ್ಲಿ ಸುತ್ತಿ ಕೊಟ್ಟಿದ್ದಾನೆ. ಅವರು ಮನೆಗೆ ಹೋಗಿ ನೋಡಿದ ನಂತರ ತನಗೆ ಪೇಪರ್‌ನಲ್ಲಿ ಸುತ್ತಿ ಕೊಟ್ಟಿದ್ದು ನಕಲಿ ಚಿನ್ನಾಭರಣ ಎಂಬುದು ಗೊತ್ತಾಗಿದೆ. ಉದಯಗಿರಿ ಮತ್ತು ಕುವೆಂಪುನಗರ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿ ಮಾಂಗಲ್ಯ ಸರಕಳವು



ಮೈಸೂರು, ಜ. 23– ಗೃಹಿಣಿಯೊಬ್ಬರ ಮಾಂಗಲ್ಯ ಸರವನ್ನು ಖದೀಮರು ಕಿತ್ತುಕೊಂಡು ಪರಾರಿಯಾದ ಘಟನೆ ಹೆಬ್ಬಾಳ 1ನೇ ಹಂತದಿಂದ ವರದಿಯಾಗಿದೆ.

ಮೈಸೂರಿನ ಬಸವೇಶ್ವರನಗರ ನಿವಾಸಿ ನೇತ್ರಾವತಿ(42) ಸರ ಕಳೆದುಕೊಂಡವರಾಗಿದ್ದು, ಇವರ ಪತಿಯ ಅಣ್ಣನ ಮಗಳಿಗೆ ಹುಷಾರಿಲ್ಲದ ಕಾರಣ ಜನವರಿ 20ರಂದು ಹೆಬ್ಬಾಳ 1ನೇ ಹಂತದ ಎಸ್‌ಬಿಐ ಮುಖ್ಯ ರಸ್ತೆಯ ಹಿಂಭಾಗದಲ್ಲಿರುವ ಅವರ ಮನೆಗೆ ತೆರಳಿ ಅಂದು ಸಂಜೆ 7.15ರ ಸುಮಾರಿನಲ್ಲಿ ಅತ್ತಿಗೆ ಕಮಲಾಕ್ಷಿ ಅವರೊಂದಿಗೆ ವೋರ್ ಹಿಂಭಾಗದ 4ನೇ ಮುಖ್ಯರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಬೈಕ್‌ನಲ್ಲಿ ಬಂದ ಇಬ್ಬರೂ ಖದೀಮರ ಪೈಕಿ ಹಿಂಬದಿ ಸವಾರ ನೇತ್ರಾವತಿಯವರ ಕತ್ತಿನಲ್ಲಿದ್ದ 58 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಹೆಬ್ಬಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಲೆ ಕೊಠಡಿಗಳ ಪುನರ್ ನಿರ್ಮಾಣ ಪ್ರಸ್ತಾಪ

ಮೈಸೂರು,ಜ.23(ಎಸ್‌ಪಿಎನ್)– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ 35 ಶಾಲೆಗಳ 43 ಕೊಠಡಿಗಳು ಮತ್ತು ಅಡುಗೆ ಮನೆ ಕೊಠಡಿಗಳು ಸಂಪೂರ್ಣ ಶಿಥಿಲಗೊಂಡಿದ್ದು, ಇದನ್ನು ನೆಲಸಮಗೊಳಿಸಲು ಅನುಮತಿ ನೀಡುವಂತೆ ಆಯಾಯ ಶಾಲೆ ಮುಖ್ಯ ಶಿಕ್ಷಕರು ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು, ಹೆಚ್.ಡಿ.ಕೋಟೆ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಮನವಿ ಮಾಡಿದ್ದಾರೆ. ಈ ಮನವಿ ಪರಿಶೀಲಿಸಿ ವರದಿ ನೀಡುವಂತೆ ಹೆಚ್.ಡಿ.ಕೋಟೆ ಬಿಇಓ, ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಕಾರ್ಮಿಕರ ಭವಿಷ್ಯ ನಿಧಿ ಕುರಿತು ಮಾಹಿತಿ

ಮೈಸೂರು, ಜ.23– ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ಮೈಸೂರು ಪ್ರಾದೇಶಿಕ ಕಚೇರಿ ವತಿಯಿಂದ 'ನಿಧಿ ಆಪ್ಕೆ ನಿಕಟ್ 2.0' ಯೋಜನೆಯಡಿ ಜ.27ರಂದು ಜಿಲ್ಲಾ ವ್ಯಾಪ್ತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 9 ಗಂಟೆಗೆ ಮಂಡ್ಯದ ಕನ್ನಡ ಸಂಘ(ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್)ದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಭವಿಷ್ಯ ನಿಧಿ ಸದಸ್ಯರು, ಕಾರ್ಮಿಕರು ಭಾಗವಹಿಸಿ ಕಾರ್ಮಿಕರ ಭವಿಷ್ಯ ನಿಧಿ ಕುರಿತು ಮಾಹಿತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 0821–2599200/222ಗೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಯಡಿಯೂರಪ್ಪಗೆ ಮತ್ತೆ ರಿಲೀಫ್



ನವದೆಹಲಿ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಡಿ–ನೋಟಿಫಿಕೇಷನ್ ಪ್ರಕರಣ ಸಂಬಂಧ ನೀಡಲಾಗಿದ್ದ ಮಧ್ಯಂತರ ರಕ್ಷಣೆ ಆದೇಶವನ್ನು ರದ್ದುಗೊಳಿಸುವಂತೆ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಸೋಮವಾರ ವಜಾಗೊಳಿಸಿದೆ.

ಈ ಮೂಲಕ ಪ್ರಕರಣದಲ್ಲಿ ಯಡಿಯೂರಪ್ಪ ನವರಿಗೆ ಮತ್ತೊಮ್ಮೆ ನಿರಾಳತೆ ಸಿಕ್ಕಿದೆ. ಡಿ–ನೋಟಿಫಿಕೇಷನ್ ಪ್ರಕರಣ ಸಂಬಂಧ ಯಡಿಯೂರಪ್ಪ ಅವರನ್ನು ಬಂಧಿಸದಂತೆ ಈ ಹಿಂದೆ ಸುಪ್ರೀಂಕೋರ್ಟ್ ಮಧ್ಯಂತರ ತಡೆ ನೀಡಿತ್ತು. ಅದನ್ನು ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಆಲಂಪಾಷ ಮಧ್ಯಂತರ ಆದೇಶ ರದ್ದುಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾ.ಬಿ.ಆರ್ ಗವಾಯಿ ನೇತೃತ್ವದ ದ್ವಿಸದಸ್ಯ ಪೀಠ, ಅರ್ಜಿ ವಜಾಗೊಳಿಸಿ ಆದೇಶ ನೀಡಿದೆ. ಡಿ ನೋಟಿಫಿಕೇಶನ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮುಖ್ಯ ಅರ್ಜಿ ವಿಚಾರಣೆ ಜನವರಿ 30ರಂದು ನಡೆಯಲಿದೆ.



ಮೈಸೂರಿನ ಆರಾಧ್ಯ ಸ್ನೇಹ ಬಳಗ ಆಯೋಜಿಸಿದ್ದ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಉದ್ಘಾಟನಾ ಸಂದರ್ಭದಲ್ಲಿ ಶಾಸಕ ಎಸ್.ಎ. ರಾಮದಾಸ್ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಸ್ನೇಹ ಬಳಗದ ಸಂಘಟನಾಕಾರರಾದ ಮಲ್ಲಿಕಾರ್ಜುನ ಆರಾಧ್ಯ, ವರಲಕ್ಷ್ಮಿ ಕುಮಾರ್, ಮಧು, ಮೋಹನ್, ಆಕಾಶ್, ನಿಖಿಲ್, ಮಹೇಶ್, ಧನುಷ್, ರಾಕೇಶ್, ಮೋಹನ್ ಆರಾಧ್ಯ ಇತರರನ್ನು ಕಾಣಬಹುದು.

ನಿಶ್ಚಿತಾರ್ಥ ನಂತರ ಮದುವೆಗೆ ನಕಾರ: ಪ್ರಕರಣ ದಾಖಲು

ಮೈಸೂರು, ಜ. 23– ನಿಶ್ಚಿತಾರ್ಥ ನಂತರ ಮದುವೆಗೆ ನಿರಾಕರಿಸಿದ ಆರೋಪದ ಮೇರೆಗೆ ಬೆಂಗಳೂರಿನ ಮೂವರ ವಿರುದ್ಧ ಮೈಸೂರಿನ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಗಿರಿದರ್ಶಿನಿ ಬಡಾವಣೆಯ ಮಹಿಳೆ ಜೊತೆ ಬೆಂಗಳೂರಿನ ಶೇಷಾದ್ರಿಪುರಂ ನಿವಾಸಿ ಮಾರುತಿ ಪ್ರಸಾದ್ ಎಂಬುವರ ನಿಶ್ಚಿತಾರ್ಥವಾಗಿತ್ತು. 2022ರ ಮೇ 5ರಂದು ಖಾಸಗಿ ರೆಸಾರ್ಟ್‌ನಲ್ಲಿ ಅದ್ಧೂರಿಯಾಗಿ ನಿಶ್ಚಿತಾರ್ಥವನ್ನು ನೆರವೇರಿಸಲಾಗಿತ್ತಾದರೂ, ನಂತರ ವರನ ಕಡೆಯವರು ಮದುವೆ ನಿರಾಕರಿಸಿದ್ದಾರೆ. ಈ ಸಂಬಂಧ ಹಲವಾರು ಬಾರಿ ಮಾತುಕತೆ ನಡೆದರೂ ಯಾವುದೇ ರೀತಿಯ ಪ್ರಯೋಜನವಾಗಿಲ್ಲ. ಈ ಮಧ್ಯೆ ಜನವರಿ 26ರಂದು ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಮಾರುತಿಪ್ರಸಾದ್ ಬೇರೊಂದು ಯುವತಿಯೊಂದಿಗೆ ಮದುವೆಯಾಗಲು ತೀರ್ಮಾನಿಸಿದ್ದು, ಈ ಸಂಬಂಧ ಲಗ್ನಪತ್ರಿಕೆಯನ್ನೂ ಮುದ್ರಿಸಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದು, ನಿಶ್ಚಿತಾರ್ಥದ ನಂತರ ಮದುವೆ ಮಾಡಿಕೊಳ್ಳದೇ ನಂಬಿಕೆ ದ್ರೋಹ ಎಸಗಲಾಗಿದೆ ಎಂದು ನೀಡಿದ ದೂರಿನ ಮೇರೆಗೆ ಮಾರುತಿ ಪ್ರಸಾದ್, ನಾಗಾರ್ಜುನ ಮತ್ತು ರಾಜೇಶ್ವರಿ ಎಂಬುವರ ವಿರುದ್ಧ ಭಾರತೀಯ ದಂಡ ಸಂಹಿತೆ 406, 417, 420, 34ರಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿಷಪ್ ವಿಲಿಯಂ ವಾಪಸ್ ಕರೆಸಲು ಆಗ್ರಹ



ಮೈಸೂರು, ಜ.23(ಎಂಕೆ)– ರಜೆ ಮೇಲಿರುವ ಮೈಸೂರು ಬಿಷಪ್ ಡಾ.ಕೆ. ಆಂಟನಿ ವಿಲಿಯಂ ಅವರು ತಕ್ಷಣವೇ ಹಿಂತಿರುಗಿ ಬರಬೇಕು ಹಾಗೂ ಸಮುದಾಯಕ್ಕೆ ಕಳಂಕ ತರುತ್ತಿರುವ ಕೆಲ ಅತೃಪ್ತ ಪಾದ್ರಿಗಳಿಗೆ ತಕ್ಷಣವೇ ತಕ್ಕ ಶಿಕ್ಷೆಯಾಗಬೇಕೆಂದು ಒತ್ತಾಯಿಸಿ ಕ್ಯಾಥೋಲಿಕ್ ಅಸೋಸಿಯೇಷನ್‌ನ ಹಲವರು ಅಪೋಸ್ಟಲಿಕ್(ಧರ್ಮ ಪ್ರಚಾರಕ) ಆಡಳಿತಾಧಿಕಾರಿಗಳಾದ ಬಿಷಪ್ ಬರ್ನಾರ್ಡ್ ಮೊರಾಸ್ ಅವರಲ್ಲಿ ಮನವಿ ಮಾಡಿದ್ದಾರೆ.

ನಗರದ ಬನ್ನಿಮಂಟಪದಲ್ಲಿರುವ ಬಿಷಪ್ ಹೌಸ್‌ಗೆ ಸೋಮವಾರ ಭೇಟಿ ನೀಡಿದ ಕ್ಯಾಥೋಲಿಕ್ ಅಸೋಸಿಯೇಷನ್‌ನ ಹಲವರು, ಮೈಸೂರು ಬಿಷಪ್ ಡಾ.ಕೆ.ಆಂಟನಿ ವಿಲಿಯಂ ಅವರ ವಿರುದ್ಧ ಹಣಕಾಸಿನ ದುರುಪಯೋಗ ಮತ್ತು ಇತರೆ ಸುಳ್ಳು ಆರೋಪಗಳ ಹಿಂದೆ ಕೆಲವು ಪಾದ್ರಿಗಳ ಕೈವಾಡ ಇರುವುದು ಕಂಡು ಬಂದಿದೆ. ಬಿಷಪ್ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಆರೋಪಗಳ ಮೂಲಕ ಅವರ ತೇಜೋವಧೆ ಮಾಡುತ್ತಲೇ ಬಂದಿದ್ದಾರೆ. ಆದರೆ, ಇದುವರೆಗೂ ಉನ್ನತ ಅಧಿಕಾರಿಗಳು ಈ ವಿಚಾರದಲ್ಲಿ ಯಾವುದೇ ಸೂಕ್ತ ಕ್ರಮವನ್ನು ಜರುಗಿಸಿಲ್ಲ. ಬಿಷಪ್ ವಿಲಿಯಂರವರು ತಾವು ರಜೆ ಮೇಲೆ ತೆರಳುವುದಾಗಿ ತಿಳಿಸಿದ್ದರೂ ಬಿಷಪ್ ಅವರನ್ನು ಅಧಿಕಾರದಿಂದ ಕೆಳಗಿಳಿಸಲಾಗಿದೆ, ಹೊರದಬ್ಬಲಾಗಿದೆ ಎಂಬ ವದಂತಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಲು ಆರಂಭಿಸಿದರು. ಆಡಳಿತದಲ್ಲಿ ಪಾರದರ್ಶಕತೆ ತಂದಿರುವ ಬಿಷಪ್ ವಿಲಿಯಂ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಸಮುದಾಯದ ಜನರಿಗೆ ಅತೀವ ನೋವುಂಟು ಮಾಡಿದೆ. ಆದ್ದರಿಂದ ರಜೆ ಮೇಲಿರುವ ಬಿಷಪ್ ಅವರು ಹಿಂತಿರುಗಿ ಬರುವುದರ ಜೊತೆಗೆ ಸಮುದಾಯಕ್ಕೆ ಕಳಂಕ ತರುತ್ತಿರುವ ಕೆಲ ಅತೃಪ್ತ ಪಾದ್ರಿಗಳಿಗೆ ತಕ್ಷಣವೇ ತಕ್ಕ ಶಿಕ್ಷೆಯಾಗಬೇಕೆಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿದ ಅಪೋಸ್ಟಲಿಕ್ ಆಡಳಿತಾಧಿಕಾರಿಗಳಾದ ಬಿಷಪ್ ಬರ್ನಾರ್ಡ್ ಮೊರಾಸ್ ಈ ವಿಷಯವನ್ನು ಮೇಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದ್ದಾರೆ ಎಂದು ಕ್ಯಾಥೋಲಿಕ್ ಅಸೋಸಿಯೇಷನ್‌ನ ಕೆಲವರು ತಿಳಿಸಿದ್ದಾರೆ.

ಯುವತಿ ವಿಚಾರದಲ್ಲಿ ಯುವಕನಿಗೆ ಚಾಕು ಇರಿದ ಮೂವರ ಬಂಧನ

ವಿಜಯನಗರ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ಘಟನೆ

ಮೈಸೂರು, ಜ.23(ಆರ್‌ಕೆ)– ಯುವತಿ ವಿಚಾರದಲ್ಲಿ ನಡೆದ ಗಲಾಟೆಯಲ್ಲಿ ಮಧ್ಯೆ ಪ್ರವೇಶಿಸಿದ್ದ ಯುವಕನೋರ್ವನಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿದ್ದ, ಮೂವರನ್ನು ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ವಿಜಯನಗರ 4ನೇ ಹಂತದ ವಿನಾಯಕ(27) ಹಾಗೂ ಆತನ ಇಬ್ಬರು ಸ್ನೇಹಿತರು ಬಂಧಿತರಾಗಿದ್ದು, ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇರಿತಕ್ಕೊಳಗಾಗಿ ಗಾಯಗೊಂಡಿರುವ ಲೇಟ್ ಚಿನ್ನಪ್ಪ ಅವರ ಮಗ ಆಶಿತ(37)ನನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬಿ.ಕೆ. ಸುರೇಶ್ ಎಂಬುವರ ಮಗ ಸುಚಿತ(27) ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ. ವಿನಾಯಕ ಕಳೆದ 20 ದಿನಗಳ ಹಿಂದೆ ಆ ಯುವತಿಯನ್ನು ರೇಗಿಸಿ, ಆಕೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದ. ಈ ಸಂಬಂಧ ಸುಚಿತ ಪ್ರಶ್ನಿಸಿದಾಗ ವಿನಾಯಕ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಎನ್ನಲಾಗಿದೆ.

ಈ ವಿಷಯ ತಿಳಿದು ಮಧ್ಯೆ ಪ್ರವೇಶಿಸಿದ ಆಶಿತ, ವಿನಾಯಕನೊಂದಿಗೆ ಮಾತುಕತೆ ನಡೆಸಿ ಯುವತಿ ತಂಟೆಗೆ ಹೋಗದಂತೆ ವಾರದ ಹಿಂದಷ್ಟೇ ಎಚ್ಚರಿಕೆ ನೀಡಿದ್ದ. ಅಷ್ಟಕ್ಕೆ ಸುಮ್ಮನಾಗದ ವಿನಾಯಕ, ಭಾನುವಾರ ರಾತ್ರಿ ಫೋನ್ ಮಾಡಿ, ತಾಕತ್ತಿದ್ದರೆ ನನ್ನ ಮನೆಗೆ ಬರುವಂತೆ ಧಮ್ಕಿ ಹಾಕಿದ್ದ. ಅದರಂತೆ ರಾತ್ರಿ 8.30 ಗಂಟೆಗೆ ವಿಜಯ ನಗರ 4ನೇ ಹಂತದಲ್ಲಿರುವ ಆತನ ಮನೆಗೆ ಹೋದ ಆಶಿತನ ಮೇಲೆ ಸ್ನೇಹಿತರೊಂದಿಗೆ ಎರಗಿದ ವಿನಾಯಕ ಚಾಕುವಿನಿಂದ ಇರಿದು ಗಾಯಗೊಳಿಸಿದ. ಸ್ಥಳಕ್ಕೆ ಧಾವಿಸಿದ ವಿಜಯನಗರ ಠಾಣೆ ಇನ್‌ಸ್ಪೆಕ್ಟರ್ ರವಿಶಂಕರ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು, ಘಟನೆ ನಡೆದ ಒಂದು ಗಂಟೆಯಲ್ಲಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಆಶಿತ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೆ॥ ಫ್ಲೇರ್ ಗಾರ್ಮೆಂಟ್ಸ್ ಪ್ರೈವೇಟ್ ಲಿಮಿಟೆಡ್, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತಿನ ಮಾಲೀಕರಾಗಿರುತ್ತಾರೆ. ಸದರಿ ಮೆ॥ ಫ್ಲೇರ್ ಗಾರ್ಮೆಂಟ್ಸ್ ಪ್ರೈ., ಲಿ., ಷೆಡ್ಯೂಲ್ ಸ್ವತ್ತಿನ ಮೂಲ ದಾಖಲಾತಿಗಳನ್ನು ತಿರುಪುರ್ ಶಾಖೆಯ ಧನಲಕ್ಷ್ಮೀ ಬ್ಯಾಂಕ್ ಲಿಮಿಟೆಡ್ ರವರಲ್ಲಿ ಆಧಾರ ಮಾಡಿರುತ್ತಾರೆ ಮತ್ತು ಮೆ॥ ಓ.ಪಿ.ಎನ್. ಎಕ್ಸ್‌ಪೋರ್ಟ್ಸ್ ನ ಪ್ರೊಪ್ರೈಟರ್ ಆದ ಶ್ರೀ. ಅಭಿಷೇಕ್‌ರವರೊಂದಿಗೆ ನೋಂದಾಯಿತ ಕ್ರಯದ ಕರಾರನ್ನು ಮಾಡಿ ಕೊಂಡಿರುತ್ತಾರೆ. ಈ ಸಂಬಂಧ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು, ಮೆ॥ ಫ್ಲೇರ್ ಗಾರ್ಮೆಂಟ್ಸ್ ಪ್ರೈ., ಲಿ., ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 05 (ಐದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಅಡಕನಹಳ್ಳಿ ಗ್ರಾಮಕ್ಕೆ ಸೇರಿದ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿರುವ, ತಾಂಡವಪುರ ಗ್ರಾಮ ಪಂಚಾಯಿತಿ ಖಾತೆ ನಮೂನೆ 9 ಮತ್ತು 11 ರಂತೆ ಖಾಲಿ ನಿವೇಶನ ಸಂಖ್ಯೆ. 345/10 340/10, ಸ್ವತ್ತಿನ ಸಂಖ್ಯೆ. 152200503103020265 ರ ವಿಸ್ತೀರ್ಣ ಪೂರ್ವ–ಪಶ್ಚಿಮ; (53.55 ಮೀಟರ್+53.55 ಮೀಟರ್)/2 ಮತ್ತು ಉತ್ತರ–ದಕ್ಷಿಣ: (76.26 ಮೀಟರ್+75.40 ಮೀಟರ್)/2, ಉಳ್ಳ ಸ್ವತ್ತಿಗೆ ಚಕ್ಕುಬಂದಿ, ಪೂರ್ವಕ್ಕೆ : ಸರ್ವೆ ನಂ. 129(ಪಿ) ಮತ್ತು 130(ಪಿ)/2 ರ ಸ್ವತ್ತು, ಪಶ್ಚಿಮಕ್ಕೆ: ಸರ್ವೆ ನಂ. 130 ರಲ್ಲಿ ಖಾಸಗಿ ಸ್ವತ್ತು, ಉತ್ತರಕ್ಕೆ: ಸರ್ವೆ ನಂ. 129 ಮತ್ತು 130 ರ ಸ್ವತ್ತು ಮತ್ತು ದಕ್ಷಿಣಕ್ಕೆ: 12.00 ಮೀಟರ್ ವೈಡ್ ರಸ್ತೆ–1 ಮತ್ತು 3 ಮೀಟರ್ ನಾಲೆ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು.
ಎಸ್.ಎಲ್.ಡಿ. ಲಾ ಫರ್ಮ್, ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇ ನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ವಜೀರ್‌ಬಾಯ್ ರವರ ಮಗ ಶ್ರೀ ಕುಗಷಿಯ ಮಕ್ಸುದ್ ಉಸೇನ್ ರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 05 (ಐದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಮಂಡಿ ಮೊಹಲ್ಲಾ, 2ನೇ ಮೇನ್, ಬನ್ನಿಮಂಟಪ 'ಸಿ' ಬಡಾವಣೆಯಲ್ಲಿರುವ ಸ್ವತ್ತಿನ ಸಂಖ್ಯೆ. 389, [ಹಾಲಿ ಎಂಸಿಸಿ ಪಿಐಡಿ ಸಂಖ್ಯೆ. 91911, ವಾರ್ಡ್ ನಂ. 17], ಉಳ್ಳ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 40 ಅಡಿಗಳು ಮತ್ತು ಉತ್ತರ ದಕ್ಷಿಣ 68 ಅಡಿಗಳು, ಇದರಲ್ಲಿರ ತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ. 388, ಪಶ್ಚಿಮಕ್ಕೆ: ಸ್ವತ್ತಿನ ಸಂಖ್ಯೆ. 390/ಎ, ಉತ್ತರಕ್ಕೆ: ಸ್ವತ್ತಿನ ಸಂಖ್ಯೆ. 392 ಮತ್ತು 393, ದಕ್ಷಿಣಕ್ಕೆ: ರಸ್ತೆ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್ ಎಲ್ ಡಿ ಲಾ ಫರ್ಮ್, ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

In the Court of the V Additional Senior Civil Judge at Mysuru

O.S. No. 22 / 2021

Plaintiff: Sri Javaregowda, son of late Kadiregowda, aged about 61 years, residing at Chikkegowdana Koppalu, Yelwala Hobli, Mysuru Taluk.

V/s

Defendants: 1) Sri Krishnegowda, son of Sri Thammegowda, aged about 55 years, residing at Chikkegowdan Koppalu Village, Yelwala Hobli, Mysuru Taluk.
2) The Secretary (P.D.O.), Yelwala Grama Panchayath, Mysuru Taluk.
3) Sri Chikkegowda, son of late Kadiregowda, aged about 58 years, residing at Chikkegowdan Koppalu village, Yelwala Hobli, Mysuru Taluk.

PUBLIC NOTICE

This is to notify that the plaintiff has filed the above suit as against the defendants for the relief of declaration and permanent injunction restraining the defendants, their agents, persons or anybody acting on thier behalf from interfering with my peaceful possession and enjoyment of the plain schedule property.

The summons was issued by this court and also through R.P.A.D., Speed Post and also through hand summons to the Defendant No. 1 which was returned unserved. Now the above case is posted to appearance for your appearance. So the Defendant No. 1 is hereby summoned to appear before the court in person or through a pleader duly instructed and able to answer all material questions relating to the above said case, on the day of 10-02-2023 at 11.00 am. In default of your appearance before the court on the said date of hearing, the court will be proceedings treating you ex-parte.

Given under my hand and seal on this the 21st day of January 2023.

By Order of the Court
Sd/- Chief Ministerial Officer, Court of Senior Civil Judge and CJM, Mysuru
Sd/- Sri P.K. Ponnaiah, Sri. B.P. Vignesh
Sri. Naveen Ponnaiah, Advocates,
No. 1662/1A, First Floor, Radhamadhav Connect, Narayana Shastry Road, Beside Vathsalya Nursing Home, Mysore-570 004.
Mob: 9448773611, 9449281232
Mysore

AFFIDAVIT

I, **TANVEER S.** residing at 276, New Layout, N.R. Mohalla, Mysuru-570 007 I have changed my name from **TANVEER AMIR NAZIR** to **TANVEER S,** sworn in before Notary **A.M. Sumithra** vide affidavit dated 10-1-2023. In future, in all my documents, dealings, transactions I will be known, called and identified as **TANVEER S.**

Sd/- **Tanveer S.**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕಾಮಗಾರಿ ವಿಭಾಗ, ಮೈಸೂರು

ಸಂಖ್ಯೆ: ಕರಾಸ:ಕಾನಿಅ:ಮೈ:ಕಿಅ:692:2022–23 ದಿನಾಂಕ: 23.01.2023

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್
ಪ್ರಕಟಣೆ ಸಂ. 36/37/38/2022–23

ಕರ್ನಾಟಕ ಲೋಕೋಪಯೋಗಿ ಇಲಾಖೆ/ಸಿ.ಪಿ.ಡಬ್ಲ್ಯೂ.ಡಿ ನಲ್ಲಿ ನೋಂದಾಯಿತರಾಗಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಗಿನ ಕಾಮಗಾರಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರಕಟಣೆ ಸಂ.36, 37 ಮತ್ತು 38 ಕ್ಕೆ ಐಟಂವಾರು ಟೆಂಡರ್ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕ್ರ ಸಂ.	ಕೆಲಸದ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಮುಂಗಡ ಠೇವಣಿ ಮೊತ್ತ (ರೂಗಳಲ್ಲಿ):
1.	ಸುಬ್ರಮಣ್ಯ ಬಸ್ ನಿಲ್ದಾಣದಲ್ಲಿನ ಶೌಚಾಲಯಗಳ ದುರಸ್ಥಿ ಕಾಮಗಾರಿ (6ನೇ ಕರೆ)	8.04	20,100/–
2.	ಹನೂರು ಬಸ್ ನಿಲ್ದಾಣದಲ್ಲಿ ಶೌಚಾಲಯವನ್ನು ವಿಸ್ತರಿಸುವುದು ಮತ್ತು ಇತರೆ ಕೆಲಸಗಳನ್ನು ಕೈಗೊಳ್ಳುವ ಕಾಮಗಾರಿ (3ನೇ ಕರೆ)	6.75	16,875/–
3.	ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು, ಸಂತೇಬಾಚಹಳ್ಳಿಯಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು.	104.95	2,00,000/–

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **14.02.2023.** (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಹೆಚ್ಚಿನ ವಿವರಗಳನ್ನು ದಿನಾಂಕ: **30.01.2023**ರ ನಂತರ ಪಡೆಯಬಹುದು. 3) ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕ.ರಾ.ರ.ಸಾ.ನಿಗಮ, ಮೈಸೂರು, ನೆಲ್ಸನ್ ಮಂಡೇಲ ರಸ್ತೆ, ಬನ್ನಿಮಂಟಪ, ಮೈಸೂರು ಇಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂ: **0821–2498828.**

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಮೈಸೂರು

DIPR/CP/AAA/4274/2022-23